ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 20 ಮಂಗಳವಾರ 2022

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 243 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಮುಖ್ಯ ಶಿಕ್ಷಕರಿಂದ ನಿಂದನೆ, ಹಲ್ಲೆ ಆರೋಪ

ತರಗತಿ ಬಹಿಷ್ಕರಿಸಿ ವಿದ್ಯಾರ್ಥಿಗಳು, ಪೋಷಕರಿಂದ ಪ್ರತಿಭಟನೆ

ಮೈಸೂರು,ಡಿ.19(ಎಂಟಿವೈ)– ಮುಖ್ಯ ಶಿಕ್ಷಕರು ವಿನಾಕಾರಣ ತಮ್ಮನ್ನು ನಿಂದಿಸಿ, ಹಲ್ಲೆ ಮಾಡುತ್ತಾರೆ ಎಂದು ಆರೋಪಿಸಿ ಮೈಸೂರಿನ ಕುರ್ಗಳ್ಳಿ ಉನ್ನತೀಕರಿಸಿದ ಸರ್ಕಾರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ, ಪ್ರತಿಭಟನೆ ನಡೆಸಿದರು.

ಸೋಮವಾರ ಬೆಳಿಗ್ಗೆ ಶಾಲೆ ಆವರಣದಲ್ಲಿ ಪೋಷಕರೊಂದಿಗೆ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳು ಶಾಲಾ ಮುಖ್ಯಶಿಕ್ಷಕರು ನಿಂದಿಸುತ್ತಾರೆ. ಅಲ್ಲದೆ, ವಿನಾಕಾರಣ ಥಳಿಸುತ್ತಾರೆ, ರೇಗಾಡುತ್ತಾರೆ. ಶಾಲೆಯ ಅಭಿವೃದ್ಧಿಗಾಗಿ ಯಾವುದೇ ಕೆಲಸ ಮಾಡಿಲ್ಲ. ಎಸ್‌ಡಿಎಂಸಿ ಅಧ್ಯಕ್ಷರ ಗಮನಕ್ಕೆ ತರದೆ ಶಾಲಾ ಅನುದಾನ ದುರ್ಬಳಕೆ ಮಾಡಿಕೊಂಡಿದ್ದಾರೆ. ಕೂಡಲೇ ಇವರನ್ನು ವರ್ಗಾವಣೆ ಮಾಡಿ ಎಂದು ಪೋಷಕರು, ಸ್ಥಳೀಯರು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಶಾಲೆಯ ಮುಖ್ಯ ಶಿಕ್ಷಕಿ ಅನುಸೂಯ, ನನ್ನ ವಿರುದ್ಧ ಮಾಡಿರುವ ಆರೋಪ ನಿರಾಧಾರ. ತಪ್ಪು ಮಾಡಿದ ಮಕ್ಕಳನ್ನು ಬೈದಿದ್ದೇನೆ ತಪ್ಪಾ. ಅಂತಹ ಮಕ್ಕಳ ಮುದ್ದಾಡಬೇಕಾ. ಒಂದು ಮಾತು ಬೈದರೆ ಏನು ತಪ್ಪು ಹೇಳಿ. ಇವರು ನನ್ನನ್ನು ಉದ್ದೇಶಪೂರ್ವಕವಾಗಿ ಟಾರ್ಗೆಟ್ ಮಾಡಿ ನನ್ನ ಮೇಲೆ ಇಲ್ಲಸಲ್ಲದ ಆಪಾದನೆ ಮಾಡುತ್ತಿದ್ದಾರೆ ಎಂದು ಸ್ಪಷ್ಟಪಡಿಸಿದ್ದಾರೆ.



ಮೈಸೂರಿನ ವಾರ್ಡ್ ನಂ.3ರ ಮಹದೇಶ್ವರ ಬಡಾವಣೆ ವಿಜಯನಗರ ರೈಲ್ವೇ ಲೇಔಟ್‌ನ ಕ್ರೀಡಾಂಗಣದಲ್ಲಿ ಮೈಸೂರು ನಗರಪಾಲಿಕೆ ಸಾಮಾನ್ಯ ಅನುದಾನದಲ್ಲಿ 40 ಲಕ್ಷ ರೂಗಳ ವೆಚ್ಚದಲ್ಲಿ ವೀಕ್ಷಕರ ಗ್ಯಾಲರಿ ನಿರ್ಮಾಣ ಕಾಮಗಾರಿಗೆ ಸೋಮವಾರ ನಗರಪಾಲಿಕೆ ಸದಸ್ಯ ಕೆ.ವಿ.ಶ್ರೀಧರ ಭೂಮಿಪೂಜೆ ನೆರವೇರಿಸಿದರು. ಈ ವೇಳೆ ಸ್ಥಳೀಯ ನಿವಾಸಿಗಳಾದ ಸ್ವಾಮಿಗೌಡ, ಪಾಪಣ್ಣ, ಬಿಳಿಗೌಡ, ಸಣ್ಣಪ್ಪ, ಸಿದ್ದೇಗೌಡ, ಚೆಲುವಣ್ಣ, ಕೃಷ್ಣಪ್ಪ, ಸಂಗಣ್ಣ ಮತ್ತಿತರರು ಉಪಸ್ಥಿತರಿದ್ದರು.

ಹಳೇ ಮೈಸೂರಲ್ಲಿ ಕನಿಷ್ಠ 3 ಸಾಮಾನ್ಯ ಕ್ಷೇತ್ರಗಳಲ್ಲಿ ನಾಯಕ ಸಮುದಾಯದ ಅಭ್ಯರ್ಥಿಗಳ ಸ್ಪರ್ಧೆಗೆ ಅವಕಾಶ ಕಲ್ಪಿಸಿ

ಎಲ್ಲಾ ಪಕ್ಷಗಳಿಗೆ ನಾಯಕರ ಹಿತರಕ್ಷಣಾ ವೇದಿಕೆ ಒತ್ತಾಯ

ಮೈಸೂರು,ಡಿ.19(ಪಿಎಂ)– ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ಹಳೇ ಮೈಸೂರು ಭಾಗದ ಕನಿಷ್ಠ ಮೂರು ಸಾಮಾನ್ಯ ಕ್ಷೇತ್ರಗಳಲ್ಲಿ ನಾಯಕ ಸಮುದಾಯದ ಅಭ್ಯರ್ಥಿಗಳಿಗೆ ಎಲ್ಲಾ ರಾಜಕೀಯ ಪಕ್ಷಗಳು ಸ್ಪರ್ಧಿಸಲು ಅವಕಾಶ ನೀಡಬೇಕೆಂದು ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಒತ್ತಾಯಿಸಿದೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ, ಹಳೇ ಮೈಸೂರು ಭಾಗದಲ್ಲಿ ನಾಯಕ ಸಮುದಾಯ ಹೆಚ್ಚಿನ ಜನಸಂಖ್ಯೆ ಹೊಂದಿದೆ. ಆದಾಗ್ಯೂ ಸಮುದಾಯದ ಸ್ಪರ್ಧೆಗೆ ಪ್ರಾತಿನಿಧ್ಯ ಸೂಕ್ತವಾಗಿ ದೊರೆಯುತ್ತಿಲ್ಲ ಎಂದರು. 2008ರ ಹಿಂದೆ ನಾಯಕ ಸಮುದಾಯದ ಅಭ್ಯರ್ಥಿಗಳು ಹಳೇ ಮೈಸೂರು ಭಾಗದ ಕನಿಷ್ಠ ನಾಲ್ಕು ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಆಯ್ಕೆಯಾಗುತ್ತಿದ್ದರು. ಆದರೆ ಪ್ರಸ್ತುತ ಈ ಭಾಗದ ಸಾಮಾನ್ಯ ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಸಮುದಾಯದ ಅಭ್ಯರ್ಥಿಗಳಿಗೆ ಯಾವುದೇ ಪಕ್ಷಗಳು ಅವಕಾಶ ನೀಡುತ್ತಿಲ್ಲ. ಇದರಿಂದ ರಾಜಕೀಯವಾಗಿ ಸಮುದಾಯಕ್ಕೆ ಹಿನ್ನಡೆ ಉಂಟಾಗುತ್ತಿದೆ. ಹಾಗಾಗಿ ಎಲ್ಲಾ ರಾಜಕೀಯ ಪಕ್ಷಗಳು ಹಳೇ ಮೈಸೂರು ಭಾಗದಲ್ಲಿ ಕನಿಷ್ಠ ಮೂರು ಸಾಮಾನ್ಯ ಕ್ಷೇತ್ರಗಳಲ್ಲಿ ಸಮುದಾಯದ ಅಭ್ಯರ್ಥಿಗಳು ಸ್ಪರ್ಧಿಸಲು ಅವಕಾಶ ನೀಡಬೇಕೆಂದು ಆಗ್ರಹಿಸಿದರು.

ಮೂವರು ಮಹಿಳೆಯರೂ ಸೇರಿ ಜೂಜಾಡುತ್ತಿದ್ದ 7 ಮಂದಿ ಸೆರೆ

ಮೈಸೂರು, ಡಿ. 19(ಆರ್‌ಕೆ)– ಮೈಸೂರಿನ ಹೆಬ್ಬಾಳು ಬಡಾವಣೆ ಮನೆಯೊಂದರ ಮೇಲೆ ದಾಳಿ ಮಾಡಿದ ಸಿಸಿಬಿ ಪೊಲೀಸರು, ಅಂದರ್–ಬಾಹರ್ ಜೂಜಾಡುತ್ತಿದ್ದ ಮೂವರು ಮಹಿಳೆಯರು ಸೇರಿದಂತೆ 7 ಮಂದಿಯನ್ನು ಬಂಧಿಸಿದ್ದಾರೆ.

ಬಾತ್ಮೀದಾರರು ನೀಡಿದ ಖಚಿತ ಮಾಹಿತಿ ಆಧರಿಸಿ ಡಿ.16ರಂದು ಹೆಬ್ಬಾಳು 2ನೇ ಹಂತದ ಮನೆಯ ನೆಲಮಹಡಿಗೆ ದಾಳಿ ಮಾಡಿದಾಗ ಅಂದರ್–ಬಾಹರ್ ಜೂಜಾಟದಲ್ಲಿ ತೊಡಗಿದ್ದ ಮೂವರು ಮಹಿಳೆಯರೂ ಸೇರಿ 7 ಮಂದಿಯನ್ನು ಬಂಧಿಸಿದ ಪೊಲೀಸರು, ಪಣವಾಗಿಟ್ಟಿದ್ದ 33,500 ರೂ. ಹಣವನ್ನು ವಶಪಡಿಸಿಕೊಂಡರು.

ಡಿಸಿಪಿ ಎಂ.ಎಸ್.ಗೀತಾ ಪ್ರಸನ್ನ, ಸಿಸಿಬಿ ಘಟಕದ ಎಸಿಪಿ ಸಿ.ಕೆ. ಅಶ್ವಥನಾರಾಯಣ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ಎ.ಮಲ್ಲೇಶ್, ಎಸ್‌ಐ ಪ್ರತಿಭಾ ಜಂಗವಾಡ, ಹೆಬ್ಬಾಳು ಠಾಣೆ ಎಸ್‌ಐ ಸಹಿದಾ ಅಮ್ರಿನ್, ಸಿಬ್ಬಂದಿಗಳಾದ ರಾಜು, ಜೋಸೆಫ್ ನರೋನ್ಹಾ, ರಾದೇಶ್, ರವಿಕುಮಾರ್, ಸುಬಾನಲ್ಲಾ ಇತರರು ದಾಳಿಯಲ್ಲಿ ಪಾಲ್ಗೊಂಡಿದ್ದರು.

ನಿಧನ



ಕೀಕಿರ ನೈಲಾ ತಮ್ಮಯ್ಯ

ಲಂಡನ್‌ನ ಹ್ಯಾರೋ ನಗರದ ಪ್ರಥಮ ಏಷಿಯನ್ ಮೇಯರ್ ಆಗಿದ್ದ ದಿವಂಗತ ಕೀಕಿರ ಎ. ತಮ್ಮಯ್ಯ (ತಮ್ಮಿ) ಅವರ ಪತ್ನಿ ಕೀಕಿರಾ ನೈಲಾ ತಮ್ಮಯ್ಯ ಸೋಮವಾರ ಬೆಳಗ್ಗೆ ಲಂಡನ್ (ಯುಕೆ)ನಲ್ಲಿ ನಿಧನರಾದರು. ಅವರಿಗೆ 78 ವರ್ಷ ವಯಸ್ಸಾಗಿತ್ತು. ಶ್ರೀಯುತರು ಪುತ್ರ ಪೊನ್ನು, ಸೊಸೆ ಸುನಾಲಿ ಮತ್ತು ಮೊಮ್ಮಕ್ಕಳಾದ ಆದಿತ್ ಮತ್ತು ಅಲೋಕ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಲಂಡನ್‌ನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಎ.ಮೋಹನ್ ಬೆಲಂಕರ್

ಮೈಸೂರು,ಡಿ.19–ಮೈಸೂರಿನ ಕೆ.ಆರ್. ಮೊಹಲ್ಲಾ, ನಾರಾಯಣಶಾಸ್ತ್ರಿ ರಸ್ತೆ, ಹಳೇ ಬಂಡಿಕೇರಿ ನಿವಾಸಿ ಹಾಗೂ ಅಂಚೆ ಇಲಾಖೆ ನೌಕರ ಎ.ಮೋಹನ್ ಬೆಲಂಕರ್ (51) ಅವರು ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸರೋಜಮ್ಮ

ಮೈಸೂರಿನ ಪಡುವಾರಹಳ್ಳಿ ನಿವಾಸಿ ಲೇಟ್ ಶ್ರೀನಿವಾಸ ಅವರ ಪತ್ನಿ ಶ್ರೀಮತಿ ಸರೋಜಮ್ಮ(87) ಇಂದು ರಾತ್ರಿ ನಿಧನರಾದರು. ಅವರು ಮಾಜಿ ನಗರಪಾಲಿಕೆ ಸದಸ್ಯ ಪಿ.ಎಸ್.ಭರತೇಶ್ ಸೇರಿದಂತೆ ನಾಲ್ವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ನಾಳೆ (ಡಿ.20) ಮಧ್ಯಾಹ್ನ 12 ಗಂಟೆಗೆ ಗೋಕುಲಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಮಹದೇವಮ್ಮ



ಮೈಸೂರು ಬೋಗಾದಿಯ ಎಂಎಂಜಿ ಗ್ರೀನ್ ಲೇಔಟ್ ನಿವಾಸಿ, ವಕೀಲ ಎಂ.ಎಸ್.ಜಿನಚಂದ್ರನ್ ಅವರ ತಾಯಿ ಮಹದೇವಮ್ಮ (80) ಸೋಮವಾರ ಹೃದಯಾಘಾತದಿಂದ ನಿಧನರಾದರು. ಮೃತರಿಗೆ ಪತಿ ಶಂಕರೇಗೌಡ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಎಚ್.ಡಿ.ಕೋಟೆ ತಾಲೂಕಿನ ಮಾಗುಡಿಲು ಗ್ರಾಮದ ಅವರ ತೋಟದಲ್ಲಿ ಸಂಜೆ ನೆರವೇರಿತು.

ತೀರ್ಥಂಕರರ ಮೋಕ್ಷ ತಾಣ ಶ್ರೀ ಸಮ್ಮೇದ ಶಿಖರ್ಜಿ ಕ್ಷೇತ್ರ ಪ್ರವಾಸಿತಾಣವಾಗಿಸದಿರಲು ಆಗ್ರಹಿಸಿ

ಮೈಸೂರಲ್ಲಿ ದಿಗಂಬರ ಜೈನ ಸಮಾಜದ ಸದಸ್ಯರ ಪ್ರತಿಭಟನೆ


ಮೈಸೂರು,ಡಿ.19(ಎಂಟಿವೈ)– ಜಾರ್ಖಂಡ್‌ನ ಗಿರಿಡಿ ಜಿಲ್ಲೆಯ ಜೈನರ ಪ್ರಾಚೀನ ತೀರ್ಥಂಕರರ ಮೋಕ್ಷ ತಾಣವಾದ ಶ್ರೀ ಸಮ್ಮೇದ ಶಿಖರ್ಜಿ ಕ್ಷೇತ್ರವನ್ನು ಪ್ರವಾಸೋದ್ಯಮ ತಾಣವಾಗಿಸದಂತೆ ಆಗ್ರಹಿಸಿ ದಿಗಂಬರ ಜೈನ ಸಮಾಜದ ಸದಸ್ಯರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದಿಂದ ಸೋಮವಾರ ಪ್ರತಿಭಟನಾ ಮೆರವಣಿಗೆ ಆರಂಭಿಸಿದ ದಿಗಂಬರ ಜೈನ ಸಮಾಜದ ಸದಸ್ಯರು ಅಶೋಕ ರಸ್ತೆ, ಇರ್ವಿನ್ ರಸ್ತೆ, ಜೆಎಲ್‌ಬಿ ರಸ್ತೆ ಮೂಲಕ ಡಿಸಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು. ಸಮಾಜಕ್ಕೆ ಜೈನರ ಕೊಡುಗೆ ಅಪಾರ. ಅನಾದಿ ಕಾಲದಿಂದಲೂ ಅಹಿಂಸಾ ತತ್ವ ಬೋಧಿಸುತ್ತಿದೆ. ಈ ತತ್ವವನ್ನು ಸಾರಿದ 24 ತೀರ್ಥಂಕರರಲ್ಲಿ 20 ತೀರ್ಥಂಕರರು ತಮ್ಮ ಕೋಟ್ಯಂತರ ಮುನಿ ಸಂಘಗಳ ಜತೆಗೆ ಮೋಕ್ಷ ಪಡೆದಂತಹ ಅತ್ಯಂತ ಪವಿತ್ರ, ಪ್ರಾಚೀನ ಸ್ಥಳ ಶ್ರೀ ಸಮ್ಮೇದ ಶಿಖರ್ಜಿ. ಆದರೆ, ಈ ಸ್ಥಳವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿ ಮಾಡಲು ಅಲ್ಲಿಯ ಪ್ರವಾಸೋದ್ಯಮ ಇಲಾಖೆ ಅನುಮತಿ ನೀಡಿದೆ. ಇದರಿಂದ ಮೋಜು ಮಸ್ತಿಗೆ ಅವಕಾಶ ದೊರೆಯುವುದರಿಂದ ಈ ಕ್ಷೇತ್ರ ಅಪವಿತ್ರವಾಗಲಿದೆ. ಆದ್ದರಿಂದ ಜಾರ್ಖಂಡ್ ಸರ್ಕಾರವು ಈ ಆದೇಶವನ್ನು ವಾಪಸ್ ಪಡೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಸಮಾಜದ ಮುಖಂಡರಾದ ಎಸ್.ಡಿ.ಮಹೇಶ್ ಪ್ರಸಾದ್, ಬಿ.ಭರತ್ ರಾಜ್, ಬಿ.ಜ್ವಾಲೇಂದ್ರಪ್ರಸಾದ್, ಎಂ.ಆರ್. ಸುನೀಲ್‌ಕುಮಾರ್, ಪಿ.ಎಸ್. ಲಕ್ಷ್ಮೀಶ್‌ಬಾಬು, ಎ.ಎನ್.ಧರಣೇಂದ್ರನ್, ಕೆ.ಚಂದ್ರಶೇಖರ್ ಆರಿಗ, ಅಶೋಕ್ ಪಾಟೀಲ್ ಇನ್ನಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.




ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸಿದ್ದರಾಮಯ್ಯರ ಕೊಡುಗೆ ಅಪಾರ: ಕೆ.ಮರೀಗೌಡ

ಮೈಸೂರು, ಡಿ.19–ಚಾಮುಂಡೇಶ್ವರಿ ಕ್ಷೇತ್ರದ ಅಭಿವೃದ್ಧಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರವರ ಕೊಡುಗೆ ಅಪಾರವಾಗಿದೆ ಎಂದು ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ತಿಳಿಸಿದರು.



ಶ್ರೀರಾಂಪುರದ ಅಶ್ವಿನಿ ಕಲ್ಯಾಣ ಮಂಟಪದಲ್ಲಿ ನಡೆದ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, 1983ರಿಂದಲೂ ಸಿದ್ದರಾಮಯ್ಯನವರು ಚಾಮುಂಡೇಶ್ವರಿ ಕ್ಷೇತ್ರಕ್ಕೆ ವರುಣಾ ನಾಲೆ, ಎಲ್ಲಾ ಊರುಗಳಿಗೂ ರಸ್ತೆ, ಶಾಲೆಗಳು, ಕುಡಿಯುವ ನೀರು, ವಿದ್ಯುತ್, ಸಾರಿಗೆ ವ್ಯವಸ್ಥೆ ಸೇರಿದಂತೆ ಎಲ್ಲಾ ಮೂಲ ಸೌಲಭ್ಯಗಳನ್ನು ಮಾಡಿದ್ದಾರೆ. ಮುಖ್ಯಮಂತ್ರಿಯಾಗಿದ್ದಾಗ ಸಾವಿರಾರು ಕೋಟಿಗಳನ್ನು ಕ್ಷೇತ್ರಕ್ಕೆ ನೀಡಿದ್ದಾರೆ. 2023ಕ್ಕೆ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಕಾಂಗ್ರೆಸ್ ಪಕ್ಷ ಬರಲಿದ್ದು, ಎಲ್ಲ ಕಾರ್ಯಕರ್ತರು ಒಗ್ಗಟ್ಟಿನಿಂದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವುದರೊಂದಿಗೆ ಸಿದ್ದರಾಮಯ್ಯರವರ ಕೈ ಬಲಪಡಿಸಬೇಕು ಎಂದ ಅವರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ 2023ರ ಚುನಾವಣೆಯಲ್ಲಿ ನಾನು ಸಹ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಕಳೆದ 40 ವರ್ಷಗಳಿಂದಲೂ ನಿಷ್ಠಾವಂತ ಕಾರ್ಯಕರ್ತನಾಗಿ ಕೆಲಸ ಮಾಡಿದ್ದೇನೆ. ನನ್ನ ಮೇಲೆ ಯಾವುದೇ ಆರೋಪಗಳಿಲ್ಲದಂತೆ ಎಲ್ಲರನ್ನು ಒಗ್ಗಟ್ಟಿನಿಂದ ಕರೆದೊಯ್ಯಲು ಪ್ರಯತ್ನಿಸಿದ್ದೇನೆ. ಮುಂಬರುವ ಚುನಾವಣೆಯಲ್ಲಿ ನಿಮ್ಮೆಲ್ಲರ ಆಶೀರ್ವಾದ ನನ್ನ ಮೇಲಿರಲಿ ಎಂದು ಮನವಿ ಮಾಡಿದರು.

ಸಭೆಯಲ್ಲಿ ಜಿ.ಪಂ. ಮಾಜಿ ಸದಸ್ಯರಾದ ಜವರಪ್ಪ, ಅರುಣ್‌ಕುಮಾರ್, ತಾ.ಪಂ. ಮಾಜಿ ಅಧ್ಯಕ್ಷೆ ಮಂಜುಳಾ, ಮಂಜುನಾಥ್, ತಾ.ಪಂ. ಮಾಜಿ ಸದಸ್ಯರಾದ ಸಿದ್ದಯ, ಜಿ.ಕೆ.ಬಸವಣ್ಣ, ಮಾರ್ಬಳ್ಳಿ ಕುಮಾರ್, ಎಂ.ಟಿ.ರವಿಕುಮಾರ್, ಧನಗಳ್ಳಿ ಬಸವರಾಜ್, ಗ್ರಾ.ಪಂ. ಅಧ್ಯಕ್ಷರಾದ ಉದ್ಬೂರು ಕೃಷ್ಣ, ನಾಗವಾಲ ನರೇಂದ್ರ ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಬುಲೆಟ್ ಮಹಾದೇವ್, ಲಕ್ಷ್ಮಣ್‌ಪ್ರಭು, ಡಿ. ಸಾಲುಂಡಿ ಎಂ.ಚಂದ್ರ ಮಾಕಿ ಮಹಾದೇವ್, ನಾಡನಹಳ್ಳಿ ರವಿ, ಮಹೇಶ್, ರೇವಣ್ಣ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ, ಡಿ.ಬಿ.ನಾಗರಾಜು, ಉಮಾಶಂಕರ್, ಕೆ.ಪಿ.ಮಹಾದೇವ್, ಶಿವಭೀರಪ್ಪ, ಪ್ರಸಾದ್, ಮರೀಗೌಡ, ಶಿವರಾಜೇಗೌಡ, ನಾರಾಯಣ, ಎಫ್.ಎಂ. ಮಹೇಶ್, ನಾಗರಾಜ್, ಬಿ.ಬಸಪ್ಪ ಸಂಜೀವ್, ರಾಮಲಿಂಗು ಹಾಜರಿದ್ದರು.



ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕಿನ 2023ನೇ ಸಾಲಿನ ಕ್ಯಾಲೆಂಡರ್ ಅನ್ನು ಮೇಯರ್ ಶಿವಕುಮಾರ್ ಬಿಡುಗಡೆಗೊಳಿಸಿದರು. ಈ ವೇಳೆ ಬ್ಯಾಂಕ್ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್, ಉಪಾಧ್ಯಕ್ಷ ಡಿ.ಬಸವರಾಜು, ನಿರ್ದೇಶಕರಾದ ನಂ.ಸಿದ್ದಪ್ಪ, ತಾಯೂರು ವಿಠಲಮೂರ್ತಿ, ಎಂ.ಡಿ.ಪಾರ್ಥಸಾರಥಿ, ಹೆಚ್.ವಿ.ಭಾಸ್ಕರ್, ಅರುಣ್ ಸಿದ್ದಪ್ಪ, ಶಂಕರನಾರಾಯಣ ಶಾಸ್ತ್ರಿ, ಎಂ.ಎನ್.ನವೀನ್‌ಕುಮಾರ್, ಹೆಚ್.ವಾಸು, ಬಿ.ನಾಗರಾಜು, ಎಂ.ಪಾರ್ವತಮ್ಮ, ಹೆಚ್.ಎನ್.ಸರ್ವಮಂಗಳ, ಬ್ಯಾಂಕ್ ವ್ಯವಸ್ಥಾಪಕ ಡಿ.ಅನಂತವೀರಪ್ಪ ಉಪಸ್ಥಿತರಿದ್ದಾರೆ.

ಸುವರ್ಣಸೌಧದಲ್ಲಿ ವೀರ ಸಾವರ್ಕರ್ ಭಾವಚಿತ್ರ ಅಳವಡಿಕೆ: ಕಾಂಗ್ರೆಸ್ ವಿರೋಧ

ಬೆಂಗಳೂರು, ಡಿ. 19 (ಕೆಎಂಶಿ)–ಬೆಳಗಾವಿ ಸುವರ್ಣಸೌಧದಲ್ಲಿ ವಿವಾದಾಸ್ಪದ ಸ್ವಾತಂತ್ರ್ಯ ಹೋರಾಟಗಾರ ವೀರ ಸಾರ್ವಕರ್ ಭಾವಚಿತ್ರ ಅನಾವರಣಗೊಳಿಸಿದ್ದು, ಕಾಂಗ್ರೆಸ್ ನಾಯಕರನ್ನು ಕೆರಳಿಸಿದೆ.



ಸುವರ್ಣ ಸೌಧದ ಆವರಣದಲ್ಲಿ ಕಾಂಗ್ರೆಸ್ ನಾಯಕರು ಧರಣಿ ನಡೆಸಿ ವೀರ ಸಾವರ್ಕರ್ ಭಾವಚಿತ್ರ ಹಾಕಿರುವ ಬಗ್ಗೆ ಭಾರೀ ಆಕ್ರೋಶ ವ್ಯಕ್ತಪಡಿಸಿದರು. ಬ್ರಿಟೀಷರಲ್ಲಿ ಕ್ಷಮಾಪಣೆ ಪತ್ರ ಬರೆದಿದ್ದ, ಬ್ರಿಟೀಷರಿಂದ ಪಿಂಚಣಿ ಪಡೆಯುತ್ತಿದ್ದ ಸಾವರ್ಕರ್ ಅವರನ್ನು ರಾಷ್ಟ್ರೀಯ ನೇತಾರರಿಗೆ ಸರಿ ಸಮನಾಗಿ ನಿಲ್ಲಿಸಿರುವುದು ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿದೆ. ಬೆಳಗಾವಿಯಲ್ಲಿ ಮಹಾರಾಷ್ಟ್ರದ ಎಂ.ಇ.ಎಸ್ ಪುಂಡಾಟಿಕೆ ನಡೆಸಿ ಗಡಿ ವಿವಾದಕ್ಕೆ ಕಿಚ್ಚು ಹೊತ್ತಿಸಿರುವ ಸಂದರ್ಭದಲ್ಲಿ ಮಹಾರಾಷ್ಟ್ರದವರೇ ಆದ ಸಾವರ್ಕರ್ ಅವರ ಭಾವಚಿತ್ರ ಅನಾವರಣ ವಿಭಜಕ ಶಕ್ತಿಗಳಿಗೆ ದಾರಿಮಾಡಿಕೊಟ್ಟಂತಾಗುತ್ತದೆ ಎಂದು ಕಾಂಗ್ರೆಸ್ ನಾಯಕರು ಗಂಭೀರ ಆರೋಪ ಮಾಡಿದ್ದಾರೆ. ಈ ಬೆಳವಣಿಗೆಯಿಂದ ಮಹಾರಾಷ್ಟ್ರದ ಎಂ.ಇ.ಎಸ್. ಕೈ ಮೇಲಾಗಲಿದ್ದು, ಕನ್ನಡಿಗರಿಗೆ ಅನಾಥ ಪ್ರಜ್ಞೆ ಕಾಡಲಿದೆ ಎನ್ನುವ ಕಳವಳವೂ ಸಹ ವ್ಯಕ್ತವಾಗಿದೆ.


ರಾಷ್ಟ್ರೀಯ ನಾಯಕರ ಭಾವಚಿತ್ರಗಳನ್ನು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರೊಂದಿಗೆ ಮುಖ್ಯಮಂತ್ರಿ ಬೊಮ್ಮಾಯಿ ಅವರು ಬೆಳಗ್ಗೆ ಅನಾವರಣಗೊಳಿಸಿದರು. ವಿಶ್ವಗುರು ಬಸವೇಶ್ವರರು, ಸ್ವಾಮಿ ವಿವೇಕಾನಂದ, ರಾಷ್ಟ್ರಪಿತ ಮಹಾತ್ಮಗಾಂಧೀಜಿ, ಸ್ವಾತಂತ್ರ್ಯ ಹೋರಾಟಗಾರರಾದ ನೇತಾಜಿ ಸುಭಾಷಚಂದ್ರ ಭೋಸ್, ಸರ್ದಾರ್ ವಲ್ಲಭಬಾಯ್ ಪಟೇಲ್, ವೀರಸಾವರ್ಕರ್, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಗಳನ್ನು ಸುವರ್ಣಸೌಧದ ವಿಧಾನಸಭೆಯ ಪ್ರಾಂಗಣದಲ್ಲಿ ಅಳವಡಿಸಲಾಗಿದೆ. ನಾವು ಗಾಂಧಿ, ನೆಹರು, ಪಟೇಲ್, ಬಾಬಾ ಸಾಹೇಬ್, ಚೆನ್ನಮ್ಮ, ರಾಯಣ್ಣನ ಪರಂಪರೆಯನ್ನು ಸಾರುತ್ತೇವೆ. ಕ್ಷಮಾಪಣೆ ವೀರನ ಇತಿಹಾಸವನ್ನಾದರೂ ಸರ್ಕಾರ ಜನರ ಮುಂದೆ ಹೇಳುವ ಧೈರ್ಯ ತೋರಲಿ ಎಂದು ಹೇಳಿದ್ದಾರೆ.

ಸ್ಪೀಕರ್ ನಿರ್ಧಾರ: ಬೆಳಗಾವಿ: ಸುವರ್ಣ ವಿಧಾನಸೌಧದ ವಿಧಾನಸಭೆಯ ಸಭಾಂಗಣದಲ್ಲಿ ಸಾವರ್ಕರ್‌ಸೇರಿ ಏಳು ಮಹನೀಯರ ಭಾವಚಿತ್ರ ಹಾಕುವ ವಿಚಾರ ಸ್ಪೀಕರ್‌ಗೆ ಬಿಟ್ಟಿದ್ದು, ಅದು ಅವರ ನಿರ್ಧಾರ. ನನಗೆ ಗೊತ್ತಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ಚಳಿಗಾಲದ ಅಧಿವೇಶನದಲ್ಲಿ ಪಾಲ್ಗೊಳ್ಳಲು ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಬಂದಿಳಿದ ಅವರು, ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದರು. ಕೆಲವರ ಭಾವಚಿತ್ರ ಹಾಕಿದ ಬಗ್ಗೆ ಕಾಂಗ್ರೆಸ್ ಎತ್ತಿದ ಅಪಸ್ವರ ಹಾಗೂ ಇನ್ನೂ ಹಲವು ಮಹಾತ್ಮರ ಭಾವಚಿತ್ರ ಅಳವಡಿಸುವಂತೆ ಪತ್ರ ಬರೆದ ವಿಚಾರಗಳೂ ನನಗೆ ತಿಳಿದಿಲ್ಲ. ಈ ಬಗ್ಗೆ ಸ್ಪೀಕರ್ ಹಾಗೂ ವಿರೋಧ ಪಕ್ಷದವರೊಂದಿಗೆ ನಾನೇ ಮಾತನಾಡುತ್ತೇನೆ ಎಂದರು. ಉತ್ತರ ಕರ್ನಾಟಕದ ಸಮಸ್ಯೆಗಳು ಸಮಗ್ರವಾಗಿ ಚರ್ಚೆ ಆಗಬೇಕು. ಒಳ್ಳೆಯ ಕಾನೂನುಗಳು ರಚನೆಯಾಗಬೇಕು ಎಂಬ ಉದ್ದೇಶ ನಮಗಿದೆ. ಗಡಿ, ನೆಲ, ಜಲ ವಿವಾದಗಳು ಸೇರಿದಂತೆ ಎಲ್ಲ ವಿಷಯಗಳೂ ಸಮಗ್ರವಾಗಿ ಚರ್ಚೆ ಆಗಲಿವೆ ಎಂದು ಹೇಳಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.12.2022 ಮಂಗಳವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ,
ಕೃಷ್ಣ ಪಕ್ಷ, ತಿಥಿ: ದ್ವಾದಶಿ , ನಕ್ಷತ್ರ : ವಿಶಾಖ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ–ಡಾ.ಟಿ.ಎಸ್.ಗೋಪಾಲ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಜಿ.ಪುಷ್ಪಲತಾ, ಜಯಂತಿ ವಿ.ಭಟ್, ವ್ಯಾಖ್ಯಾನ–ಡಾ.ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ –ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 8.30 ಉಲಿ ಉಯ್ಯಾಲೆ ಸರಣಿಯ 8ನೇ ಕಾರ್ಯಕ್ರಮ 'ಕಲೆಯ ಬಲೆ', ಲೇಖನ– ಡಾ.ಎಂ.ಎಸ್.ಮೂರ್ತಿ, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.00 ಅವಧರಿಸು ಬಾ ಅಮರನಾರೇಯಣ–ಕಾರ್ಯಕ್ರಮ ಸರಣಿ, ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ– ಟಿ.ಎಸ್.ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ. ಎನ್. ರಘು **ಮಧ್ಯಾಹ್ನ:** 12.30 ದೇವರನಾಮ–ನರಸಿಂಹನಾಯಕ್ ಮತ್ತು ಬಿ.ಆರ್.ಛಾಯಾ, ಅನಂತ ಕುಲಕರ್ಣಿ, 12.45 ಭಾರತೀಯ ಕಾಲಗಣನೆ– ಮಾತನಾಡುತ್ತಾರೆ ಡಾ.ಶ್ರೀಕೃಷ್ಣಭಟ್, 1.20 ಭಾವ ಗೀತೆಗಳು–ಡಿ. ಪುಷ್ಪಲತಾ ಚಂದ್ರಹಾಸ್, 3.00 ಟಿ.ವಿ. ಶಂಕರನಾರಾಯಣನ್–ಹಾಡುಗಾರಿಕೆ, 4.00 ಕಥಾ ಕಲಕ್ಷೇಪ 'ಮೂರುವರೆ ವಜ್ರಗಳು', ಪ್ರಸ್ತುತಿ– ವಿದ್ವಾನ್ ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್‌ವಾಣಿ– ಹೂವಿನ ಕೃಷಿಯಲ್ಲಿ ಕಟ್ಟಿಕೊಂಡ ಬದುಕು–ಟಿ. ರಾಮೇಗೌಡ ಅವರೊಂದಿಗೆ ಸಂದರ್ಶನ, 9.30 ಡಾ. ಸಿ.ಎ. ಶ್ರೀಧರ್–ವೇಣುವಾದನ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನೆ, ವಾರ್ಷಿಕ ಕುಂಭಾಭಿಷೇಕ ನೂತನ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ಬೆಳಗ್ಗೆಯಿಂದ ಮಹಾಗಣಪತಿ ಪೂಜೆ, ಉಷಾಪೂಜೆ, ಪಂಚಗವ್ಯಂ, ಪಂಚಕಂ, ಕಲಶಪೂಜೆ, ಶಿವೇಲಿ, ವಾದ್ಯಂ, ಕಲಶಾಭಿಷೇಕ, ಉದಯಾಸ್ಥಮಾನ ಪೂಜೆ, ದೀಪಾರಾಧನೆ, ಅತ್ತಾಳಪೂಜೆ, ಶ್ರೀ ಭೂತ ಬಲಿ ವಿಳಕ್ಕು, ಹಲವು ವಿಶೇಷ ಪೂಜಾ ಕೈಂಕರ್ಯ, ಮಧ್ಯಾಹ್ನ 12.30 ರಿಂದ ಅನ್ನಸಂತರ್ಪಣೆ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಇಲಾಖೆ, ಕರ್ನಾಟಕ :** ವಿಶೇಷ ಕೈಮಗ್ಗ ಮೇಳ ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಕನ್ನಡ ವಿಭಾಗ, ಮಹಾರತ್ನ ಟ್ರಸ್ಟ್ :** ಅಂತರ ಕಾಲೇಜು ರಾಜ್ಯ ಮಟ್ಟದ ಭಾವಗೀತೆ ಮತ್ತು ಜನಪದ ಗೀತೆಗಳ ಗಾಯನ ಸ್ಪರ್ಧೆ, ಉದ್ಘಾಟನೆ: ಸುಗಮ ಸಂಗೀತ ಗಾಯಕ ಪ್ರೊ. ಎಸ್. ಮಲ್ಲಣ್ಣ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಪ್ರೊ. ಸೋಮಣ್ಣ, ಮುಖ್ಯ ಅತಿಥಿಗಳು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಕೆ.ವಿ. ಮಲ್ಲೇಶ್, ಪ್ರೊ. ಮೈಸೂರು ಕೃಷ್ಣಮೂರ್ತಿ, ಡಾ. ಎಸ್. ಮಂಜು, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಪಡುವಾರಹಳ್ಳಿಯ ಸ್ನೇಹ ಬಳಗ:** ಕನ್ನಡ ರಾಜ್ಯೋತ್ಸವ ಹಾಗೂ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತ ಕೆ.ಉಮಾಶಂಕರ್ ಅವರಿಗೆ ಸನ್ಮಾನ ಸಮಾರಂಭ, ಉಪಸ್ಥಿತರು : ಶಾಸಕ ಎಲ್.ನಾಗೇಂದ್ರ, ನಗರಪಾಲಿಕೆ ಸದಸ್ಯೆ ನಮ್ರತಾ ರಮೇಶ್, ಚಿಕ್ಕವೆಂಕಟು, ವಕೀಲ ಪಡುವಾರಹಳ್ಳಿ ಎಂ ರಾಮಕೃಷ್ಣ, ದಿ ಸಿಟಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು,ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸಿ.ರೇವಣ್ಣ, ಸ್ಥಳ: ವಾಲ್ಮೀಕಿ ರಸ್ತೆ ನಾಮ ಫಲಕದ ಬಳಿ, ಬೆಳಗ್ಗೆ 10.30ಕ್ಕೆ.

■ **ಅಖಿಲ ಭಾರತೀಯ ಗ್ರಾಹಕ ಪಂಚಾಯತ್, ಮೈಸೂರು ಘಟಕ, ತೂಕ ಮತ್ತು ಅಳತೆ ಇಲಾಖೆ, ಅರಿವು ಸಂಸ್ಥೆ :** ವಿಶ್ವ ಗ್ರಾಹಕರ ದಿನಾಚರಣೆ ಅಂಗವಾಗಿ ಗ್ರಾಹಕರಲ್ಲಿ ತೂಕ ಮತ್ತು ಅಳತೆಯ ಗ್ರಾಹಕರ ಜಾಗೃತಿ ಅಭಿಯಾನ, ಮುಖ್ಯ ಅತಿಥಿಗಳು : ತೂಕ ಮತ್ತು ಅಳತೆ ಇಲಾಖೆಯ ನಿರೀಕ್ಷಕ ಎಚ್ ನಿತ್ಯಾನಂದ, ಮೈಸೂರು ನಗರ ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಉಮೇಶ್, ಹಿರಿಯ ಸಮಾಜ ಸೇವಕರಾದ ಕೆ ರಘುರಾವ್ ವಾಜಪೇಯಿ, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ಡಾ ಜಿ ವಿ ರವಿಶಂಕರ್, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ದೇವರಾಜ ಮಾರುಕಟ್ಟೆ ಮುಂಭಾಗ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ:** ಕೆ.ಮರೀಗೌಡರ ಹುಟ್ಟುಹಬ್ಬದ ಅಂಗವಾಗಿ ಪೌರಸೇನಾನಿ, ಸಾಹಿತಿ ಮತ್ತು ಚಿಂತಕರೊಂದಿಗೆ ಸಹಪಂಕ್ತಿ ಭೋಜನ, ಅಭಿನಂದನಾ ಸಮಾರಂಭ, ಉದ್ಘಾಟನೆ : ಚಿಂತಕ ಪ್ರೊ.ಬಿ.ಪಿ. ಮಹೇಶ್‌ಚಂದ್ರ ಗುರು, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಭಿನಂದಿಸುವವರು : ಸಾಹಿತಿ ಪ್ರೊ. ಕೆ.ಎಸ್. ಭಗವಾನ್, ಮಾಜಿ ಮೇಯರ್ ನಾರಾಯಣ್, ಆಶಯ ಭಾಷಣ : ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು, ಸ್ಥಳ: ಪುನೀತ್ ಕನ್ವೆಷನ್ ಹಾಲ್, ರಾಮಕೃಷ್ಣನಗರ, ಮಧ್ಯಾಹ್ನ 2ಕ್ಕೆ.

■ **ನಯನಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ :** ಸಾಮಾನ್ಯ ಸ್ತ್ರೀ ರೋಗ ಮತ್ತು ಸ್ತನದ ಕ್ಯಾನ್ಸರ್ ತಪಾಸಣೆ ಶಿಬಿರ, ಸ್ಥಳ: ನಯನ ಕುಮಾರ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ದಟ್ಟಗಳ್ಳಿ 3ನೇ ಹಂತ, ಮಧ್ಯಾಹ್ನ 3ರಿಂದ.

■ **ಶ್ರೀ ಆಂಡಾಳ್ ಮಂದಿರಂ ಟ್ರಸ್ಟ್, ಹೆಬ್ಬಾರ್ ಶ್ರೀ ವೈಷ್ಣವ ಗ್ರಾಮಾಂತರ ಉಪಸಭೆ :** ಧನುರ್ಮಾಸದ ಪ್ರಯುಕ್ತ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ಶ್ರೀ ಆಂಡಾಳ್ ವಿರಚಿತ 'ತಿರುಪ್ಪಾವೈ' ಪ್ರವಚನ, ಸ್ಥಳ: ಮಂದಿರದ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್.ವನಂ :** ಡಾ. ಎನ್.ಕೆ. ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ. ಕಮಲರಾಮನ್‌ರವರ ಮಂದಿರ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಮಹಾಜನ ಸಭಾ :** ತಿರುಪ್ಪಾವೈ ಕಾಲಕ್ಷೇಪ, ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ, ಸ್ಥಳ: ಶ್ರೀ ರಾಮಮಂದಿರ, ಶ್ರೀ ಕೃಷ್ಣಮೂರ್ತಿಪುರಂ, ಸಂಜೆ 6.15ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ, ವಿದುಷಿ ಬಿ.ಕೆ. ಸೀತಾಲಕ್ಷ್ಮೀ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಾಯಿಬಾಬಾ ಮಂದಿರ ಸಮೀಪ, ಸಂಜೆ 6.30ರಿಂದ.

■ **ಗಾನಭಾರತೀ :** ಗಾನಭಾರತೀ ವಿದ್ಯಾರ್ಥಿಗಳಿಂದ ಕೌಶಲ ಪ್ರದರ್ಶನ, ಸಂಜೆ 6 ರಿಂದ ವಿದ್ವಾನ್ ಎನ್.ವಿ. ಸತ್ಯನಾರಾಯಣರವರ ವಿದ್ಯಾರ್ಥಿಗಳಿಂದ ವೇಣು ವಾದನ, ಎಂ.ಸಿ. ಸಮುಖಶೇಷ–ಮೃದಂಗ, ಸಂಜೆ 7 ರಿಂದ ವಿದುಷಿ ವಿ. ಸುಮ ಹಾಗೂ ಎಂ.ಬಿ. ನಾಗಶ್ರೀ ಅವರ ವಿದ್ಯಾರ್ಥಿಗಳಿಂದ ಭರತನಾಟ್ಯ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

ಗೋಪಾಲಪುರದಲ್ಲಿಂದು, ಮೈಸೂರು ತಾಲೂಕು

■ **ಮೈಸೂರು ವಿಶ್ವವಿದ್ಯಾನಿಲಯ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರೋಪ ಭಾಷಣ : ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಗುಂಡಪ್ಪಗೌಡ, ವಿಶೇಷ ಆಹ್ವಾನಿತರು : ಎಸ್. ಸಿದ್ದೇಗೌಡ, ಬೀರಿಹುಂಡಿ ಬಸವಣ್ಣ, ಶ್ರೀಶೈಲರಾಮಣ್ಣವರ್, ಟಿ. ನಾಗರಾಜು, ಬೆಳಗ್ಗೆ 11.30ಕ್ಕೆ.

ನಾಗವಾಲದಲ್ಲಿಂದು, ಮೈಸೂರು ತಾಲೂಕು

■ **ಜಿಲ್ಲಾ ಪಂಚಾಯತ್, ತಾಪಂ, ನಾಗವಾಲ ಗ್ರಾಮ ಪಂಚಾಯಿತಿ :** ಘನತ್ಯಾಜ್ಯ ಸಂಸ್ಕರಣಾ ಘಟಕ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಅಧ್ಯಕ್ಷತೆ : ನಾಗವಾಲ ಗ್ರಾಪಂ ಅಧ್ಯಕ್ಷ ಸಿ. ನರೇಂದ್ರ, ಮುಖ್ಯ ಅತಿಥಿಗಳು : ಪ್ರೇಮ್‌ಕುಮಾರ್, ಹೆಚ್.ಡಿ. ಗಿರೀಶ್, ಎನ್.ಕೆ.ಶರ್ಮ, ಶ್ರೀಮತಿ ನಳಿನಿ ಶೇಖರ್, ಬೆಳಗ್ಗೆ 9.30ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 20 ಮಂಗಳವಾರ 2022

ಸಂಪುಟ: 43 | ಸಂಚಿಕೆ: 243 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



‘ಪ್ರಸಾದ’ದಡಿ ಚಾಮುಂಡಿಬೆಟ್ಟದ ಸಮಗ್ರ ಅಭಿವೃದ್ಧಿ; 48.3 ಕೋಟಿ ರೂ. ಯೋಜನೆಗೆ ಕೇಂದ್ರದ ಅಸ್ತು

ಏಳು ವಿಭಾಗಗಳಲ್ಲಿ ರಾಜ್ಯ ಪ್ರವಾಸೋದ್ಯಮ ಇಲಾಖೆಯಿಂದ ಕಾಮಗಾರಿ

ಮೈಸೂರು, ಡಿ. 19(ಆರ್‌ಕೆ)–ಮೈಸೂರಿನ ಚಾಮುಂಡಿ ಬೆಟ್ಟದ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವನೆಗೆ ‘ಪ್ರಸಾದ’ ಯೋಜನೆಯಡಿ 48.3 ಕೋಟಿ ರೂ. ವೆಚ್ಚದ ಕಾಮಗಾರಿ ಕೈಗೊಳ್ಳಲು ಕೇಂದ್ರ ಸರ್ಕಾರ ಕಡೆಗೂ ಅನುಮೋದನೆ ನೀಡಿದೆ.

ಪಿಲಿಗ್ರಿಮೇಜ್ ರಿಜುವಿನೇಷನ್ ಅಂಡ್ ಸ್ಪಿರಿಚ್ಯುಯಲ್, ಹೆರಿಟೇಜ್ ಆಗ್‌ಮೆಂಟೇಷನ್ ಡ್ರೈವ್ (ಪ್ರಸಾದ್) ಯೋಜನೆಯಡಿ ಚಾಮುಂಡಿಬೆಟ್ಟದಲ್ಲಿ ಭಕ್ತಾದಿಗಳು ಹಾಗೂ ಪ್ರವಾಸಿಗರ ಅನುಕೂಲಕ್ಕಾಗಿ ಕೈಗೊಳ್ಳಲು ಉದ್ದೇಶಿಸಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಕೇಂದ್ರ ಸರ್ಕಾರವು 48.3 ಕೋಟಿ ರೂ. ಅನುದಾನಕ್ಕೆ ಅನುಮೋದನೆ ನೀಡಿದ್ದು, ಈ ಸಂಬಂಧ ನಾಲ್ಕು ದಿನದಲ್ಲಿ ಅಧಿಕೃತ ಆದೇಶ ಹೊರಬೀಳಲಿದೆ.

2021ರಲ್ಲಿ ಬೆಂಗಳೂರಲ್ಲಿ ಜರುಗಿದ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವರ ಸಮ್ಮೇಳನದಲ್ಲಿ ಈ ಕುರಿತು ಸಮಗ್ರ ಚರ್ಚೆ ನಡೆದ ನಂತರ ಚಾಮುಂಡಿಬೆಟ್ಟದ ಅಭಿವೃದ್ಧಿ ಸಂಬಂಧ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸಂಸದ ಪ್ರತಾಪ್ ಸಿಂಹ ಅವರ ನಿರಂತರ ಪ್ರಯತ್ನದಿಂದಾಗಿ ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು ‘ಪ್ರಸಾದ’ ಯೋಜನೆಯಡಿ 48.3 ಕೋಟಿ ರೂ. ಅನುದಾನ ನೀಡಲು ಒಪ್ಪಿಗೆ ನೀಡಿದೆ.

ಸಂಪೂರ್ಣ ಕೇಂದ್ರ ಸರ್ಕಾರದ ಯೋಜನೆಯಾದ ಪ್ರಸಾದ ಅಡಿ 100 ಕೋಟಿ ರೂ.ವರೆಗೆ ದೇವಸ್ಥಾನಗಳ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡಲು ಅವಕಾಶವಿದ್ದು, ಯಾತ್ರಾರ್ಥಿಗಳಿಗೆ ಮೂಲ ಸೌಲಭ್ಯ ಕಲ್ಪಿಸಲೆಂದು ಕೇಂದ್ರ ಸರ್ಕಾರವು 2014–15ನೇ ಸಾಲಿನಲ್ಲಿ ಈ ಯೋಜನೆಯನ್ನು ಜಾರಿಗೆ ತಂದಿತ್ತು. ಅದರಂತೆ ಯಾತ್ರಾಸ್ಥಳಗಳ ಸೌಂದರ್ಯೀಕರಣ ಮತ್ತು ಸಮಗ್ರ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ರಾಜ್ಯ ಪ್ರವಾಸೋದ್ಯಮ ಇಲಾಖೆ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಿ ಇದೀಗ 48.3 ಕೋಟಿ ರೂ. ಅನುದಾನ ನೀಡಿ 7 ವಿಭಾಗಗಳನ್ನಾಗಿ ಮಾಡಿ ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ. ಈ ಸಂಬಂಧ ಆದೇಶ ಪ್ರತಿ ಕೈಸೇರುತ್ತಿದ್ದಂತೆಯೇ ಪ್ರವಾಸೋದ್ಯಮ ಇಲಾಖೆಯು ಕಾಮಗಾರಿಗೆ ಟೆಂಡರ್ ಪ್ರಕ್ರಿಯೆ ಆರಂಭಿಸಲಿದೆ ಎಂದು ಇಲಾಖೆ ಡೆಪ್ಯುಟಿ ಡೈರೆಕ್ಟರ್ (ಆಡಳಿತ) ಅನಿತಾ ಭಾಸ್ಕರ್ ತಿಳಿಸಿದ್ದಾರೆ.

ಪ್ರಸ್ತಾವನೆಯಂತೆ ಚಾಮುಂಡೇಶ್ವರಿ ದೇವಸ್ಥಾನ ಮತ್ತು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಿ ಸೌಂದರ್ಯೀಕರಣಗೊಳಿಸುವುದು, ನಂದಿ ಪ್ರತಿಮೆ, ದೇವಿಕೆರೆ ಅಭಿವೃದ್ಧಿ, ಬೆಟ್ಟದ ಮೇಲೆ ಮಹಿಷಾಸುರ ಪ್ರತಿಮೆ ಸರ್ಕಲ್‌ನಿಂದ ▶ 9ನೇ ಪುಟಕ್ಕೆ

● ಸೂಚನಾ ಫಲಕಗಳು ● ಸ್ಮಾರ್ಟ್ ಪಾರ್ಕಿಂಗ್ ಸೌಲಭ್ಯ ● ಸೆಂಟ್ರಲೈಸ್ಡ್ ಟಿಕೆಟ್ ಸಿಸ್ಟಂ ● ಸಾಲುಗಟ್ಟಿ ನಿಲ್ಲಲು ಭಕ್ತಾದಿಗಳಿಗೆ ಸುರಕ್ಷಾ ಕ್ರಮ ● ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸುಸಜ್ಜಿತ ವೇದಿಕೆ ನಿರ್ಮಾಣ ● ಪೊಲೀಸ್ ಮಾಹಿತಿ ಚೌಕಿ ● ವಸ್ತು ಸಂಗ್ರಹಾಲಯ ● ಮೈಸೂರು ಇತಿಹಾಸ ● ದಸರಾ ಪರಂಪರೆ ಅರಸರ ಆಳ್ವಿಕೆ ವೈಭವ ಸೇರಿದಂತೆ ಇಲ್ಲಿನ ಪರಂಪರೆಯನ್ನು ಬಿಂಬಿಸುವ ಆಡಿಯೋ ವಿಷ್ಯುಯಲ್ ವ್ಯವಸ್ಥೆಯನ್ನು ಈ ಯೋಜನೆಯಡಿ ಕಲ್ಪಿಸಲು ಉದ್ದೇಶಿಸಲಾಗಿದೆ.

ಕಾಂಗ್ರೆಸ್ ಪ್ರಚಾರ ಸಮಿತಿಗೆ ಮತ್ತೆ 11 ಮಂದಿ ಸೇರ್ಪಡೆ

ಬೆಂಗಳೂರು, ಡಿ. 19 (ಕೆಎಂಶಿ)– ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಚಾರ ಸಮಿತಿಗೆ ಮತ್ತೆ 11 ನಾಯಕರನ್ನು ಸೇರ್ಪಡೆ ಮಾಡಿ ಆದೇಶ ಹೊರಡಿಸಲಾಗಿದೆ. ಕಳೆದ ಬುಧವಾರ ಒಟ್ಟು 36 ಮಂದಿ ನಾಯಕರನ್ನು ಒಳಗೊಂಡ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಾಗಿತ್ತು. ಇದೀಗ ಅದಕ್ಕೆ ಮತ್ತೆ 11 ಮುಖಂಡರು ಸೇರ್ಪಡೆಯಾಗಿದ್ದಾರೆ. ಈ ಮೂಲಕ 47 ಮಂದಿ ಸದಸ್ಯರ ಬಲವನ್ನು ಚುನಾವಣಾ ಪ್ರಚಾರ ಸಮಿತಿ ಪಡೆದಂತಾಗಿದೆ.

ಬಿ.ಎಲ್. ಶಂಕರ್, ಪರಮೇಶ್ವರ್ ನಾಯಕ್, ಉಮಾಶ್ರೀ, ರಮೇಶ್ ಕುಮಾರ್, ಹೆಚ್.ಎಂ. ರೇವಣ್ಣ ಎ.ಎಂ. ಹಿಂಡಸಗೇರಿ, ಜಮೀರ್ ಅಹಮದ್ ಖಾನ್, ಶಿವಾನಂದ ಪಾಟೀಲ್, ಶರಣಬಸಪ್ಪಗೌಡ ▶ 9ನೇ ಪುಟಕ್ಕೆ

ಜೆಡಿಎಸ್ 93 ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟ


● ಹೆಚ್.ಡಿ.ಕುಮಾರಸ್ವಾಮಿ–ಚನ್ನಪಟ್ಟಣ ● ನಿಖಿಲ್‌ಕುಮಾರಸ್ವಾಮಿ–ರಾಮನಗರ
● ಜಿ.ಟಿ.ದೇವೇಗೌಡ–ಚಾಮುಂಡೇಶ್ವರಿ ● ಜಿ.ಡಿ.ಹರೀಶ್‌ಗೌಡ–ಹುಣಸೂರು
● ಸಾರಾ ಮಹೇಶ್–ಕೆ.ಆರ್.ನಗರ ● ಕೆ.ಮಹದೇವ್–ಪಿರಿಯಾಪಟ್ಟಣ
● ಅಶ್ವಿನ್‌ಕುಮಾರ್–ಟಿ.ನರಸೀಪುರ ● ಸಿ.ಎಸ್.ಪುಟ್ಟರಾಜು–ಮೇಲುಕೋಟೆ
● ಸುರೇಶ್‌ಗೌಡ–ನಾಗಮಂಗಲ ● ಡಾ.ರವೀಂದ್ರ ಶ್ರೀಕಂಠಯ್ಯ–ಶ್ರೀರಂಗಪಟ್ಟಣ
● ಎಂ.ಶ್ರೀನಿವಾಸ್–ಮಂಡ್ಯ ● ಡಿ.ಸಿ.ತಮ್ಮಣ್ಣ–ಮದ್ದೂರು ● ಡಾ.ಕೆ.ಅನ್ನದಾನಿ–ಮಳವಳ್ಳಿ



ಹೆಚ್.ಡಿ.ರೇವಣ್ಣ ಸೇರಿದಂತೆ ಹಾಸನ ಭಾಗದ ಅಭ್ಯರ್ಥಿಗಳಿಗೆ ಮೊದಲ ಪಟ್ಟಿಯಲ್ಲಿ ಅವಕಾಶವಿಲ್ಲ

ಬೆಂಗಳೂರು, ಡಿ. 19 (ಕೆಎಂಶಿ)– ರಾಷ್ಟ್ರೀಯ ಪಕ್ಷಗಳಿಗೂ ಮೊದಲೇ ಜಾತ್ಯಾತೀತ ಜನತಾದಳ 93 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದೆ. 2023ರ ಏಪ್ರಿಲ್–ಮೇ ತಿಂಗಳಲ್ಲಿ ಜರುಗಲಿರುವ ಚುನಾವಣೆಗೆ ಮೊದಲ ಹಂತದ ಪಟ್ಟಿಯನ್ನು ಇಂದಿಲ್ಲಿ ಬಿಡುಗಡೆ ಮಾಡಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ತಮ್ಮ ಹಿರಿಯ ಸಹೋದರ ಹೆಚ್.ಡಿ.ರೇವಣ್ಣ ಸೇರಿದಂತೆ ಹಾಸನ ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳಿಗೆ ಮೊದಲ ಪಟ್ಟಿಯಲ್ಲಿ ಅವಕಾಶ ನೀಡಿಲ್ಲ.

ಪುತ್ರ ನಿಖಿಲ್ ಕುಮಾರಸ್ವಾಮಿ ರಾಮನಗರ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ಮಾಡಿ ಕೊಟ್ಟಿದ್ದರೆ, ತಾವು, ಚನ್ನಪಟ್ಟಣದಿಂದ ಮರು ಆಯ್ಕೆ ಬಯಸಿದ್ದಾರೆ. ಹಳೇ ಮೈಸೂರು ಭಾಗದ ಶೇಕಡ 70 ರಷ್ಟು ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದ್ದು, ಇದರಲ್ಲಿ ಹಾಲಿ ನಾಲ್ವರು ಶಾಸಕರಿಗೆ ಒಂದಲ್ಲ ಒಂದು ಕಾರಣಕ್ಕೆ ಕೈಬಿಟ್ಟು ಹೊಸಬರಿಗೆ ಅವಕಾಶ ಮಾಡಿದ್ದಾರೆ. ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಜೊತೆಗೂಡಿ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಪಟ್ಟಿ ಬಿಡುಗಡೆ ಮಾಡಿದ ಕುಮಾರಸ್ವಾಮಿ, ಪಕ್ಷದ ಹಿರಿಯ ನಾಯಕ ಜಿ.ಟಿ. ದೇವೇಗೌಡ, ಚಾಮುಂಡೇಶ್ವರಿ ಕ್ಷೇತ್ರದಿಂದಲೂ, ಅವರ ಪುತ್ರ ಹರೀಶ್‌ಗೌಡ ಹುಣಸೂರು ಕ್ಷೇತ್ರದಿಂದ ಕಣಕ್ಕಿಳಿಯಲಿದ್ದಾರೆ ಎಂದರು.



ಕುಮಾರಸ್ವಾಮಿ | ನಿಖಿಲ್ | ಜಿ.ಟಿ.ದೇವೇಗೌಡ | ಜಿ.ಡಿ.ಹರೀಶ್‌ಗೌಡ
ಸಾರಾ ಮಹೇಶ್ | ಕೆ.ಮಹದೇವು | ಅಶ್ವಿನ್‌ಕುಮಾರ್ | ಸಿ.ಎಸ್.ಪುಟ್ಟರಾಜು
ಕೆ.ವಿ.ಮಲ್ಲೇಶ್ | ಅಭಿಷೇಕ್ | ಹೆಚ್.ಟಿ.ಮಂಜುನಾಥ್ | ಎಂ.ಆರ್.ಮಂಜುನಾಥ್
ಸುರೇಶ್‌ಗೌಡ | ರವೀಂದ್ರ ಶ್ರೀಕಂಠಯ್ಯ | ಶ್ರೀನಿವಾಸ್ | ಡಿ.ಸಿ.ತಮ್ಮಣ್ಣ | ಅನ್ನದಾನಿ

ಪಂಚರತ್ನ ಯಾತ್ರೆ ಪೂರ್ಣಗೊಳ್ಳುವ ಮುನ್ನವೇ 2ನೇ ಪಟ್ಟಿ ಬಿಡುಗಡೆ ಮಾಡುವುದಾಗಿ ತಿಳಿಸಿದ ಕುಮಾರಸ್ವಾಮಿ ನಂತರ ಅಗತ್ಯ ಕಂಡು ಬಂದರೆ 3ನೇ ಪಟ್ಟಿಯು ಹೊರ ಬರಲಿದೆ. ಮಂಡ್ಯ, ಮೈಸೂರು, ಜಿಲ್ಲೆಯಲ್ಲಿನ ಹಾಲಿ ಪಕ್ಷದ ಎಲ್ಲಾ ಶಾಸಕರಿಗೂ ಮತ್ತೆ ಸ್ಪರ್ಧಿಸಲು ಅವಕಾಶ ಮಾಡಿಕೊಡಲಾಗಿದೆ. ಮಾಜಿ ಸಚಿವ ಸಾ.ರಾಮಹೇಶ್ (ಕೆಆರ್ ನಗರ), ಕೆ.ಮಹದೇವು (ಪಿರಿಯಾಪಟ್ಟಣ), ಹೆಚ್.ಟಿ. ಮಂಜುನಾಥ್ (ಕೆಆರ್ ಪೇಟೆ), ಅಶ್ವಿನ್‌ಕುಮಾರ್ (ಟಿ.ನರಸೀಪುರ), ಅಭಿಷೇಕ್ (ವರುಣ), ಮಲ್ಲೇಶ್ (ಕೃಷ್ಣರಾಜ), ಮಂಜುನಾಥ್ (ಹನೂರು), ವಿಧಾನಸಭೆಯ ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ ಬಂಡೆಪ್ಪ ಕಾಶೆಂಪೂರ್ (ಬೀದರ್ ದಕ್ಷಿಣ) ಕ್ಷೇತ್ರದಿಂದ ಕಣಕ್ಕಿಳಿಯಲು ಅವಕಾಶ ಮಾಡಿಕೊಟ್ಟಿದ್ದಾರೆ.

ಉಳಿದಂತೆ ಪಟ್ಟಿ ಇಂತಿದೆ

ನಾಗಮಂಗಲ: ಸುರೇಶ್‌ಗೌಡ
ಶ್ರೀರಂಗಪಟ್ಟಣ: ಡಾ.ರವೀಂದ್ರ ಶ್ರೀಕಂಠಯ್ಯ
ಮಂಡ್ಯ: ಎಂ.ಶ್ರೀನಿವಾಸ್
ಮೇಲುಕೋಟೆ : ಸಿ.ಎಸ್. ಪುಟ್ಟರಾಜು
ಮದ್ದೂರು: ಡಿ.ಸಿ.ತಮ್ಮಣ್ಣ
ಮಳವಳ್ಳಿ: ಡಾ.ಕೆ.ಅನ್ನದಾನಿ
ಮಾಗಡಿ: ಎ.ಮಂಜುನಾಥ್
ನೆಲಮಂಗಲ: ಶ್ರೀನಿವಾಸಮೂರ್ತಿ
ದೇವನಹಳ್ಳಿ: ನಿಸರ್ಗ ನಾರಾಯಣಸ್ವಾಮಿ
▶ 9ನೇ ಪುಟಕ್ಕೆ

ಕಬ್ಬು, ಹಾಲಿಗೆ ಬೆಂಬಲ ಬೆಲೆಗೆ ಆಗ್ರಹಿಸಿ

ಮಂಡ್ಯ ಬಂದ್ ಭಾಗಶಃ ಯಶಸ್ವಿ

● ಮಧ್ಯಾಹ್ನದವರೆಗೆ ವ್ಯಾಪಕ ಬೆಂಬಲ ● ಬಾರೀ ಪ್ರತಿಭಟನೆ ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಕೆ



ಮಂಡ್ಯ, ಡಿ.19– ಕಬ್ಬು ಹಾಗೂ ಹಾಲಿಗೆ ಬೆಂಬಲ ಬೆಲೆ ನೀಡುವಂತೆ ಆಗ್ರಹಿಸಿ ರಾಜ್ಯ ರೈತ ಸಂಘ, ವಿವಿಧ ಕನ್ನಡ ಪರ ಹಾಗೂ ಪ್ರಗತಿಪರ ಸಂಘಟನೆಗಳು ಕರೆ ನೀಡಿದ್ದ ಮಂಡ್ಯ ನಗರ ಬಂದ್ ಭಾಗಶಃ ಯಶಸ್ವಿಯಾಗಿದ್ದು, ಸಾವಿರಾರು ಮಂದಿ ಮಂಡ್ಯ ನಗರದಲ್ಲಿ ಪ್ರತಿಭಟನೆ ನಡೆಸುವ ಮೂಲಕ ಸರ್ಕಾರಕ್ಕೆ ಬಿಸಿ ಮುಟ್ಟಿಸಿದರು. ಈ ಮಧ್ಯೆ ಮದ್ದೂರು ಹಾಗೂ ಕೆ.ಎಂ. ದೊಡ್ಡಿಯಲ್ಲೂ ಕರೆ ನೀಡಿದ್ದ ಬಂದ್ ಸಂಪೂರ್ಣ ಯಶಸ್ವಿಯಾಗಿದೆ.

ಒಂದು ತಿಂಗಳಿಂದ ಮಂಡ್ಯ ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಬಳಿ ಕಬ್ಬು ಹಾಗೂ ಹಾಲಿಗೆ ಬೆಂಬಲ ಬೆಲೆ ನೀಡಬೇಕೆಂದು ಆಗ್ರಹಿಸಿ, ರೈತರು ನಿರಂತರ ಧರಣಿ ನಡೆಸುತ್ತಿದ್ದರೂ ಏನು ಪ್ರಯೋಜನವಾಗಿರಲಿಲ್ಲ. ಪ್ರತಿಭಟನಾ ಸ್ಥಳಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಕೆ.ಗೋಪಾಲಯ್ಯ, ನಾರಾಯಣಗೌಡ ಹಾಗೂ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಭೇಟಿ ನೀಡಿ, ಬೆಂಬಲ ನೀಡಿದ್ದರು. ಜೊತೆಗೆ ಅನೇಕ ಪ್ರಗತಿಪರ, ರೈತ ಪರ, ಕನ್ನಡ ಪರ ಹೋರಾಟಗಾರರು ಬೆಂಬಲ ಸೂಚಿಸಿದ್ದರು. ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇತ್ತೀಚೆಗೆ ಮಂಡ್ಯ ನಗರಕ್ಕೆ ಭೇಟಿ ನೀಡಿದ್ದರೂ ಪ್ರತಿಭಟನಾಕಾರರ ಭೇಟಿ ಮಾಡಿರಲಿಲ್ಲ. ಸಿಎಂ ಭೇಟಿ ಮಾಡಲು ರೈತರು ತೆರಳಿದರೂ ಅವಕಾಶ ಸಿಕ್ಕಿರಲಿಲ್ಲ. ಮಂಡ್ಯಕ್ಕೆ ಬಂದರೂ ಕಬ್ಬಿಗೆ ಬೆಂಬಲ ಬೆಲೆ ನಿಗದಿ ಸಂಬಂಧ ಸಿಎಂ ಏನೂ ಹೇಳಿರಲಿಲ್ಲ. ಇದರಿಂದ ರೊಚ್ಚಿಗೆದ್ದ ರೈತರು ಇಂದು ಮಂಡ್ಯ ನಗರ ಬಂದ್‌ಗೆ ಕರೆ ನೀಡಿದ್ದರು. ಬೆಳಗ್ಗೆ 11ಕ್ಕೆ ನಗರದ ಸಂಜಯ ವೃತ್ತದ ಬಳಿ ಜಮಾಯಿಸಿದ ರೈತ ಸಂಘದ ಮುಖಂಡರು, ರೈತರು, ಕನ್ನಡ ಪರ, ಪ್ರಗತಿಪರ ಸಂಘಟನೆಗಳು, ಕಾಲೇಜು ವಿದ್ಯಾರ್ಥಿಗಳು ರಸ್ತೆ ತಡೆ ನಡೆಸಿದರು. ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಎತ್ತಿನಗಾಡಿ ಮೆರವಣಿಗೆ, ಲಾರಿಯಲ್ಲಿ ಕಬ್ಬು ತುಂಬಿಕೊಂಡು ಮೆರವಣಿಗೆ ನಡೆಸಿದರು. ಪ್ರತಿಭಟನೆ ವೇಳೆ ರೈತ ನಾಯಕ ಕೆ.ಎಸ್.ಪುಟ್ಟಣ್ಣಯ್ಯ ಭಾವಚಿತ್ರಗಳು ರಾರಾಜಿ ಸುತ್ತಿದ್ದವು. ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡರು ರಾಜ್ಯ ಸರ್ಕಾರ ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡದೇ, ರೈತರನ್ನು ವಂಚಿಸುತ್ತಿವೆ ಎಂದು ಆರೋಪಿಸಿದರು. ಬಳಿಕ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಅಂಗಡಿ– ಮುಂಗಟ್ಟು ಬಂದ್: ಬಂದ್‌ಗೆ ಬಹುತೇಕ ಮಂಡ್ಯ ನಗರದ ವರ್ತಕರು ಬೆಂಬಲ ನೀಡಿದರು. ನಗರದ ಪ್ರಮುಖ ರಸ್ತೆಗಳಾದ ▶ 9ನೇ ಪುಟಕ್ಕೆ

ಹೊಸ ವರ್ಷ, ಸಂಕ್ರಾಂತಿ ಸಂಭ್ರಮಕ್ಕೆ ಮತ್ತಷ್ಟು ಮೆರಗು ‘ನಂದಿನಿ ಸಿಹಿ ಉತ್ಸವ’
ತಿಂಗಳ ಕಾಲ ನಂದಿನಿ ಉತ್ಪನ್ನ ಶೇ.20ರಷ್ಟು ರಿಯಾಯಿತಿ ದರದಲ್ಲಿ ಮಾರಾಟ

ಮೈಸೂರು,ಡಿ.19(ಎಂಟಿವೈ)–ಹೊಸ ವರ್ಷ ಹಾಗೂ ಸಂಕ್ರಾಂತಿ ಹಬ್ಬದ ಹಿನ್ನೆಲೆಯಲ್ಲಿ ಕೆಎಂಎಫ್ ಹಾಗೂ ಮೈಮುಲ್ ಗ್ರಾಹಕರಿಗೆ ನಂದಿನಿ ಉತ್ಪನ್ನಗಳನ್ನು ಶೇ.20ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮೇಳವನ್ನು ಆಯೋಜಿಸಿದ್ದು, ಡಿ.19ರಿಂದ ಜ.19ರವರೆಗೆ ‘ನಂದಿನಿ ಸಿಹಿ ಉತ್ಸವ್’ ನಡೆಯಲಿದೆ.

ಪ್ರತಿ ಬಾರಿಯಂತೆ ಈ ವರ್ಷವೂ ‘ನಂದಿನಿ ಸಿಹಿ ಉತ್ಸವ್’ ಆರಂಭಿಸಲಾಗಿದ್ದು, ಹಾಲು, ಮೊಸರು, ತುಪ್ಪ ಹೊರತುಪಡಿಸಿ 52 ಬಗೆಯ ನಂದಿನಿ ಸಿಹಿ ಉತ್ಪನ್ನಗಳ ದರದಲ್ಲಿ ಶೇ.20ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡಲು ನಿರ್ಧರಿಸಲಾಗಿದೆ.

ಸೋಮವಾರ ಕೆಆರ್‌ಎಸ್ ರಸ್ತೆಯಲ್ಲಿರುವ ನಂದಿನಿ ಪಾರ್ಲರ್‌ನಲ್ಲಿ ‘ಸಿಹಿ ಉತ್ಸವ್’ಕ್ಕೆ ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಚಾಲನೆ ನೀಡಿ ಮಾತನಾಡಿ, ಕೆಎಂಎಫ್ ಹಾಗೂ ಮೈಮುಲ್ ವತಿಯಿಂದ ಕಳೆದ 7 ವರ್ಷದಿಂದ ‘ನಂದಿನಿ ಸಿಹಿ ಉತ್ಸವ್’ ನಡೆಸಿ, ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ನಂದಿನಿ ಉತ್ಪನ್ನಗಳನ್ನು ನೀಡಲಾಗುತ್ತಿದೆ. ಹಿಂದಿನ ವರ್ಷಗಳಲ್ಲಿ ಶೇ.10ರಷ್ಟು ರಿಯಾಯಿತಿಯಲ್ಲಿ ಮಾರಾಟ ಮಾಡಲಾಗುತ್ತಿತ್ತು. ಈ ಬಾರಿ ಶೇ.20ರಷ್ಟು ರಿಯಾಯಿತಿ ದರದಲ್ಲಿ ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದರು. ನಂದಿನಿ ಉತ್ಪನ್ನಗಳ ತಯಾರಿಕೆಯಲ್ಲಿ ಯಾವುದೇ ರಾಸಾಯನಿಕ ವಸ್ತುಗಳನ್ನು ಬಳಸುವುದಿಲ್ಲ. ಇದರಿಂದ ಗ್ರಾಹಕರ ಆರೋಗ್ಯ ಕಾಪಾಡಿಕೊಳ್ಳಲು ನೆರವಾಗುತ್ತದೆ. ಖಾಸಗಿ ಸಂಸ್ಥೆಗಳ ತಯಾರಿಸುವ ಉತ್ಪನ್ನಗಳಲ್ಲಿ ರಾಸಾಯನಿಕ ವಸ್ತು ಬಳಸುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವಾಸಾರ್ಹವಾದ ನಂದಿನಿ ಉತ್ಪನ್ನಗಳನ್ನೇ ಬಳಸಬೇಕು. ನಂದಿನಿ ಉತ್ಪನ್ನಗಳ ಬಳಕೆ ಹೆಚ್ಚಾದರೆ, ಅದರಿಂದ ರೈತರಿಗೆ ಲಾಭವಾಗಲಿದೆ. ಆ ನಿಟ್ಟಿನಲ್ಲಿ ನಮ್ಮ ರೈತರ ಹೈನುಗಾರಿಕೆಯಿಂದ ಉತ್ಪತ್ತಿಯಾಗುವ ಶುದ್ಧ ಹಾಲಿನಿಂದ ತಯಾರಾಗುವ ನಂದಿನಿ ಉತ್ಪನ್ನಗಳನ್ನೇ ಹೆಚ್ಚಾಗಿ ಬಳಸುವಂತೆ ಮನವಿ ಮಾಡಿದರು.



ಮಾರುಕಟ್ಟೆಯಲ್ಲಿ ನಂದಿನಿ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಇದೆ. ಇದರಿಂದ ಕೆಎಂಎಫ್ ವತಿಯಿಂದ ಗ್ರಾಹಕರ ಅಭಿರುಚಿಗೆ ಅನುಗುಣವಾಗಿ ವಿವಿಧ ಉತ್ಪನ್ನಗಳನ್ನು ತಯಾರಿಸುತ್ತಿದೆ. ಈ ಬಾರಿ ನಂದಿನಿ ಸಿಹಿ ಉತ್ಸವದಲ್ಲಿ 52 ಪದಾರ್ಥಗಳನ್ನು ಶೇ.20ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಈಗಾಗಲೇ ಮೈಮುಲ್ ವತಿಯಿಂದ ಜಿಲ್ಲೆಯಲ್ಲಿ ಮಾರುಕಟ್ಟೆ ಅಭಿವೃದ್ಧಿಪಡಿಸಲಾಗಿದೆ. ಗ್ರಾಹಕರಿಗೆ ಸುಲಭವಾಗಿ ನಂದಿನಿ ಉತ್ಪನ್ನ ತಲುಪಿಸಲು ಕ್ರಮ ಕೈಗೊಳ್ಳಲಾಗಿದ್ದು, ನಗರ ಪ್ರದೇಶ ಮಾತ್ರವಲ್ಲದೆ ಗ್ರಾಮೀಣ ಭಾಗದಲ್ಲೂ ನಂದಿನಿ ಪಾರ್ಲರ್ ಹಾಗೂ ಗೆಲಾಕ್ಸಿ ತೆರೆಯಲಾಗಿದೆ. ಎಲ್ಲಾ ಕೇಂದ್ರಗಳಲ್ಲೂ ಗ್ರಾಹಕರು ಸಿಹಿ ಉತ್ಸವದ ಸದುಪಯೋಗ ಪಡೆದುಕೊಳ್ಳಬಹುದು ಎಂದರು.

ಮೈಮುಲ್ ವ್ಯವಸ್ಥಾಪಕ ನಿರ್ದೇಶಕ ಬಿ.ಎನ್.ವಿಜಯಕುಮಾರ್ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಸುಮಾರು 150ಕ್ಕೂ ಹೆಚ್ಚು ನಂದಿನಿ ಹಾಲಿನ ಉತ್ಪನ್ನಗಳನ್ನು ಕೆಎಂಎಫ್ ವತಿಯಿಂದ ತಯಾರಿಸಲಾಗುತ್ತಿದೆ. ಪ್ರತಿಷ್ಠಿತ ಖಾಸಗಿ ಸಂಸ್ಥೆಗಳಿಗಿಂತ ಉತ್ತಮ ಗುಣಮಟ್ಟ ಹಾಗೂ ರುಚಿಕರವಾದ ತಿನಿಸನ್ನು ತಯಾರಿಸಲಾಗುತ್ತಿದೆ. ಆದರೆ ಅವುಗಳ ಬಗ್ಗೆ ಹೆಚ್ಚು ಪ್ರಚಾರ ದೊರೆಯುತ್ತಿಲ್ಲ. ನಂದಿನಿ ಉತ್ಪನ್ನ ಎಂದರೆ ಕೆಲವರಿಗೆ ಹಾಲು, ಮೊಸರು, ತುಪ್ಪವಷ್ಟೇ ತಿಳಿದಿದೆ. ಹಾಗಾಗಿ ವಿವಿಧ ಪೇಡ, ಚಕ್ಕುಲಿ, ಬರ್ಫಿ, ಕುಕ್ಕೀಸ್, ರಸಗುಲ್ಲಾ, ಕರದಂಟು ಸೇರಿದಂತೆ ವಿವಿಧ ತಿನಿಸುಗಳ ಬಗ್ಗೆಯೂ ಜನರಿಗೆ ತಿಳಿಸುವ ನಿಟ್ಟಿನಲ್ಲಿ ಶೇ.20ರಷ್ಟು ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಆ ಮೂಲಕ ಸಭೆ, ಸಮಾರಂಭಗಳಲ್ಲಿ ನಂದಿನಿ ಉತ್ಪನ್ನಗಳ ಬಳಕೆಗೆ ಪ್ರೇರಣೆ ನೀಡಲು ಕಾರ್ಯಕ್ರಮ ರೂಪಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ 170 ನಂದಿನಿ ಪಾರ್ಲರ್‌ಗಳಿದ್ದು, 900 ಮಂದಿ ಏಜೆಂಟರು ನಂದಿನಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ. ಈ ಎಲ್ಲಾ ಕೇಂದ್ರಗಳಲ್ಲೂ ರಿಯಾಯಿತಿ ಸೌಲಭ್ಯ ದೊರೆಯಲಿದೆ ಎಂದು ವಿವರಿಸಿದರು. ಮೈಮುಲ್‌ನಲ್ಲಿ ಪ್ರತಿದಿನ 6.50 ಲಕ್ಷ ಲೀಟರ್ ಹಾಲು ಸಂಗ್ರಹವಾಗುತ್ತಿದೆ. ಅದರಲ್ಲಿ ನಂದಿನಿ ಹಾಲಿನ ಪ್ಯಾಕೆಟ್, ಕ್ಷೀರ ಭಾಗ್ಯ ಕಾರ್ಯಕ್ರಮಕ್ಕೆ ಬಳಸಿ ▶ 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗುರುಗಳು : ನಿನ್ನ ಹತ್ರ ಮೂರು ಹಣ್ಣಿದೆ.
ನೀನು ಒಂದು ತಿಂತೀಯಾ, ಈಗ
ನಿನ್ನ ಹತ್ರ ಎಷ್ಟಿದೆ?
ವಿದ್ಯಾರ್ಥಿ : ಮೂರೂ ನನ್ನ ಹತ್ರಾನೇ ಇದೆ ಸಾರ್,
ಒಂದು ಹೊಟ್ಟೆ ಒಳಗೆ ಇದೆ. ಎರಡು ಹೊಟ್ಟೆ ಹೊರಗೆ ಇದೆ.

ಮೈಸೂರು ಮಿತ್ರ

ಮಂಗಳವಾರ, 20 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಯಾವನೊಬ್ಬನನ್ನಾಗಲೀ ಯಶದ ಹಾದಿಗೆ ಒಯ್ಯುವ ಮೂರು ಅಂಶಗಳೆಂದರೆ– ಆತ್ಮವಿಶ್ವಾಸ, ನಿಶ್ಚಿತ ಗುರಿ ಮತ್ತು ಸಂಯಮ– ಟೆನಿಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಂಪತ್ತಿಗೆ ಪಟ್ಟಣ, ಆರೋಗ್ಯಕ್ಕೆ ಹಳ್ಳಿ

ನಿಮ್ಮ ಪತ್ರಗಳು

ನೆನೆಗುದಿಗೆ ಬಿದ್ದ ಗ್ರಾಮ ಯೋಜನೆಗಳು

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ರಾವಂದೂರು ಹೋಬಳಿಯ ಅರೇನಹಳ್ಳಿ ಗ್ರಾಮದಲ್ಲಿ ಕೆಲವು ಗ್ರಾಮ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಈ ಬಗ್ಗೆ ಗ್ರಾಮ ಪಂಚಾಯತ್ ಸದಸ್ಯರ ಗಮನಕ್ಕೆ ತಂದರೂ ಅವರು ಇದರ ಬಗ್ಗೆ ಯಾವುದೇ ಕ್ರಮ ವಹಿಸದೇ ಒಬ್ಬರ ಮೇಲೆ ಮತ್ತೊಬ್ಬರು ಇವರ ಜವಾಬ್ದಾರಿ ಸಾಗ ಹಾಕುತ್ತಿದ್ದಾರೆ. ಸರ್ಕಾರದಿಂದ ಈ ಯೋಜನೆಗಳಿಗೆ ಇನ್ನೂ ಹಣ ಬಿಡುಗಡೆ ಆಗಿಲ್ಲ. ಈಗ ಅರೇನಹಳ್ಳಿ ಗ್ರಾಮದ ಮುಖ್ಯಬೀದಿಯಲ್ಲಿ ಕಾಂಕ್ರೀಟ್ ರಸ್ತೆಗೆ ಹಾಕಿದ್ದ ಹಣವೇ ಇನ್ನೂ ಬಿಡುಗಡೆ ಆಗಿಲ್ಲ. ಈ ಹಣ ಬಿಡುಗಡೆಯಾದ ಮೇಲೆ ಇನ್ನಿತರ ಕೆಲಸ ಕಾರ್ಯಗಳು ಎಂದು ಸಮಜಾಯಿಷಿ ಕೊಟ್ಟು ಪಲಾಯನ ವಾಗುತ್ತಾರೆ. ಅಡ್ಡಾಳದ ಕಿರುಸೇತುವೆಯ ದುರಸ್ತಿ ಕೆಲಸ, ಹೊಸಕಟ್ಟೆ ಹಾಗೂ ಮುಳ್ಳಕೆರೆ ಈ ಕೆರೆಗಳಿಗೆ ಚೈನ್ ಗೇಟ್ ನಿರ್ಮಾಣ, ಹೊಲದಲ್ಲಿ ವಾಸಿಸುವವರಿಗೆ ರಸ್ತೆ ನಿರ್ಮಾಣ, ವಿದ್ಯುತ್ ಕಂಬಗಳ ದುರಸ್ತಿ ಮತ್ತಿತರ ಈ ಎಲ್ಲಾ ಕೆಲಸಗಳು ನಾಡಿನ ಪ್ರಸಿದ್ಧ ಪತ್ರಿಕೆಗಳಲ್ಲಿ ಪ್ರಕಟವಾದ ನಂತರವೂ ನೋಡಿ ಇನ್ನೂ ಇದನ್ನು ಮುಂದೂಡುತ್ತಲೇ ಬಂದಿದ್ದಾರೆ. ಕಿರು ಸೇತುವೆ ದುರಸ್ತಿ ಆಗದೇ ಜಾನುವಾರು, ಸಾಕು ಪ್ರಾಣಿಗಳ ಸಂಚಾರಕ್ಕೆ ಅಡಚಣೆಯಾಗಿದೆ. ಹೊಲದಲ್ಲಿ ವಾಸ ಮಾಡುವ ಎಂಟು–ಹತ್ತು ಕುಟುಂಬಗಳು ಓಡಾಡಲು, ವಾಸಿಸಲು ದುಸ್ತರವೆನಿಸಿ ಬೇಸತ್ತಿದ್ದಾರೆ. ಹೊಸಕಟ್ಟೆ ಕೆರೆ ನೀರು ಸಮರ್ಪಕ ರೀತಿಯಲ್ಲಿ ನಿರ್ವಹಣೆ ಇಲ್ಲದೇ ಸುಮ್ಮನೆ ಪೋಲಾಗಿ ಹರಿದು ಬೆಳೆಗಳ ಬೆಳವಣಿಗೆಗೆ ಕುಂಟಿತವೆನಿಸಿದೆ. ಈ ಎಲ್ಲಾ ಸಮಸ್ಯೆಗಳು ಕಣ್ಣಿಗೆ ಕಂಡರೂ ಕಾಣದಂತೆ ಇರುವುದನ್ನು ನೋಡಿದರೆ ಇದು ಇವರಿಗೆ ಅಭ್ಯಾಸವಾಗಿ ಹೋಗಿದೆ ಎನ್ನಬಹುದು. ಗ್ರಾಮದ ಜನರು ಈ ಬಗ್ಗೆ ಎಲ್ಲಾ ಬಗೆಯಲ್ಲಿ ತಿಳಿಸಿದರೂ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳಿಗೆ ಮನಸ್ಸು ಮಾಡುತ್ತಿಲ್ಲ. ಜನಪ್ರತಿನಿಧಿಗಳು ಮತಯಾಚನೆ ಮಾಡುವಾಗ ಗ್ರಾಮದ ಅಭಿವೃದ್ಧಿಗಾಗಿ ಕಂಕಣ ಕಟ್ಟಿಕೊಂಡು ಪ್ರಾಮಾಣಿಕತೆಯಿಂದ ದುಡಿಯುತ್ತೇವೆ ಎಂಬ ಆಶ್ವಾಸನೆ ಕಾಗದದಲ್ಲೇ ಉಳಿದ ಸಂಗತಿಯಾಗಿದೆ.

ಈ ಬಗ್ಗೆ ಪಿರಿಯಾಪಟ್ಟಣದ ಶಾಸಕರು, ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು, ದೊಡ್ಡಬೇಲಾಳು ಮಂಡಲ ಪಂಚಾಯಿತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಗಮನಹರಿಸಿ ಈ ಕೆಲಸಗಳನ್ನು ಆದಷ್ಟು ಬೇಗ ಕೈಗೊಳ್ಳಬೇಕೆಂದು ಈ ಮೂಲಕ ಮನವಿ.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ, ಪಿರಿಯಾಪಟ್ಟಣ ತಾ.

ವಿಶ್ವನಾಥ್, ಪ್ರಸಾದ್ ನಡುವೆ ವಾಕ್ಸಮರ; ಮತದಾರರಿಗೆ ಮನರಂಜನೆ

ಮಾನ್ಯರೆ,

ಇತ್ತೀಚೆಗೆ ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಮತ್ತು ಲೋಕಸಭಾ ಸದಸ್ಯ ಶ್ರೀನಿವಾಸ್ ಪ್ರಸಾದ್ ನಡುವೆ ನಡೆಯುತ್ತಿರುವ "ವಾಕ್ ಸಮರ" ಮತದಾರರಿಗೆ ಮನರಂಜನೆ ನೀಡುತ್ತಿದೆ.

ವಿಶ್ವನಾಥ್ ರಾಜಕಾರಣದಲ್ಲಿ ಇಷ್ಟು ಎತ್ತರಕ್ಕೆ ಬೆಳೆಯಲು ಶ್ರೀನಿವಾಸ ಪ್ರಸಾದರೇ ಕಾರಣ. ಪ್ರಸಾದ್ ಅವರನ್ನು ರಾಜಕೀಯ ಅಲೆಮಾರಿಗಳ ರಾಜ ಎಂದು ಕರೆದರೆ, ಪ್ರಸಾದ್ ಅವರು ವಿಶ್ವನಾಥ್ ಒಬ್ಬ ಬೊಗಳುವ ಮತ್ತು ಕಚ್ಚುವ ವ್ಯಕ್ತಿ ಎಂದರು. ಇಷ್ಟೇ ಅಲ್ಲ, ವಿಶ್ವನಾಥ್ ಅವರ ಚರಿತ್ರೆಯನ್ನೇ ಹರಾಜು ಹಾಕಿದ್ದಾರೆ.

ಕಳೆದ ಮೂರು ವರ್ಷಗಳ ಹಿಂದೆ "ಸಮ್ಮಿಶ್ರ ಸರ್ಕಾರ" ಉರುಳಲು ಮೊದಲು ಸಭೆ ನಡೆದಿದ್ದೆ ಶ್ರೀನಿವಾಸ್ ಪ್ರಸಾದ್ ಅವರ ಮನೆಯಲ್ಲಿ. ಇದನ್ನು ವಿಶ್ವನಾಥ್ ಅವರೇ ಬಹಿರಂಗವಾಗಿ ಹೇಳಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ ಹುಣಸೂರು ವಿಧಾನಸಭಾ ಉಪ ಚುನಾವಣೆಗೆ ಪಕ್ಷ ಹದಿನೈದು ಕೋಟಿ ರೂಪಾಯಿ ನೀಡಿತ್ತು. ಅದರಲ್ಲಿ ಐದು ಕೋಟಿ ಖರ್ಚು ಮಾಡಿ ಹತ್ತು ಕೋಟಿ ಜೇಬಿಗಿಳಿಸಿದರು ಎಂದು ಹೇಳಿದ್ದಾರೆ. ಒಂದು ರಾಜಕೀಯ ಪಕ್ಷ ಒಂದು ವಿಧಾನಸಭಾ ಕ್ಷೇತ್ರಕ್ಕೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಹಣ ನೀಡುತ್ತದೆಯೇ? ಇದೊಂದು ಗಂಭೀರ ಆರೋಪವಾಗಿರುವುದರಿಂದ ನ್ಯಾಯಾಂಗ ತನಿಖೆ ಆಗಲಿ.

–ಬೂಕನಕೆರೆ ವಿಜೇಂದ್ರ, ಮೈಸೂರು.

ಬಿಲಾವಲ್ ಭುಟ್ಟೋ ಅಪ್ರಬುದ್ಧ ನಾಯಕ

ಮಾನ್ಯರೆ,

ಹೊಟ್ಟೆಯೊಳಗಿನ ಕಿಚ್ಚು ತನ್ನನೇ ಸುಡುವುದೇ ಹೊರತು ಪರರನ್ನಲ್ಲ ಎಂಬ ಮಾತು ನೆರೆಯ ಪಾಕಿಸ್ತಾನ ದೇಶಕ್ಕೆ ಅನ್ವಯಿಸುತ್ತದೆ. ಯಾರಿಗೋ ಕೇಡು ಬಯಸುವ ವ್ಯಕ್ತಿ ಮೊದಲು ತನ್ನ ಮನಸ್ಸಿಗೇ ಕೇಡು ತಂದುಕೊಳ್ಳುವನು ಎನ್ನುವ ಹಾಗೆ ತನ್ನ ದೇಶದ ಅಭಿವೃದ್ಧಿಯನ್ನು ಮರೆತು ಕೇವಲ ಭಾರತದ ವಿರೋಧಿ ಭಾವನೆಯನ್ನು ತನ್ನ ವಿದೇಶಾಂಗ ನೀತಿಯನ್ನಾಗಿ ಮಾಡಿಕೊಂಡ ಪಾಕಿಸ್ತಾನ ಪ್ರಸ್ತುತ ದಿವಾಳಿಯ ಹಂತ ತಲುಪಿದೆ.

ಭ್ರಷ್ಟಾಚಾರವೆನ್ನುವುದು ಎಲ್ಲಾ ಅಭಿವೃದ್ಧಿ ಹೊಂದಿದ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಅಸ್ತಿತ್ವದಲ್ಲಿದೆ. ಆದರೆ ಪಾಕಿಸ್ತಾನ ಸ್ಥಾಪನೆಯಾದ ದಿನದಿಂದಲೂ ಅಭಿವೃದ್ಧಿಗೆಂದು ತಂದ ಸಾಲದ ಹಣವನ್ನು ದೇಶದ ಹಿತಕ್ಕೆ ಬಳಸದೆ ಭಯೋತ್ಪಾದನೆಯ ಅಭಿವೃದ್ಧಿಗೆ ಬಳಸಿ ಬೇರೆ ರಾಷ್ಟ್ರಗಳಲ್ಲಿ ಆತಂಕ ಸೃಷ್ಟಿಸುತ್ತಾ ತಮ್ಮ ದೇಶವನ್ನು ತಾವೇ ಹಾಳು ಮಾಡಿದ ಕೀರ್ತಿ ಪಕ್ಕದ ದೇಶದ ರಾಜಕೀಯ ನಾಯಕರುಗಳಿಗೆ ಸಲ್ಲಬೇಕು.

ವಿಶ್ವ ಬ್ಯಾಂಕ್, ಐಎಂಎಫ್, ಅಮೆರಿಕ, ಚೀನಾ, ಸೌದಿ ಅರೇಬಿಯಾ, ಟರ್ಕಿ ಮುಂತಾದ ದೇಶಗಳಿಂದ ಸಾಲವಾಗಿ ಹಣ ತಂದ ಪಾಕಿಸ್ತಾನವನ್ನಾಳಿದ ಪ್ರತಿಯೊಬ್ಬರು ತಮ್ಮ ಬ್ಯಾಂಕ್ ಬ್ಯಾಲೆನ್ಸ್ ಹೆಚ್ಚಿಸಿಕೊಂಡು ವಿದೇಶಗಳಲ್ಲಿ ಆಸ್ತಿ ಖರೀದಿಸಿ ತಮ್ಮ ಮಕ್ಕಳ ಭವಿಷ್ಯವನ್ನು ಉತ್ತಮಪಡಿಸಿ ಸಾಮಾನ್ಯ ಪಾಕಿಸ್ತಾನಿ ಪ್ರಜೆಗಳ ತಲೆಗೆ ಸಾಲವನ್ನು ಕಟ್ಟಿದರು.

ಇಂತಹ ಕುಟುಂಬದಲ್ಲಿ ಬಂದ ಬಿಲಾವಲ್ ಭುಟ್ಟೋ ತಮ್ಮ ದೇಶದ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನ ಮಾಡದೆ ಭಾರತದ 140 ಕೋಟಿ ಜನರನ್ನು ಪ್ರತಿನಿಧಿಸುವ ಪ್ರಧಾನ ಮಂತ್ರಿಗಳ ಮೇಲೆ ವೈಯಕ್ತಿಕ ಟೀಕೆ ಮಾಡುವುದನ್ನು ಭಾರತ ದೇಶದ ಪ್ರತಿಯೊಬ್ಬ ನಾಗರಿಕನು ಖಂಡಿಸುತ್ತಾನೆ.

ಬಿಲಾವಲ್ ಭುಟ್ಟೊ ರಾಜಕೀಯವಾಗಿ ಇನ್ನೂ ತಿಳುವಳಿಕೆ ಹೊಂದುವುದು ಅವಶ್ಯಕ. ಪ್ರತಿಷ್ಠಿತ ವೇದಿಕೆಗಳಲ್ಲಿ ತಮ್ಮ ದೇಶದ ಸಮಸ್ಯೆಗಳನ್ನು ಚರ್ಚಿಸಿ ಅದಕ್ಕೆ ವಿಶ್ವದ ಬೇರೆ ರಾಷ್ಟ್ರಗಳಿಂದ ಪರಿಹಾರ ಕಂಡುಕೊಳ್ಳುವುದಕ್ಕೆ ವಿಶ್ವಸಂಸ್ಥೆಯಂತಹ ವೇದಿಕೆಗಳನ್ನು ಬಳಸಿಕೊಳ್ಳುವ ಬದಲು ಬೇರೆ ದೇಶದ ಅತ್ಯುನ್ನತ ಪದವಿಯಲ್ಲಿರುವ ವ್ಯಕ್ತಿಯನ್ನು ಟೀಕಿಸಲು ಬಳಸಿಕೊಂಡಿರುವುದು ಘನತೆಯಲ್ಲ. ಸಮಸ್ತ 140 ಕೋಟಿ ಭಾರತೀಯರ ಪರವಾಗಿ ಬಿಲಾವಲ್ ಭುಟ್ಟೋರ ಹೇಳಿಕೆಯನ್ನು ವಿರೋಧಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.

ಬದುಕಿನ ಮಹತ್ವ ಸಾರುವ ಕವಿತೆ ಬಾಳಿನ ಹಂಬಲು



ಪುರೋಹಿತ ತಿರು ನಾರಾಯಣ ಅಯ್ಯಂಗಾರ್ ನರಸಿಂಹಾಚಾರ್ (ಪುತಿನ)

ಹಣತೆ ಎಂಬ ಕವನ ಸಂಕಲನ ಮೂಲಕ ಕನ್ನಡ ಸಾಹಿತ್ಯದಲ್ಲಿ ಬೆಳಕನ್ನು ಚೆಲ್ಲಿದ ಪ್ರಸಿದ್ಧ ಕವಿ ಪುತಿನ.

ಪುರೋಹಿತ ತಿರುನಾರಾಯಣ ಅಯ್ಯಂಗಾರ್ ನರಸಿಂಹಾಚಾರ್ ಎಂಬುದು ಅವರ ಪೂರ್ಣ ಹೆಸರಾದರೂ ಸಾಹಿತ್ಯ ಪ್ರಪಂಚದಲ್ಲಿ ಪುತಿನ ಎಂಬ ಕಾವ್ಯನಾಮದಿಂದಲೇ ಚಿರಪರಿಚಿತರಾಗಿದ್ದಾರೆ. 'ಹಣತೆ', 'ಮಾಂದಳಿರು', 'ಶಾರದಾಯಾಮಿನಿ', 'ಗಣೇಶ ದರ್ಶನ', 'ಮಲೆದೇಗುಲ'... ಹೀಗೆ ಹಲವು ಕವನ ಸಂಕಲನಗಳನ್ನು ಬರೆದಿರುವ ಪುತಿನ ಅವರ ಕವನಗಳು ಒಂದಕ್ಕಿಂತ ಒಂದು ಭಿನ್ನವಾದವುಗಳು.

ಪುತಿನ ಅವರ 'ಮಾಂದಳಿರು' ಕವನ ಸಂಕಲನದಲ್ಲಿ ಬರುವ ಕವನವೇ ಬಾಳಿನ ಹಂಬಲು ಕವನ. ಬದುಕಿನ ವಿವಿಧ ಹಂತಗಳಲ್ಲಿ ಮನುಷ್ಯನ ಜೀವನದ ಚಿತ್ರಣವನ್ನು ಈ ಕವನದ ಮೂಲಕ ತಿಳಿಸಿದ್ದಾರೆ.

ಕೂಸಿಗಂದು ಏನು ಬೇಡ,
ತಿಂಡಿ ಗೊಂಬೆ ಮುದ್ದು ಬೇಡ
ಏನೊ ಅರಕೆ, ಏನೊ ಬೇನೆ,
ಅತ್ತು ಸೊರಗಿತು:
"ಅಮ್ಮ ಎಲ್ಲಿ ಹೋತು" ಎನುತ ಅತ್ತು ಸೊರಗಿತು.

ಇಲ್ಲಿ ಮಗುವೊಂದು ತನ್ನ ತಾಯಿಯನ್ನು ಕಾಣದೇ ಅಳುತ್ತಾ ಇರುವ ಚಿತ್ರಣ ನೀಡಲಾಗಿದೆ. ತನ್ನ ತಾಯಿಯನ್ನು ಕಾಣದೇ ಏನೋ ಕೊರತೆ ಉಳ್ಳಂತೆ, ಏನೋ ನೋವಾದಂತೆ ಅತ್ತು ಅತ್ತು ಸೊರಗುವ ಮಗು ತನ್ನ ಅಮ್ಮ ಎಲ್ಲಿ ಹೋಯಿತು ಎನ್ನುವ ಹುಡುಕಾಟದಲ್ಲಿ ಸೊರಗಿರುವ ಚಿತ್ರಣ ನೀಡಲಾಗಿದೆ. ಸಾಮಾನ್ಯವಾಗಿ ಚಿಕ್ಕಮಕ್ಕಳಿಗೆ ತಾಯಿ ಒಂದು ಕ್ಷಣ ತನ್ನ ಕಣ್ಮುಂದೆ ಇಲ್ಲವಾದರೆ ಆ ಮಗುವಿಗೆ ತಡೆದುಕೊಳ್ಳುವ ಶಕ್ತಿ ಇರಲಾಗದು. ಯಾರು ಎಷ್ಟೇ ಸಮಾಧಾನ ಮಾಡಿದರೂ ತಾಯಿಯ ಅನುಪಸ್ಥಿತಿಯನ್ನು ನೆನೆದು ಆ ಮಗು ತನ್ನ ಅಳುವನ್ನು ನಿಲ್ಲಿಸದೇ ಅತ್ತು ಸೊರಗುವ ಪ್ರಕ್ರಿಯೆಯನ್ನು ಇಲ್ಲಿ ನೀಡಲಾಗಿದೆ. ಅಳುವ ಮಗುವಿಗೆ ಯಾರೇ ಮುದ್ದು ಮಾಡಿದರೂ, ತಿಂಡಿ ನೀಡಿದರೂ, ಗೊಂಬೆ ನೀಡಿದರೂ ಯಾವುದು ಬೇಕಾಗಿಲ್ಲ, ತನ್ನ ತಾಯಿಯನ್ನು ಬಿಟ್ಟು ಬೇರೆ ಯಾರು ಬೇಕಾಗಿಲ್ಲ ಎಂದು ತಾಯಿಯನ್ನು ಕಾಣದೇ ಅಳುವ ಮಗುವಿನ ಚಿತ್ರಣವನ್ನು ಇಲ್ಲಿ ಹೇಳುವ ಮೂಲಕ ತಾಯಿ – ಮಗುವಿನ ನಡುವಿನ ಬಾಂಧವ್ಯವನ್ನು ತಿಳಿಸಲಾಗಿದೆ.

ಅಳುವ ಕೇಳಿ ಬಂದ ತಾಯ
ಅಮೃತ ಸ್ಪರ್ಶಕಾರೆ ಗಾಯ,
ತೊಯ್ದ ಕಣ್ಣ ಬಿಚ್ಚಿ, ಸುಳಿಸಿ–
ತೊಂದು ನಗೆಯನು
" ನಿನ್ನನುಳಿಯೆ ಬಾಳು ಶೂನ್ಯ!"
ಎನುವ ನಗೆಯನು.

ಶೈಶಾವಸ್ಥೆಯಲ್ಲಿ ಮಗುವಿಗೆ ತಾಯಿಯನ್ನು ಹೊರತುಪಡಿಸಿ ಬೇರೆ ಯಾವುದು ಮುಖ್ಯವಾಗಲಾರದು. ಇಡೀ ಬದುಕೇ ತನ್ನ ತಾಯಿ ಎಂಬಂತೆ ಬಾಳುತ್ತದೆ. ಎಲ್ಲೋ ಓದಿದ ನೆನಪು ಒಂದು ಹೆಣ್ಣು ತನ್ನ ಮಗುವಿಗೆ ಜನ್ಮ ನೀಡುವಾಗ ಏಕಕಾಲದಲ್ಲಿ 20 ಮೂಳೆಗಳನ್ನು ಮುರಿದರೆ ಎಷ್ಟು ನೋವಾಗುವುದೋ ಅಷ್ಟು ನೋವನ್ನು ಸಹಿಸಿಕೊಂಡು ಜನ್ಮ ನೀಡುತ್ತಾಳೆ. ಮಗು ಹುಟ್ಟಿದಾಗ ಅಳುತ್ತದೆ ,ತಾಯಿ ತನ್ನ ಬದುಕು ಸಾರ್ಥಕ ಎಂದು ನಗುತ್ತಾಳೆ. ಅದೊಂದೇ ದಿನ ತಾಯಿ ತನ್ನ ಮಗು ಅತ್ತಾಗ ನಗುವುದು. ಈ ಸಂದರ್ಭವನ್ನು ಬಿಟ್ಟರೆ ಇನ್ನೂ ಯಾವುದೇ ಸಂದರ್ಭದಲ್ಲೂ ಮಗು ಅತ್ತರೆ ತಾಯಿ ಸಹಿಸಲಾರಳು. ಇಲ್ಲಿಯೂ ಹಾಗೆಯೇ ಮಗುವಿನ ಅಳುವನ್ನು ಕೇಳಿ ತಾನು ಮಾಡುತ್ತಿದ್ದ ಕೆಲಸವನ್ನು ಬಿಟ್ಟು ತಾಯಿ ಓಡಿ ಬಂದು ತನ್ನ ಮಗುವನ್ನು ಎತ್ತಿಕೊಳ್ಳುತ್ತಾಳೆ.

ಆ ಕ್ಷಣದಲ್ಲಿ ಅವಳಿಗೆ ತನ್ನ ಕೈಯ್ಯಲ್ಲಿ ಆಗಿರುವ ಗಾಯವೂ ಕೂಡ ಮುಖ್ಯ ಎನಿಸಲಾರದು. ಮಗುವಿಗೆ ತಾಯಿಯ ಮೊಗವನ್ನು ನೋಡಿದ ಕೂಡಲೇ ಅಳು ಕಣ್ಮರೆಯಾಗಿ ನಗು ಮೂಡುತ್ತದೆ. ಮಗುವಿನ ಸ್ಪರ್ಶ ಸುಖದಲ್ಲಿ ತನ್ನ ನೋವನ್ನು ಮರೆಯುವ ತ್ಯಾಗ ಆ ತಾಯಿಯದು. ಅಳುತ್ತಿರುವ ಆ ಮಗು ತನ್ನ ತಾಯಿಯ ಸ್ಪರ್ಶವಾದ ಕೂಡಲೇ ಅಳು ಆ ಕ್ಷಣವೇ ಮಾಯವಾಗಿ ನಗೆ ತುಂಬಿ ಬರುತ್ತದೆ. ನಿನ್ನನ್ನು ಬಿಟ್ಟು ಈ ಬಾಳು ಶೂನ್ಯ ಎಂಬ ತತ್ವವನ್ನು ಹೇಳುವಂತೆ ಮಗುವಿಗೆ ತಾಯಿಯ ಹೊರತಾಗಿ ಬೇರೆ ಜೀವನವಿಲ್ಲ ಎಂಬ ಸಂದೇಶವನ್ನು ಸಾರುತ್ತದೆ.

ಕೂಸು ಬೆಳೆದು ಆದ ರಾಮು.
ಇಂದು ನೆರೆಯ ಮನೆಯ ಶಾಮು
ರಾಮನೊಂದೆ ಬಯಕೆ, ಕನಸು,
ಬಾಳ ಧ್ಯೇಯವು :
ಆಸೆಗಳಿಗೆ ಕಲ್ಪತರುವು,
ನೋವಿಗಮೃತವು
ಒಂದೆ ಜೀವದೆರಡು ಕವಲು
ರಾಮು –ಶಾಮು : ಹಾಡು–ಹೊಳಲು,
ತುಂಬುಗಣ್ಣೊಳವನ ರಾಮು
ಸೆರೆಯೆ ಕೊಳುವನು:
"ನಿನ್ನನುಳಿಯೆ ಬಾಳು ಬಯಲು "
ಎಂದುಕೊಳುವನು.

ಈ ಪದ್ಯಭಾಗಗಳಲ್ಲಿ ಶೈಶಾವಸ್ಥೆಯ ನಂತರದ ಬಾಲ್ಯಾವಸ್ಥೆಯ ಚಿತ್ರಣ ನೀಡಲಾಗಿದೆ. ಆ ಮಗು ಬೆಳೆದು ಈಗ ಆ ರಾಮು ಆದ. ಈಗ ಅವನಿಗೆ ಅವನ ಪಕ್ಕದ ಮನೆಯಲ್ಲಿರುವ ಶಾಮು ಆತ್ಮೀಯ ಗೆಳೆಯನಾಗಿದ್ದಾನೆ. ಒಂದೇ ಜೀವ ಎರಡು ದೇಹದಂತೆ ಅವರ ಗೆಳೆತನವಿದೆ.ರಾಮನ ಆಸೆ, ಕನಸು, ಅವನ ಜೀವನದ ಧ್ಯೇಯ, ಆಸೆ, ಅವನ ನೋವುಗಳಿಗೆ ಅಮೃತ ಎಲ್ಲವೂ ಶಾಮು ಮಾತ್ರ ರಾಮುವಿಗೆ ಈಗ ಶಾಮುವಿನ ವಿನಃ ಬೇರೇನೂ ಬೇಕಾಗಿಲ್ಲ ಎಂದು ತಿಳಿಸಲಾಗಿದೆ. ರಾಮುವಿನ ಸಂತೋಷ–ದುಃಖಗಳಿಗೆಲ್ಲಾ ಕಾರಣ ಶಾಮು. ರಾಮುವಿನ ಮನದ ತುಂಬೆಲ್ಲಾ ಶಾಮುವಿನ ಯೋಚನೆ ಬಿಟ್ಟು ಬೇರೇನು ಇಲ್ಲ. ಸಾಮಾನ್ಯವಾಗಿ ಬಾಲ್ಯಾವಸ್ಥೆಯಲ್ಲಿ ಮಕ್ಕಳು ತಮ್ಮ ಪೋಷಕರಿಗಿಂತ ಹೆಚ್ಚಾಗಿ ಸ್ನೇಹಿತರೊಂದಿಗೆ ಬೆರೆಯುವುದಷ್ಟೇ ಅಲ್ಲ ಸ್ನೇಹಿತರೇ ತಮ್ಮ ಬದುಕು, ಕನಸು ಎಂಬಂತೆ ಬಾಳುವ ಚಿತ್ರಣವನ್ನು ಇಲ್ಲಿ ತಿಳಿಸಲಾಗಿದೆ. ಇಲ್ಲಿ ಬರುವ ರಾಮು ಮಗುವಿದ್ದಾಗ ಅಮ್ಮನನ್ನು ಬಿಟ್ಟು ಬೇರೇನು ಬೇಡವೆಂಬಂತೆ ಇದ್ದವನು ಈಗ ಇಲ್ಲಿ ತನ್ನ ಆತ್ಮೀಯ ಗೆಳೆಯ ಶಾಮುವನ್ನು ಬಿಟ್ಟು ಬೇರೇನು ಬೇಡ ಎಂಬಂತಹ ಹಂತಕ್ಕೆ ಬಂದು ನಿಂತಿರುವ ಬಾಲ್ಯದ ಚಿತ್ರಣವನ್ನು ನೀಡಲಾಗಿದೆ.

ರಾಮುವೀಗ ರಾಮರಾಯ
ಏನು ಠೀವಿ ! ಎಂಥ ಪ್ರಾಯ ।
ನಿತ್ಯ ಕನಸು ಕಾಂಬ ತೆರದ
ನೋಟದಲೆತವು;
ಒಲುಮೆನೆರೆಗೆ ಸಿಲುಕಿದವನ
ಮನದ ಸೆಳೆತವು !

ಇಂದು ಸರಳೆ ಅವನ ಜಗವ
ತುಂಬಿ, ಬಾಳ ಸೂರೆಗೊಳುವ–
ಳಾತ್ಮವನ್ನೆ ವಿಹಸಲಿಟ್ಟು
ರಾಮು ಒಳಿವನು
" ಸುಳಿದೆ, ಸರಳ, ಬಾಳ ಟೊಳ್ಳು
ತುಂಬಿ"ತೆನುವನು.

ಇಲ್ಲಿ ಬಾಲ್ಯಾವಸ್ಥೆಯ ನಂತರ ಯೌವ್ವನಾವಸ್ಥೆಯ ಚಿತ್ರಣವನ್ನು ನೀಡಲಾಗಿದೆ.ರಾಮು ಈಗ ಬೆಳೆದು ರಾಮರಾಯನಾದ. ಎಂತಹ ಗತ್ತು, ಎಂತಹ ಪ್ರಾಯ ಕನಸು ಕಾಣುವಂತಹ ವಯಸ್ಸಿನಲ್ಲಿರುವ ರಾಮರಾಯರಿಗೆ ಮನಸ್ಸನ್ನು ಸೆಳೆಯುವಂತಹ ಸಮಯ ಸಮೀಪಿಸಿತು. ಯೌವ್ವನದಲ್ಲಿ ಪ್ರೀತಿಯ ಸೆಳೆತ, ಆಕರ್ಷಣೆ ಎಲ್ಲಾವೂ ಸಹಜ. ಇಲ್ಲಿಯೂ ರಾಮರಾಯನಿಗೆ ಅವನ ಮನಸ್ಸನ್ನು ಗೆಲ್ಲುವಂತಹ ಹುಡುಗಿಯ ಆಗಮನವಾಗಿದೆ. ಅವಳೇ ಸರಳ. ಸರಳ ಅವಳ ಪ್ರೀತಿಯಲ್ಲಿ ಮುಳುಗಿದ ರಾಮುವಿಗೆ ಅವಳಲ್ಲಿನ ಪ್ರೇಮ ಹೆಚ್ಚಾಯಿತು.ಅವಳಿಂದ ತನ್ನ ಟೊಳ್ಳಾಗಿದ್ದ ಬಾಳು ತುಂಬಿತು ಎನ್ನುವನು. ಆ ಮೂಲಕ ಯೌವ್ವನಾವಸ್ಥೆಯಲ್ಲಿ ರಾಮರಾಯನಿಗೆ ಈಗ ಬೇರೇನೂ ಬೇಕಿಲ್ಲ, ಬೇಕಾಗಿರುವುದೆಲ್ಲಾವೂ ಸರಳ ಮೇಲಿರುವ ಪ್ರೀತಿ ಮಾತ್ರ ಎಂದು ತಿಳಿಸುವ ಮೂಲಕ ಸಹಜವಾಗಿ ಹರೆಯದಲ್ಲಿ ಹುಟ್ಟುವ ಪ್ರೀತಿ, ಪ್ರೇಮದ ಮುಂದೆ ಉಳಿದಿದೆಲ್ಲವೂ ಗೌಣವಾಗುವ ಪರಿಯನ್ನು ಚಿತ್ರಿಸಲಾಗಿದೆ.

ಸರಳೆ ರಾಮರೊಲುಮೆ ಸೂತ್ರ
ಹಸುಳೆ ಕಿಟ್ಟು, ಮೊದಲು – ಚಿತ್ರ!
ರಾಮಗದರ ಬಾಳ ಗುಟ್ಟು
ಅರ್ಥವಾಗದು :
" ನಮ್ಮ ಪ್ರೇಮ ಕಡ್ಡಬಂದ
ಗಂಡವೇನಿದು?"

ಒಂದು ದಿನದಿ ಕೂಸು ತನ್ನ
ಬೆಳಕೆ ದ್ರವಿಸಿ ಹರಿವ ಕಣ್ಣ
ಮೊಗದಿ ನೆಟ್ಟು, ಅವನ ಬೆರಳ
ಬಾಯಿಗೊಯ್ಯಲು
ರಾಮನೆಂದ, "ತೀರಿತಿಂದು
ಬಾಳ ಹಂಬಲು!"

ಯೌವ್ವನಾವಸ್ಥೆಯ ನಂತರದ ಘಟ್ಟ ಗೃಹಸ್ಥ ಜೀವನ ಇಲ್ಲಿ ರಾಮರಾಯನ ಗೃಹಸ್ಥಾ ಜೀವನದ ಚಿತ್ರಣ ನೀಡಲಾಗಿದೆ.ಪ್ರೀತಿಸಿದವರನ್ನೇ ಮದುವೆಯಾಗುವ ಅದೃಷ್ಟ ಸಿಗುವುದು ತುಂಬಾನೇ ಅಪರೂಪ. ಇಲ್ಲಿಯ ರಾಮರಾಯನಿಗೆ ಆ ಅದೃಷ್ಟ ಸಿಕ್ಕಿದೆ.ತಾನು ಪ್ರೀತಿಸಿದ ಸರಳೆ ಅನ್ನು ಮದುವೆಯಾಗಿದ್ದಾನೆ. ಅವರಿಬ್ಬರ ಪ್ರೇಮದ ಸಂಕೇತವಾಗಿ ಕಿಟ್ಟುವಿನ ಜನನವಾಗಿದೆ. ಅವರ ಮೊದಲ ಮಗು ಗಂಡು,

ಆ ಮಗುವೆ ಕಿಟ್ಟು, ಆದರೆ ರಾಮರಾಯನಿಗೆ ಮಗುವಿನ ಮನಸ್ಸು ಅರ್ಥವಾಗದು.ತಾನು ಚಿಕ್ಕವನಾಗಿದ್ದಾಗ ತಾಯಿಯ ಮಡಿಲಲ್ಲೇ ಇದ್ದಿದ್ದನ್ನು ಮರೆತವನಂತೆ ರಾಮರಾಯ ತನ್ನ ಮಗು ಕಿಟ್ಟು ಯಾವಾಗಲೂ ಸರಳೆಯೊಂದಿಗೆ ಇರುವುದನ್ನು ನೋಡಿ ಕೋಪಗೊಳ್ಳುತ್ತಾನೆ. ನಮ್ಮಿಬ್ಬರ ಪ್ರೀತಿಗೆ ಬಂದಿರುವ ಗಂಡ (ಇಲ್ಲಿ ಗಂಡ ಎಂದರೆ ಅಪಾಯ / ತೊಂದರೆ ಎಂದರ್ಥ)ಏನಿದು ಎಂದು ಭಾವಿಸುವ ರಾಮರಾಯ ತನ್ನ ಮಗು ಪ್ರೀತಿಯಿಂದ ಒಂದು ದಿನ ಅವನ ಕಣ್ಣನ್ನು ನೋಡಿ ಅವನ ಮೊಗವನ್ನು ನೋಡಿ ತನ್ನ ಕೈಬೆರಳುಗಳನ್ನು ಅವನ ಬಾಯಿಗೆ ಹಾಕಿದಾಗ ರಾಮರಾಯನಿಗೆ ಜ್ಞಾನೋದಯವಾಗುತ್ತದೆ.ನನ್ನ ಬದುಕಿನ ಹಂಬಲ ಇಂದಿಗೆ ತೀರಿತು ತನ್ನ ಬದುಕು ಸಾರ್ಥಕವಾಯಿತು ಎಂದು ಭಾವಿಸುತ್ತಾನೆ. ಇಲ್ಲಿ ಸಾಮಾನ್ಯವಾಗಿ ಗಂಡ–ಹೆಂಡತಿಯರ ನಡುವೆ ಮಗು ಬಂದಾಗ ಹೊಸತರಲ್ಲಿ ಆಗುವ ಸಣ್ಣ ಮುನಿಸು, ಮೊದಲ ಪ್ರಾಧಾನ್ಯತೆ ನನಗೆ ನಂತರ ಮಗುವಿಗೆ ಎಂದು ಪರಿತಪಿಸುವುದನ್ನೂ, ನಂತರ ಮಗುವಿನ ಆಟ ಪಾಠದಲ್ಲಿ ತಮ್ಮನ್ನೇ ಮರೆತು ಮಗುವಿನಲ್ಲಿ ಮಗುವಾಗಿ ಬೆರೆಯುವ ತಂದೆಯ ಮನಸ್ಥಿತಿಯನ್ನು ವಿವರಿಸಲಾಗಿದೆ.ತಾಯಿಯ ಪ್ರೀತಿ ಎಲ್ಲರಿಗೂ ಬೇಗ ತಿಳಿಯುತ್ತದೆ. ಆದರೆ ತಂದೆಯಾದವನಿಗೆ ತನ್ನ ಮಗುವಿನ ಮೇಲಿರುವ ಪ್ರೀತಿಯನ್ನು ಯಾರೂ ಕೂಡ ಅಷ್ಟು ಸುಲಭವಾಗಿ ಗುರುತಿಸಲಾರರು. ಇಲ್ಲಿಯೂ ಕೂಡ ಹಾಗೆಯೇ ಆಗುತ್ತದೆ. ರಾಮರಾಯನಿಗೆ ಮಗು ತಮ್ಮಿಬ್ಬರ ಪ್ರೀತಿಗೆ ಅಡ್ಡಬಂದ ತೊಂದರೆ ಎಂಬಂತೆ ಭಾಸವಾದರೂ ಮುಂದೆ ಮಗುವಿನ ಪ್ರೀತಿ ಅವನ ಆಲೋಚನೆಯನ್ನು ಬದಲಿಸಿ ಅವನ ಬದುಕಿನ ಹಂಬಲ ತನ್ನ ಮಗು ಎಂಬ ಆಲೋಚನೆ ಬರುವಂತೆ ಮಾಡುತ್ತದೆ.

ರಾಮರಾಯನೆಂಥ ಮನುಜ !
ಸಿರಿಯ ಘೃಣೆಯ ಹಿರಿಯ ಕಣಜ!
ಏನು ಪ್ರತಿಭೆ, ಎಂಥ ವಿನಯ!
ಯಶದ ಹೊಗಳದು.
ಆತನೊಂದೇ ಬಯಕೆ ಒಲಿದು
ಬರುವ ಮೊಳಗದು.

ಜಸದ ಹೆಣ್ಣು ಒಲಿದು ನಗಲು,
ನಗೆಯು ಮೊಗದಿ ಬಿಂಬಿಸಿರಲು
ಬಾಳ ಸಂಜೆಯಲ್ಲಿ ಯಶಕೆ
ರಾಮರಾಯರು
"ಬಂದೆ, ಬಾಳು ಪೂರ್ಣವಾಯ್ತು"
ಎಂದು ನುಡಿವರು.

ಇಲ್ಲಿ ರಾಮರಾಯನ ಜೀವನದ ಚಿತ್ರಣಗಳನ್ನು ನೀಡಲಾಗಿದೆ. ಈಗ ರಾಮರಾಯ ಜೀವನದಲ್ಲಿ ಉತ್ತಮ ಸ್ಥಿತಿಗೆ ತಲುಪಿದ್ದಾನೆ. ಎಲ್ಲರೂ ಅವರನ್ನು ಹೊಗಳುವವರೇ ಆಗಿದ್ದಾರೆ. ರಾಮರಾಯ ಪ್ರತಿಭೆ ಉಳ್ಳ, ವಿನಯ ಉಳ್ಳ, ಕರುಣೆ ಉಳ್ಳ ಮನುಷ್ಯ. ಅದಕ್ಕೆ ಅವನಿಗೆ ಯಶಸ್ಸು ಸಿಕ್ಕಿದೆ. ಅವನ ಬದುಕಲ್ಲಿ ಜಯವಿದೆ ಎಂದು ರಾಮರಾಯನನ್ನು ಗೌರವ, ಪ್ರೀತಿಗಳಿಂದ ಮಾತನಾಡಿಸುತ್ತಾ ಅವನ ವ್ಯಕ್ತಿತ್ವಕ್ಕೊಂದು ಮನ್ನಣೆ ನೀಡುವ ಕೆಲಸ ಮಾಡಿದ್ದಾರೆ. ಹೀಗೆ ರಾಮರಾಯರು ಎಲ್ಲರ ಪ್ರಶಂಸೆಗೆ ಒಳಗಾಗಿ ಈಗ ಬದುಕಿನ ಬಾಳಸಂಜೆಗೆ ಅಂದರೆ ಮುಪ್ಪಿನ ಹಂತಕ್ಕೆ ಬಂದು ನಿಂತಿದ್ದಾರೆ. ನನ್ನ ಬಾಳು ಸಂಪೂರ್ಣವಾಯಿತು. ಎಲ್ಲವೂ ದೊರೆಯಿತು, ಈ ಬಾಳು ಸಾರ್ಥಕವಾಯಿತು ಎಂದು ರಾಮರಾಯರು ನೆಮ್ಮದಿಯ ನಿಟ್ಟುಸಿರಿನ ನುಡಿಯನ್ನಾಡುತ್ತಾರೆ.

"ಇಲ್ಲಿ ಹಳ್ಳ, ಅಲ್ಲಿ ತಿಟ್ಟು"
ಎನುತ ಕೋಲ ಹಿಡಿದು ಪುಟ್ಟ
ನಡೆಸುತಿರುವ ಬಿಳಿಯ ಶಿರದ
ತಾತ – ರಾಯರು!
ಕೂಸಿಗಿಂತ ತ್ರಾಣಿಯಲ್ಲ
ಪಾಪ ! ರಾಯರು

ಒಂದು ದಿನದೊಳಿರುಳಿನಲ್ಲಿ
ಕಿರಣವೊಂದು ಹೊನ್ನ ಚೆಲ್ಲಿ,
ಬಾಳ ಸೆರೆಯ ಬೆಳಗೆ, ತಾತ
ಚಕಿತರಾದರು:
"ಬಂದು ಬಾಳಿಗರ್ಥವಿತ್ತೆ,
ಮೃತ್ಯು" ಎಂದರು.

ಮನುಷ್ಯನ ಬದುಕಿನ ಹಂತಗಳಿವು– ಶೈಶಾವಸ್ಥೆ, ಬಾಲ್ಯಾವಸ್ಥೆ, ಯೌವ್ವನಾವಸ್ಥೆ, ಗೃಹಸ್ಥಾವಸ್ಥೆ, ಮುಪ್ಪು ಈ ಹಂತಗಳನ್ನು ಪ್ರತಿಯೊಬ್ಬರೂ ದಾಟಿ ಬಂದಿರುತ್ತಾರೆ. ಹಾಗೆಯೇ ಈ ಕವನದಲ್ಲಿ ಬರುವ ರಾಮರಾಯರು ಕೂಡ ಬದುಕಿನ ಇಳಿ ಸಂಜೆಗೆ ಅಂದರೆ ಮುಪ್ಪಿಗೆ ಕಾಲಿಟ್ಟಿದ್ದಾರೆ. ಕಿಟ್ಟುವಿನ ಮಗನಾದ ಪುಟ್ಟು ಅಂದರೆ ರಾಮರಾಯರ ಮೊಮ್ಮಗ ತಾತನ ಕೈಹಿಡಿದು ನಡೆಸುವ ಪ್ರಯತ್ನ ಮಾಡುತ್ತಿದ್ದಾನೆ. ಇಲ್ಲಿ ಹಳ್ಳವಿದೆ, ತಿಟ್ಟಿದೆ ಎಂಬಂತಹ ಎಚ್ಚರಿಕೆಯನ್ನು ಪಾಲಿಸುತ್ತಾ (ಜೀವನದಲ್ಲೂ ಸುಖ–ದುಃಖ ಎಂಬ ಹಳ್ಳ ಮತ್ತು ತಿಟ್ಟನ್ನು ದಾಟಿ ಬಂದಿದ್ದಾರೆ ರಾಮರಾಯರು) ಕೋಲು ಹಿಡಿದು ಬರುತ್ತಿರುವ ರಾಮರಾಯರಿಗೆ ಈಗ ಬಿಳಿ ಕೂದಲುಗಳು ಬಂದು ರಾಮರಾಯರು ತಾತಾ ಆಗಿದ್ದಾರೆ. ಮಕ್ಕಳಿಗೆ ಇರುವಷ್ಟು ಶಕ್ತಿಯು ಕೂಡ ರಾಮರಾಯರಿಗೆ ಇಲ್ಲವಾಗಿದೆ. ಹೀಗಿರುವ ರಾಮರಾಯರಿಗೆ ಒಂದು ಇರುಳಿನಲ್ಲಿ ಹೊಸ ಕಿರಣವೊಂದು ಗೋಚರಿಸುವಂತಾಗುತ್ತದೆ. ಆ ಕಿರಣವನ್ನು ನೋಡಿ ರಾಮರಾಯರು ಆಶ್ಚರ್ಯಕ್ಕೆ ಒಳಗಾಗುತ್ತಾರೆ.ಈ ಬಾಳಿಗೆ ನಿಜವಾದ ಅರ್ಥ ಎಂದರೆ ಅದು ಸಾವು ಎಂದು ನುಡಿಯುವ ಮೂಲಕ ಹುಟ್ಟು ಉಚಿತ ಸಾವು ಖಚಿತ ಎಂಬ ಸಾರ್ವಕಾಲಿಕ ಸತ್ಯವನ್ನು ಜಗತ್ತಿಗೆ ಸಾರಿದ್ದಾರೆ. ಜೀವನದ ವಾಸ್ತವ ಹುಟ್ಟಿನ ನಂತರ ಸಾವು. ಮನುಷ್ಯನಿಗೆ ಮರಣದಲ್ಲೇ ಮೋಕ್ಷ ಸಿಗುವುದು, ನೆಮ್ಮದಿ ಸಿಗುವುದು. ಇದರಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ ಎಂಬುದು ಎಲ್ಲರೂ ಒಪ್ಪಲೇಬೇಕಾದ ಸತ್ಯ.

ಹೀಗೆ ಪುತಿನ ಅವರು ಪ್ರತಿಯೊಬ್ಬ ಮನುಷ್ಯನು ವಿವಿಧ ಹಂತಗಳಲ್ಲಿ ಬದಲಾಗುವ ಪ್ರಕ್ರಿಯೆಯನ್ನು 6 ಭಾಗಗಳಲ್ಲಿ–ಶೈಶಾವಸ್ಥೆ, ಬಾಲ್ಯಾವಸ್ಥೆ, ಯೌವ್ವನಾವಸ್ಥೆ, ಗೃಹಸ್ಥ ಜೀವನ, ಮುಪ್ಪು, ಮೃತ್ಯುಗಳ ಹಂತಗಳನ್ನು ತಲುಪಿದಾಗ ಅವರ ಅಗತ್ಯಗಳು ಕೂಡ ಬದಲಾಗುವುದನ್ನು ತಿಳಿಸುವುದರೊಂದಿಗೆ ಸಾರ್ಥಕ ಬದುಕಿನ ಚಿತ್ರಣವನ್ನು ಈ ಕವನದ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ಕವನವನ್ನು ಒಂದೇ ಓದಿಗೆ ಓದಿ ಮುಗಿಸುವ ಗೋಜಿಗೆ ಹೋಗದೇ ಪ್ರತಿ ಸಾಲುಗಳಲ್ಲಿ ಅಡಗಿರುವ ಒಳಾರ್ಥಗಳನ್ನು ಅರ್ಥೈಯಿಸಿಕೊಂಡರೆ ವಾಸ್ತವ ಬದುಕಿನ ಚಿತ್ರಣವನ್ನು ಗಮನಿಸಬಹುದು.

● ರಾಘವೇಂದ್ರ ಸಿ.ಎಸ್., ಮೈಸೂರು,
ಮೊ: 9036389640

ಶಿವಾರ್ಚಕ ಸಮುದಾಯವನ್ನು ಪ್ರತ್ಯೇಕ ಜನಾಂಗವೆಂದು ಘೋಷಿಸುವಂತೆ ಆಗ್ರಹಿಸಿ ಮೈಸೂರಲ್ಲಿ ಪ್ರತಿಭಟನೆ



ಮೈಸೂರು, ಡಿ.19 (ಎಂಟಿವೈ)–ಶಿವಾರ್ಚಕ ಸಮುದಾಯವನ್ನು ಪ್ರತ್ಯೇಕ ಜನಾಂಗವೆಂದು ಘೋಷಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಶಿವಾರ್ಚಕರ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆಯಲ್ಲಿ ಬಂದು, ಮನವಿ ಸಲ್ಲಿಸಿದರು.

ಚಾಮರಾಜನಗರ, ಮಂಡ್ಯ, ಹಾಸನ, ರಾಮನಗರ, ಕೊಡಗು ಮತ್ತು ಬೆಂಗಳೂರು ಭಾಗಗಳಲ್ಲಿ ವಾಸಿಸುತ್ತಿರುವ ಶಿವಾರ್ಚಕ ಸಮಾಜವು ಅತ್ಯಂತ ಪ್ರಾಚೀನವಾಗಿದ್ದು ಸಾಂಸ್ಕೃತಿಕವಾಗಿ ಮತ್ತು ಧಾರ್ಮಿಕವಾಗಿ ಶ್ರೀಮಂತಿಕೆಯನ್ನು ಉಳ್ಳದ್ದಾಗಿರುವಂತಹ ಈ ಸಮಾಜವು ಕಾಲಕಾಲಕ್ಕೆ ರಾಷ್ಟ್ರದ ಮತ್ತು ಎಲ್ಲಾ ಸಮಾಜಗಳಿಗೆ ತನ್ನದೆ ಆದ ಕೊಡುಗೆಯನ್ನು ನೀಡುತ್ತಾ ಬಂದಿದೆ. ಈ ಹಿಂದೆ ಐತಿಹಾಸಿಕ ಘಟ್ಟದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಮುಂಚೂಣಿಯಲ್ಲಿದ್ದ ಮತ್ತು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿದ್ದ ಶಿವಾರ್ಚಕ ಸಮುದಾಯ ವಿವಿಧ ಕಾರಣದಿಂದಾಗಿ ಇಂದು ಅಲ್ಪಸಂಖ್ಯಾತರ ಸ್ಥಿತಿಗೆ ತಲುಪಿದೆ ಎಂದು ವಿಷಾದಿಸಿದರು.

ಈ ಒಂದು ಕಾರಣದಿಂದಾಗಿ ನಮ್ಮ ಸಮಾಜವನ್ನು ಮತ್ತೊಂದು ಸಮಾಜದ ಜೊತೆ ಗುರುತಿಸಿ, ಕರೆಯುತ್ತಿದ್ದಾರೆ. ನಮಗೆ ಅತೀವ ನೋವಾಗಿದೆ. ನಮ್ಮ ಸ್ವಾಭಿಮಾನಕ್ಕೆ ಧಕ್ಕೆ ತರುವಂತ ವಿಷಯವಾಗಿದ್ದು, ಈ ಸಂಬಂಧವಾಗಿ ಅನೇಕ ದಶಕಗಳಿಂದ ಸಂಘಟನೆ, ಹೋರಾಟ ಮಾಡುತ್ತಿದ್ದರೂ ಕೂಡ ನಮಗೆ ಪ್ರತ್ಯೇಕವಾದ ಸ್ಥಾನಮಾನ ನೀಡಿಲ್ಲ. ಪ್ರತಿಯೊಂದು ಸಮಾಜವನ್ನೂ ಗುರುತಿಸಿ ಸರ್ಕಾರಿ ಸವಲತ್ತು ಇತ್ಯಾದಿಗಳನ್ನು ನೀಡುತ್ತಿರುವ ಸಮಯದಲ್ಲಿ ನಮ್ಮ ಪಾಲಿಗೆ ಏನೂ ಇಲ್ಲದಂತಾಗಿದೆ. ನಾವು ಅಳಿದುಳಿದ ಸವಲತ್ತುಗಳನ್ನು ಪಡೆಯುವಂತಹ ದುಸ್ಥಿತಿಗೆ ತಲುಪಿದ್ದು, ನಾವು ಅಲ್ಪಸಂಖ್ಯಾತರಾಗಿರುವುದರಿಂದ ಸರ್ಕಾರವು ನಮ್ಮ ಸಮಾಜವನ್ನು ಬೇರ್ಪಡಿಸಿ ನಮ್ಮದೇ ಒಂದು ಗುರುತನ್ನು ನೀಡಿ ನಮ್ಮನ್ನು ಸಾಮಾಜಿಕ, ರಾಜಕೀಯ, ಶೈಕ್ಷಣಿಕ ವಿಷಯಗಳಲ್ಲಿ ಅಭಿವೃದ್ಧಿ ಹೊಂದಲು ಸಹಕರಿಸಬೇಕು ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಅಧ್ಯಕ್ಷ ಕೆ.ಎಂ. ನಂಜುಂಡಪ್ಪ, ಪ್ರಧಾನ ಕಾರ್ಯದರ್ಶಿ ಎಸ್.ಪ್ರದೀಪ್, ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ರಾಜ್ಯಾಧ್ಯಕ್ಷ ಗಿರೀಶ್ ಶಿವಾರ್ಚಕ, ಬಸವಣ್ಣ ಸಿಂಧುವಳ್ಳಿ, ಪಟೇಲ್ ಸೋಮಶೇಖರ್, ಮಹದೇವ್, ಮಂಜು, ರಘು, ವೀರಣ್ಣ ಕುಂದೂರು, ಸತೀಶ್ ಇತರರು ಭಾಗವಹಿಸಿದ್ದರು.

ಭೂಮಿಗೆ ಸೂಕ್ತ ಪರಿಹಾರ ನೀಡಲು ಡಿ.23ರ ಗಡುವು ನೀಡಿದ ಕೋಚನಹಳ್ಳಿ ರೈತರು

ಮೈಸೂರು,ಡಿ.19(ಪಿಎಂ)– ಮೈಸೂರು ತಾಲೂಕು ಕೋಚನಹಳ್ಳಿ ಗ್ರಾಮದಲ್ಲಿ ವಶಪಡಿಸಿಕೊಂಡಿರುವ ತಮ್ಮ ಭೂಮಿಗೆ ಡಿ.23ರೊಳಗೆ ಸೂಕ್ತ ಪರಿಹಾರ ನೀಡದಿದ್ದರೆ ಸದರಿ ಭೂಮಿಯಲ್ಲಿ ಕೆಐಎಡಿಬಿ ನಡೆಸುತ್ತಿರುವ ಅಭಿವೃದ್ಧಿ ಚಟುವಟಿಕೆಗಳಿಗೆ ತಡೆಯೊಡ್ಡಲಾಗುವುದು ಎಂದು ಕೋಚನಹಳ್ಳಿ ರೈತರ ಹೋರಾಟ ಸಮಿತಿ ಎಚ್ಚರಿಸಿದೆ.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಹಾಗೂ ಸದರಿ ಹೋರಾಟ ಸಮಿತಿ ಸಲಹೆಗಾರ ಚಂದ್ರಶೇಖರ್ ಮೇಟಿ, ಹೆರಿಟೇಜ್ ಗಾಲ್ಫ್ ಮತ್ತು ಟೋಟಲ್ ಎನ್ವಿರಾನ್‌ಮೆಂಟ್ ಕಂಪನಿಗಳು ಗಾಲ್ಫ್ ಕೋರ್ಸ್ ನಿರ್ಮಿಸುವುದಾಗಿ ಕೋಚನಹಳ್ಳಿ ಗ್ರಾಮದಲ್ಲಿ 200ಕ್ಕೂ ಹೆಚ್ಚು ರೈತರಿಂದ ಪ್ರತಿ ಎಕರೆಗೆ 1.25 ಲಕ್ಷ ರೂ.ನಂತೆ ಒಟ್ಟು 400 ಎಕರೆ ಭೂಮಿಯನ್ನು ಹಂತಹಂತವಾಗಿ ಖರೀದಿಸಿತ್ತು. ಭೂಮಿ ನೀಡುವ ಪ್ರತಿ ಕುಟುಂಬದ ಒಬ್ಬ ಸದಸ್ಯನಿಗೆ ವಂಶ ಪಾರಂಪರ್ಯ ಖಾಯಂ ಉದ್ಯೋಗ ನೀಡುವ ಒಪ್ಪಂದವೂ ಆಗಿತ್ತು ಎಂದರು.

ರೈತರಿಂದ ಭೂಮಿ ಖರೀದಿಸಿದ ಸದರಿ ಕಂಪನಿಗಳು, ಬೇನಾಮಿ ವ್ಯಕ್ತಿಗಳ ಹೆಸರಿಗೆ ನೋಂದಣಿ ಮಾಡಿಸಿದ್ದವು. ಈ ಬೇನಾಮಿ ವ್ಯಕ್ತಿಗಳಿಂದ ಎಕರೆಗೆ 50 ಲಕ್ಷ ರೂ.ನಂತೆ ಕೆಐಎಡಿಬಿ, ಭೂಮಿ ಖರೀದಿಸಿ, ಇದೀಗ ಹೊಸ ಕೈಗಾರಿಕೆಗೆ ಹಸ್ತಾಂತರಿಸಲು ಅಭಿವೃದ್ಧಿ ಚಟುವಟಿಕೆ ನಡೆಸುತ್ತಿದೆ. ಸೂಕ್ತ ಪರಿಹಾರ ನೀಡಬೇಕೆಂದು ಒತ್ತಾಯಿಸಿ ಗ್ರಾಮದಲ್ಲಿ ರೈತರು ಕಳೆದ 650 ದಿನಗಳಿಂದ ಅನಿರ್ದಿಷ್ಟಾವಧಿ ಅಹೋರಾತ್ರಿ ಹೋರಾಟ ನಡೆಸುತ್ತಿದ್ದಾರೆ ಎಂದರು. ರೈತರ ಬೇಡಿಕೆಗೆ ಸ್ಪಂದನೆ ದೊರೆಯದ ಕಾರಣ ಅಭಿವೃದ್ಧಿ ಚಟುವಟಿಕೆಗಳಿಗೆ ತಡೆಯೊಡ್ಡುವ ನಿರ್ಧಾರ ಕೈಗೊಂಡು ಗಡುವು ನೀಡಲಾಗಿದೆ ಎಂದರು. ಭೂಮಿ ನೀಡಿದ ರೈತರಾದ ಶಿವಣ್ಣನಾಯಕ, ಮಹೇಶ, ಮುಖಂಡ ಬೊಕ್ಕಹಳ್ಳಿ ನಂಜುಂಡಸ್ವಾಮಿ, ಸ್ವರಾಜ್ ಇಂಡಿಯಾ ಜಿಲ್ಲಾ ಮುಖಂಡ ಉಗ್ರನರಸಿಂಹೇಗೌಡ ಮತ್ತಿತರರು ಗೋಷ್ಠಿಯಲ್ಲಿದ್ದರು.

ಎಂ.ಬಿ.ಶೃತಿಗೆ ಪಿಎಚ್.ಡಿ



ಮೈಸೂರು,ಡಿ.19–ಡಾ.ಅಸಿಮಾ ನುಸ್ರತ್ ಅವರ ಮಾರ್ಗದರ್ಶನದಲ್ಲಿ ಭೂಗೋಳಶಾಸ್ತ್ರ ವಿಷಯದಲ್ಲಿ ಎಂ.ಬಿ.ಶೃತಿ ಸಂಶೋಧನೆ ನಡೆಸಿ ಮಂಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಜ್ಞಾನಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬೆಳಗಾವಿ ಅಧಿವೇಶನದಲ್ಲಿ ಜನರ ನಾನಾ ಸಮಸ್ಯೆಗೆ ಪರಿಹಾರ

ಬೆಂಗಳೂರು, ಡಿ. 19 (ಕೆಎಂಶಿ)–ಹಲವು ವಿಚಾರಗಳ ಬಗ್ಗೆ ಚರ್ಚಿಸಿ, ಜನರಿಗೆ



ಪರಿಹಾರ ಒದಗಿಸುವಲ್ಲಿ ಪ್ರಸಕ್ತ ಅಧಿವೇಶನ ಸಹಕಾರಿಯಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಬೆಳಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉತ್ತರ ಕರ್ನಾಟಕ ಭಾಗದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸಿ ಪರಿಹಾರ ಕಂಡುಕೊಳ್ಳಬೇಕಿದೆ. ರಾಜ್ಯವನ್ನು ಮುನ್ನಡೆಸುವ ದಿಸೆಯಲ್ಲಿ ಹತ್ತು ಹಲವಾರು ವಿಷಯಗಳ ಬಗ್ಗೆ ಚರ್ಚೆಯಾಗಬೇಕಿದೆ. ಹಲವಾರು ಕಾನೂನುಗಳ ರಚನೆಗಳ ಉದ್ದೇಶದಿಂದ ಕಲಾಪ ನಡೆಸಲಾಗುತ್ತಿದೆ ಎಂದರು. ವಿಧಾನಸಭೆಯಲ್ಲಿ ಕೆಲವು ಮಹನೀಯರ ಭಾವಚಿತ್ರಗಳ ಅನಾವರಣವಾಗಲಿದೆ. ಕಾಂಗ್ರೆಸ್ ಈ ಬಗ್ಗೆ ಅಪಸ್ವರ ಎತ್ತಿದ್ದು, ಎಲ್ಲ ಮಹನೀಯರುಗಳ ಭಾವಚಿತ್ರವನ್ನು ಅಳವಡಿಸುವ ಬಗ್ಗೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪತ್ರ ಬರೆದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಪತ್ರದ ವಿಚಾರ ಗಮನಕ್ಕೆ ಬಂದಿಲ್ಲ ಹಾಗೂ ವಿಧಾನಸಭೆಯಲ್ಲಿ ಭಾವಚಿತ್ರ ಅನಾವರಣಗೊಳಿಸುವುದು ಸ್ಪೀಕರ್‌ರವರ ವಿವೇಚನೆಗೆ ಬಿಟ್ಟಿರುವ ವಿಚಾರ. ವಿರೋಧಪಕ್ಷದ ನಾಯಕರು ಹಾಗೂ ಸ್ಪೀಕರ್‌ರೊಂದಿಗೂ ಈ ವಿಚಾರದ ಬಗ್ಗೆ ಮಾತನಾಡಲಾಗುವುದು ಎಂದರು. ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ನೀಡುವ ಬಗ್ಗೆ ಉತ್ತರಿಸಿ, ಸಮುದಾಯಕ್ಕೆ ಮೀಸಲಾತಿ ನೀಡಲು ಯಾವುದೇ ಗಡುವು ನಿಗದಿಪಡಿಸಿಲ್ಲ. ಹಿಂದುಳಿದ ವರ್ಗಗಳ ಆಯೋಗದಿಂದ ಶೀಘ್ರದಲ್ಲಿ ವರದಿ ಬರುವ ವಿಶ್ವಾಸವಿದೆ ಎಂದರು.



ಮೈಸೂರಿನ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರ್, ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು. 200ಕ್ಕೂ ಹೆಚ್ಚು ಮಂದಿ ಇದರ ಸದುಪಯೋಗ ಪಡೆದರು. ಲಯನ್ಸ್ ಕ್ಲಬ್ ಆಫ್ ಮೈಸೂರ್ ಅಧ್ಯಕ್ಷ ಗಿರೀಶ್, ಕಾರ್ಯದರ್ಶಿ ಸುರೇಶ್, ಖಜಾಂಚಿ ಮುಖೇಶ್, ಪದಾಧಿಕಾರಿಗಳಾದ ಜೆ.ಲೋಕೇಶ್, ವಿರೂಪಾಕ್ಷ, ಬಿ.ಶಿವಣ್ಣ, ರಮೇಶ್, ಪ್ರತಿಮಾ ರಮೇಶ್, ಕೃಷ್ಣೇಗೌಡ, ಸುಬ್ರಹ್ಮಣ್ಯ, ರಾಜಶೇಖರ್, ದಯಾನಂದ್, ಅಯ್ಯಪ್ಪಸ್ವಾಮಿ ಸಮಿತಿ ಅಧ್ಯಕ್ಷ ಶಶಿಧರ್ ಉಪಸ್ಥಿತರಿದ್ದರು.

ನಾಳೆ ಸ್ವರಾಲಯ ಸಾಂಸ್ಕೃತಿಕ ಹಬ್ಬ

ಮೈಸೂರು, ಡಿ.19– ನಗರದ ರಾಮಕೃಷ್ಣನಗರದಲ್ಲಿರುವ ಸ್ವರಾಲಯ ಸಂಗೀತ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು ಇವರ ಸಹಯೋಗದೊಂದಿಗೆ ಡಿ.21 (ಬುಧವಾರ) ರಂದು ಸಂಜೆ 4 ಗಂಟೆಗೆ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ 'ಸ್ವರಾಲಯ ಸಾಂಸ್ಕೃತಿಕ ಹಬ್ಬ–2022' ಆಯೋಜಿಸಲಾಗಿದೆ. ಕಾರ್ಯಕ್ರಮಕ್ಕೆ ಮೃದಂಗ ಹಾಗೂ ತಬಲಾ ವಾದಕ ವಿದ್ವಾನ್ ವಿ.ಶ್ಯಾಮ್ ಅವರು ಚಾಲನೆ ನೀಡಲಿದ್ದು, ಮುಖ್ಯ ಅತಿಥಿಯಾಗಿ ಮೈಸೂರಿನ ಸಂಗೀತ ಶಿಕ್ಷಕಿ ವಿದುಷಿ ಸವಿತಾ ಮೋಹನ್ ಭಾಗವಹಿಸಲಿದ್ದಾರೆ.

ಸ್ವರಾಲಯ ಸಂಗೀತ ಸಂಸ್ಥೆಯ ಸಂಸ್ಥಾಪಕ–ಅಧ್ಯಕ್ಷೆ ವಿದುಷಿ ಡಾ.ಸುಮಾ ಹರಿನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ವೇದಿಕೆ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮದಲ್ಲಿ ಸಂಸ್ಥೆಯ ವಿದ್ಯಾರ್ಥಿಗಳಿಂದ ವೃಂದಗಾನ ಹಾಗೂ ಕು.ಸ್ನೇಹ ಮತ್ತು ಕು.ಸಹನ (ಹುರಾ ಸಹೋದರಿಯರು), ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಪ್ರಸ್ತುತಪಡಿಸಲಿದ್ದಾರೆ. ವಾದ್ಯ ಸಹಕಾರದಲ್ಲಿ ವಯೋಲಿನ್‌ನಲ್ಲಿ ವಿದ್ವಾನ್ ಸಿ.ಚೇತನ್ ಹಾಗೂ ಮೃದಂಗದಲ್ಲಿ ವಿದ್ವಾನ್ ವಿ.ಶ್ಯಾಮ್ ನೆರವಾಗಲಿದ್ದಾರೆ ಎಂದು ಸಂಸ್ಥೆ ಕಾರ್ಯದರ್ಶಿ ಹೆಚ್.ಎಸ್.ಶ್ರೀಕಾಂತಾಮಣಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 9986961772 ಸಂಪರ್ಕಿಸಬಹುದು.

ಮೈಸೂರಲ್ಲಿ ಇಂದು ಸಾಂಸ್ಕೃತಿಕ ಸೌರಭ

ಮೈಸೂರು,ಡಿ.19– ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಡಿಸೆಂಬರ್ 20 ರಂದು ಸಂಜೆ 4 ಗಂಟೆಗೆ ನಜರ್‌ಬಾದ್‌ನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸಾಂಸ್ಕೃತಿಕ ಸೌರಭ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸುವರು. ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್‌ಪ್ರಸಾದ್, ಸುಮಲತಾ ಅಂಬರೀಶ್, ವಿಧಾನಸಭೆ ಹಾಗೂ ವಿಧಾನಪರಿಷತ್‌ನ ಶಾಸಕರು, ನಿಗಮ ಮಂಡಳಿ ಅಧ್ಯಕ್ಷರು ಉಪಸ್ಥಿತರಿರುವರು.

ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು,ಡಿ.19– ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆಗೊಂಡಿರುವ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ), ಸಿದ್ದಾರ್ಥನಗರ, ಮೈಸೂರು ಸಂಸ್ಥೆಯಲ್ಲಿ ಮಾಸ್ಟರ್ ಆಫ್ ವಿಜ್ಯುಯಲ್ ಆರ್ಟ್ಸ್ (ಎಂ.ವಿ.ಎ) (ಎರಡು ಶೈಕ್ಷಣಿಕ ವರ್ಷದ 4 ಸೆಮಿಸ್ಟರ್) ದೃಶ್ಯ ಕಲೆಯಲ್ಲಿ ಬಾಕಿ ಉಳಿದಿರುವ ಸೀಟಿಗೆ 2022–23ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಸ್ನಾತಕೋತ್ತರ ಪದವಿ ಪ್ರವೇಶಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಸ್ನಾತಕೋತ್ತರ ಪದವಿಯಲ್ಲಿ ಚಿತ್ರಕಲೆ ಮತ್ತು ಶಿಲ್ಪಕಲೆ ವಿಭಾಗಗಳಲ್ಲಿ ವಿಶೇಷ ಅಧ್ಯಯನದ ಸ್ನಾತಕೋತ್ತರ ಪದವಿಯಾಗಿರುತ್ತದೆ. ಪ್ರಥಮ ಮಾಸ್ಟರ್ ಆಫ್ ವಿಜ್ಯುಯಲ್ ಆರ್ಟ್ಸ್ (ಎಂ.ವಿ.ಎ) ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸಲು ಅಂತಿಮ ಡಿ.24ರಂದು ಮಧ್ಯಾಹ್ನ 1.30ರವರೆಗೆ ಇದ್ದು, ಡಿ.26ರಂದು ಬೆಳಗ್ಗೆ 11 ಗಂಟೆಗೆ ಅರ್ಹತಾ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನ. ಆಸಕ್ತರು http://www.mysore.nic.in, http://http://www.cavamysore.karna taka.gov.in ಮೂಲಕ ಮಾಹಿತಿ ಪಡೆಯಬಹುದು. ಮಾಹಿತಿಗೆ ದೂ.ಸಂ.0821–2438931.

ಐಐಟಿಯಲ್ಲಿ ಸಂಶೋಧನೆ, ನೇಮಕಾತಿಯಲ್ಲಿ ಮೀಸಲಾತಿ ಕಾನೂನು ಅನುಸರಿಸಿ

ನವದೆಹಲಿ: ಐಐಟಿಗಳಲ್ಲಿ ಸಂಶೋಧನೆ ವಿಭಾಗದ ಪದವಿ ವಿಭಾಗದಲ್ಲಿ ಹಾಗೂ ಸಿಬ್ಬಂದಿ ನೇಮಕಾತಿಯಲ್ಲಿ ಮೀಸಲಾತಿಯ ಕಾನೂನನ್ನು ಅನುಸರಿಸಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕೇಂದ್ರೀಯ ಶಿಕ್ಷಣ ಸಂಸ್ಥೆ (ಶಿಕ್ಷಕರ ಕೇಡರ್ ನಲ್ಲಿ ಮೀಸಲಾತಿ) ಕಾಯ್ದೆ, 2019 ರ ಕಾನೂನನ್ನು ಪಾಲಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಎಸ್‌ಎನ್ ಪಾಂಡೇ ಎಂಬುವವರು ಈ ನಿಟ್ಟಿನಲ್ಲಿ ಮೀಸಲಾತಿ ಕಾನೂನು ಪಾಲಿಸಲು ಕೇಂದ್ರ ಸರ್ಕಾರ ಹಾಗೂ ಐಐಟಿಗಳಿಗೆ ನಿರ್ದೇಶನ ನೀಡಬೇಕು, ನಿಯಮಗಳನ್ನು ಉಲ್ಲಂಘನೆ ಮಾಡಲಾಗುತ್ತಿದೆ ಎಂದು ಆರೋಪಿಸಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್‌ನ ನ್ಯಾ. ಎಂಆರ್ ಷಾ, ಸಿಟಿ ರವಿಕುಮಾರ್ ಅವರಿದ್ದ ಪೀಠ ವಿಚಾರಣೆ ನಡೆಸುತ್ತಿತ್ತು ಹಾಗೂ ಕೇಂದ್ರ ಶಿಕ್ಷಣ ಸಂಸ್ಥೆಗಳ (ಶಿಕ್ಷಕರ ವರ್ಗದಲ್ಲಿ ಮೀಸಲಾತಿ) ಕಾಯಿದೆ, 2019 ಅಂತಹ ಮೀಸಲಾತಿಯನ್ನು ನಿಗದಿಪಡಿಸುತ್ತದೆ ಮತ್ತು ಅದನ್ನು ಕಾರ್ಯಗತಗೊಳಿಸಲಾಗುತ್ತಿದೆ ಎಂದು ಕೋರ್ಟ್‌ಗೆ ಮಾಹಿತಿ ನೀಡಲಾಗಿದೆ.

ತೆರಿಗೆ ಪಾವತಿಸಿದರೂ ಮೂಲಸೌಕರ್ಯ ಕಲ್ಪಿಸದೆ ಪಾಲಿಕೆ, ಮುಡಾ ಅಧಿಕಾರಿಗಳಿಂದ ವಂಚನೆ ಆರೋಪ

ಜಿಲ್ಲಾಡಳಿತಕ್ಕೆ ರಮಾಬಾಯಿನಗರ ಬಳಿಯ ರೈಲ್ವೆ ಬಡಾವಣೆ ನಿವಾಸಿಗಳ ಮನವಿ

ಮೈಸೂರು, ಡಿ.19(ಎಸ್‌ಪಿಎನ್)– ಕಳೆದ 15 ವರ್ಷಗಳಿಂದ ಮುಡಾ ಮತ್ತು ನಗರಪಾಲಿಕೆಗೆ ಕಂದಾಯ ಪಾವತಿಸುತ್ತಿದ್ದರೂ ರಮಾಬಾಯಿನಗರ ಸಮೀಪದ ರೈಲ್ವೆ ಬಡಾವಣೆಗೆ ಮೂಲ ಸೌಕರ್ಯ ಕಲ್ಪಿಸದೇ ಅಧಿಕಾರಿಗಳು ವಂಚಿಸುತ್ತಿದ್ದಾರೆ ಎಂದು ಆರೋಪಿಸಿ ರಮಾಬಾಯಿನಗರ– ರೈಲ್ವೆ ಬಡಾವಣೆ ಹಿತರಕ್ಷಣಾ ಸಮಿತಿ ಹಾಗೂ ಎಎಪಿ ಕಾನೂನು ಘಟಕ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದೆ.

ರಮಾಬಾಯಿ ನಗರ ಮತ್ತು ರೈಲ್ವೆ ಬಡಾವಣೆಯಲ್ಲಿ ಸುಮಾರು 15 ವರ್ಷಗಳಿಂದ ವಾಸಿಸುತ್ತಿದ್ದು, ಅಲ್ಲಿಂದ ಇಲ್ಲಿಯವರೆಗೆ ಮುಡಾ ಮತ್ತು ಮೈಸೂರು ಮಹಾನಗರ ಪಾಲಿಕೆಗೆ ಕಂದಾಯ ಕಟ್ಟುತ್ತಿದ್ದೇವೆ. ಆದರೆ, ನಗರಪಾಲಿಕೆ ಮತ್ತು ಮುಡಾದಿಂದ ಒಳಚರಂಡಿ, ಕುಡಿಯುವ ನೀರು ಮತ್ತು ರಸ್ತೆಗಳ ಸೌಕರ್ಯ ಕಲ್ಪಿಸುತ್ತಿಲ್ಲ ಎಂದು ಎಎಪಿ ಕಾನೂನು ಘಟಕದ ಅಧ್ಯಕ್ಷ ಎಂ.ಎನ್.ತಿಮ್ಮಯ್ಯ ಹಾಗೂ ಬಡಾವಣೆ ನಿವಾಸಿಗಳು ಆರೋಪಿಸಿ, ಅಪರ ಜಿಲ್ಲಾಧಿಕಾರಿ ಡಾ.ಮಂಜುನಾಥಸ್ವಾಮಿ ಅವರಿಗೆ ಮನವಿ ಸಲ್ಲಿಸಿದ್ದಾರೆ.

ನಾವು ಹಲವು ವರ್ಷಗಳಿಂದ ಪ್ರಾಮಾಣಿಕವಾಗಿ ತೆರಿಗೆ ಕಟ್ಟುತ್ತಿದ್ದರೂ ನಮ್ಮ ಬಡಾವಣೆಗೆ ಯಾವುದೇ ಸೌಲಭ್ಯ ಕಲ್ಪಿಸುತ್ತಿಲ್ಲ. ಇದರಿಂದ ಒಳಚರಂಡಿ ಇದ್ದರೂ ಅಲ್ಲಲ್ಲಿ ಕಟ್ಟಿಕೊಂಡು ಯುಜಿಡಿ ನೀರು ಸರಾಗವಾಗಿ ಹರಿದು ಹೋಗುತ್ತಿಲ್ಲ. ಮಳೆಗಾಲದಲ್ಲಿ ಮಳೆ ಮತ್ತು ಯುಜಿಡಿ ನೀರು ಮಿಶ್ರಣಗೊಂಡು ರಸ್ತೆಯಲ್ಲಿ ಹರಿದು ಜನರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ. ಅಲ್ಲದೆ, ಡೆಂಗ್ಯೂ, ಚಿಕುನ್‌ಗುನ್ಯ, ಕಾಲರಾ, ಮಲೇರಿಯಾ ಸೇರಿದಂತೆ ಇತರೆ ಸಾಂಕ್ರಾಮಿಕ ರೋಗಗಳು ಹರಡುತ್ತಿದ್ದು, ಜೊತೆಗೆ ಹಾವು, ಚೇಳು ಸೇರಿದಂತೆ ಇತರೆ ವಿಷಜಂತುಗಳ ಅವಾಸಸ್ಥಾನವಾಗಿದೆ ಎಂದು ದೂರಿದ್ದಾರೆ.

ನಮ್ಮ ಬಡಾವಣೆಯ ಸಿ.ಎ. ನಿವೇಶನದ ವಸತಿ ನಿಲಯದವರೆಗೆ ರಸ್ತೆ, ಚರಂಡಿ ಅಭಿವೃದ್ಧಿ ಹೊಂದಿದೆ. ಅನತಿ ದೂರದಲ್ಲಿರುವ ನಮ್ಮ ಬಡಾವಣೆಯ ಉದ್ಯಾನವನ ಅಭಿವೃದ್ಧಿಪಡಿಸಲು ಸ್ಥಳೀಯ ಆಡಳಿತ ಗಮನ ಹರಿಸುತ್ತಿಲ್ಲ. ನಾವು ಕಂದಾಯ ಕಟ್ಟಲು ಹೋದಾಗ ಸೈಟ್ ಕ್ಲೀನಿಂಗ್ ಚಾರ್ಜ್ ಎಂದು ಸಾವಿರ ರೂ. ಕಟ್ಟಬೇಕು. ಇಲ್ಲವಾದಲ್ಲಿ ಸೈಟ್ ಕ್ಲೀನ್ ಮಾಡಿಸಿರುವ ಫೋಟೋ ತೋರಿಸಿದರೆ ಮಾತ್ರ ಕಂದಾಯ ಕಟ್ಟಿಸಿಕೊಳ್ಳುತ್ತೇವೆ ಎಂಬ ಷರತ್ತು ವಿಧಿಸುತ್ತಿದ್ದಾರೆ. ಆ ಷರತ್ತು ಪೂರೈಸಿದ ನಂತರ ಪಾಲಿಕೆ ಅಧಿಕಾರಿಗಳು ನಿಮ್ಮ ಬಡಾವಣೆ ಶ್ರೀರಾಂಪುರ ಪಟ್ಟಣ ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ. ಅಲ್ಲಿನ ಅಧಿಕಾರಿಗಳಿಗೆ ನಿಮ್ಮ ಸಮಸ್ಯೆ ತಿಳಿಸಿ ಎಂದು ಸಬೂಬು ಹೇಳುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಶ್ರೀರಾಂಪುರ ಪಟ್ಟಣ ಪಂಚಾಯ್ತಿ ಅಧಿಕಾರಿಗಳನ್ನು ವಿಚಾರಿಸಿದರೆ, ಮೊದಲು 50 ಸಾವಿರ ಕಟ್ಟಿ, ತದನಂತರ ಅಭಿವೃದ್ಧಿ ವಿಷಯದ ಬಗ್ಗೆ ಗಮನಹರಿಸುತ್ತೇವೆ ಎಂದು ಉದ್ಧಟತನದ ಮಾತುಗಳನ್ನಾಡುತ್ತಿದ್ದು, ನಮ್ಮ ಎರಡೂ ಬಡಾವಣೆ ಜನರನ್ನು ಅಧಿಕಾರಿಗಳು ಕೇವಲವಾಗಿ ನಡೆಸಿಕೊಳ್ಳುತ್ತಿದ್ದಾರೆ ಎಂದು ಆರೋಪಿಸಿರುವ ನಿವಾಸಿಗಳು, ಕಳೆದ 15 ವರ್ಷಗಳಿಂದ ಮುಡಾಗೆ ಕಟ್ಟಿರುವ ಕಂದಾಯ ವಾಪಸ್ ಕೊಡಿಸುವಂತೆ ಮನವಿ ಮಾಡಿದ್ದು, ನಮಗೆ ಮೂಲ ಸೌಕರ್ಯ ಕಲ್ಪಿಸದಿದ್ದರೆ ಆಮರಣಾಂತ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗುವುದು ಎಂದು ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಈ ವೇಳೆ ಎಎಪಿ ಕಾನೂನು ಘಟಕದ ಅಧ್ಯಕ್ಷ ಎಂ.ಪಿ.ತಮಯ್ಯ, ಎ.ಎ.ಮಾಚಯ್ಯ, ಗಂಗಾಧರ್, ದ್ವಾರಕನಾಥ್, ರಮೇಶ್ ಯಾದವ್, ಸೂರ್ಯಪ್ರಕಾಶ್, ಗೋಪಾಲ್ ಕೃಷ, ಶಂಕರ್ ಉಪಸ್ಥಿತರಿದ್ದರು.

ನಗರ ಪ್ರದೇಶದಲ್ಲಿ ನಶಿಸುತ್ತಿರುವ ಮಾನವೀಯ ಮೌಲ್ಯ, ಬಾಂಧವ್ಯ

ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ವಿಷಾದ




ಮೈಸೂರು, ಡಿ.19(ಎಸ್‌ಪಿಎನ್)– ನಗರ ಪ್ರದೇಶದಲ್ಲಿ ಜಾನಪದ ಕಲೆಗಳು ನಶಿಸುತ್ತಿರುವುದರಿಂದ ಮಾನವೀಯ ಮೌಲ್ಯ, ಮನುಷ್ಯ – ಮನುಷ್ಯನ ನಡುವಿನ ಬಾಂಧವ್ಯ ಸಂಪೂರ್ಣ ನಶಿಸಿ, ಯಾಂತ್ರಿಕ ಜೀವನವಾಗಿ ಬದಲಾಗಿದೆ ಎಂದು ಹಿರಿಯ ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಆತಂಕ ವ್ಯಕ್ತಪಡಿಸಿದರು.

ಮೈಸೂರು ಕಲಾಮಂದಿರದ ಆವರಣದ ಚಿಂತಕ ಚಾವಡಿಯಲ್ಲಿ ಮಹಾರಾಣಿ ಮಹಿಳಾ ಪದವಿ ಕಾಲೇಜು ಮತ್ತು ಮೈಸೂರು ದೇಶಿರಂಗ ಸಾಂಸ್ಕೃತಿಕ ಸಂಸ್ಥೆಯ ಸಹಯೋಗದೊಂದಿಗೆ ಆಯೋಜಿಸಿದ್ದ ದೇಶಿರಂಗ 2022ರ 10 ದಿನಗಳ ಜಾನಪದ ನೃತ್ಯ ತರಬೇತಿ ಶಿಬಿರ(ಮಾರಿಕುಣಿತ, ಕೋಲಾಟ, ಡೊಳ್ಳುಕುಣಿತ, ಪೂಜಾಕುಣಿತ)ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನಗರ ಪ್ರದೇಶದಲ್ಲಿ ಹೆಚ್ಚು ನಾಗರಿಕತೆ ಮೈಗೂಡಿಸಿಕೊಂಡು ನಾಲ್ಕು ಗೋಡೆಗಳ ಮಧ್ಯೆ ಜೀವನ ಕಟ್ಟಿಕೊಂಡಿರುವ ನಗರವಾಸಿಗಳಲ್ಲಿ ಮಾನವೀಯತೆ, ಆತ್ಮೀಯ ಬಾಂಧವ್ಯ ಎಲ್ಲರಲ್ಲೂ ಮರೆಯಾಗುತ್ತಿವೆ ಹಾಗೂ ಎಲ್ಲವೂ ಯಾಂತ್ರಿಕ ಜೀವನವಾಗಿ ರೂಪುಗೊಳ್ಳುತ್ತಿದೆ. ಹಾಗಾಗಿ ಮೂಲ ಜಾನಪದ ಮಟ್ಟುಗಳನ್ನು ಉಳಿಸಿಕೊಳ್ಳಬೇಕಾದರೆ, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಹೆಚ್ಚುಹೆಚ್ಚು ಜಾನಪದ ನೃತ್ಯಗಳನ್ನು ಕಲಿಸುವ ಮೂಲ ಜಾನಪದ ಕಲೆಗೆ ಮರುಹುಟ್ಟು ನೀಡಲು ಇಂತಹ ಶಿಬಿರಗಳು ಸಹಕಾರಿಯಾಗುತ್ತಿವೆ ಎಂದರು.

ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಮದುವೆ, ಬೀಗರೂಟ, ಜಾತ್ರೆ ಸೇರಿದಂತೆ ಅನೇಕ ಶುಭ ಕಾರ್ಯಕ್ರಮಗಳಿಗೆ ಎಲ್ಲರನ್ನೊಳಗೊಂಡ ಕಾರ್ಯಕ್ರಮಗಳು ಆಯೋಜನೆಗೊಳ್ಳುತ್ತವೆ. ಎಲ್ಲರೂ ಒಂದೆಡೆ ಸೇರಿ ಪರಸ್ಪರ ಆತ್ಮೀಯ ಸಂಬಂಧಗಳನ್ನು ಉಳಿಸಿಕೊಂಡು ಆನಂದಮಯ ಬದುಕು ಕಟ್ಟಿಕೊಂಡಿದ್ದಾರೆ. ಆದರೆ, ನಗರದಲ್ಲಿ ಚೆಂದದ ಮನೆಕಟ್ಟಿ, ಅಕ್ಕ–ಪಕ್ಕದ ಮನೆಯವರೊಂದಿಗೆ ಮೌನವಾಗಿ ದಿನದೂಡುತ್ತಿರುವುದರಿಂದ ನೆರೆಹೊರೆಯ ಸಂಬಂಧ ಸುಧಾರಣೆಗೊಳ್ಳುತ್ತವೆಯೇ. ಅಕ್ಕ–ಪಕ್ಕದ ಮನೆಯಲ್ಲಿ ಗೇಟ್ ತೆಗೆದು, ಮುಚ್ಚುವಾಗ ಸೌಂಡ್ ಬಿಟ್ಟರೆ, ಮನುಷ್ಯರು ಮಾತನಾಡುವ ಶಬ್ದವೇ ಕೇಳಿಸುವುದಿಲ್ಲ. ಈ ತರಹದ ಜೀವನ ಕ್ರಮ ಮುಂದಿನ ಪೀಳಿಗೆಗೆ ಕಲಿಸಬೇಕೇ ಎಂದು ಪ್ರಶ್ನಿಸಿದರು. ಈ ವೇಳೆ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಮೈಸೂರು ಕೃಷ್ಣಮೂರ್ತಿ, ಕೃಷ್ಣಜನಮನ ಇದ್ದರು.

ಚುನಾವಣೆ ಬಳಿಕ ಬಿಜೆಪಿ ನಮ್ಮ ಪಕ್ಷದ ಬಾಗಿಲಿಗೇ ಬರಬೇಕು

ಬೆಂಗಳೂರು: 2023ರ ಚುನಾವಣೆ ಬಳಿಕ ಬಿಜೆಪಿ ನಮ್ಮ



ಪಕ್ಷದ ಬಾಗಿಲಿಗೆ ಬರಬೇಕು ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತೆ ಸಮ್ಮಿಶ್ರ ಸರ್ಕಾರ ರಚನೆಯ ಅನುಮಾನ ಮೂಡಿಸುವ ಹೇಳಿಕೆ ನೀಡಿದ್ದಾರೆ.

ಜೆ.ಪಿ.ಭವನದಲ್ಲಿ ಜೆಡಿಎಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದ ಬಳಿಕ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಮಿಸ್ಟರ್ ಸಂತೋಷ್, ಮಿಸ್ಟರ್ ಆರ್. ಅಶೋಕ್. 2023ರ ಚುನಾವಣೆ ಬಳಿಕ ಬಿಜೆಪಿಯವರು ಜನತಾದಳದ ಮನೆ ಬಾಗಿಲಿಗೆ ಬರಬೇಕು ಎಂದು ಸೂಚ್ಯವಾಗಿ ತಿಳಿಸಿದರು.

ಮತ್ತೆ ಈ ಬಗ್ಗೆ ಸ್ಪಷ್ಟನೆ ಕೇಳಿದಾಗ, ಬಿಜೆಪಿ ದರೋಡೆಕೋರರು, ಲೂಟಿಕೋರರು. ಇಂಥ ಬಿಜೆಪಿಯವರ ಜತೆ ಸೇರಿ ನಾನು ಸರ್ಕಾರ ನಡೆಸೋಕ್ಕೆ ಆಗುತ್ತಾ. ಮುಂದಿನ ಸಲ ಜೆಡಿಎಸ್ ಸ್ವತಂತ್ರವಾಗಿ ಅಧಿಕಾರಕ್ಕೆ ಬರುತ್ತೆ. ಆಗ ಬಿಜೆಪಿಯವರು ನಮ್ಮ ಮುಂದೆ ಅರ್ಜಿ ಹಿಡಿದು ಬರ್ತಾರೆ ಎಂದು ಸಮಜಾಯಿಷಿ ನೀಡಿದರು.

ಬಿ.ಎಲ್. ಸಂತೋಷ್ ವಿರುದ್ಧ ಕಿಡಿ: ಇದೇ ವೇಳೆ ಬಿಜೆಪಿ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್. ಸಂತೋಷ್ ವಿರುದ್ಧ ವಾಗ್ದಾಳಿ ನಡೆಸಿದರು. ನಿನಗೂ ಕರ್ನಾಟಕಕ್ಕೂ ಸಂಬಂಧ ಇಲ್ಲ. ಸಂತೋಷವಾಗಿ ಇದ್ದಾರಂತೆ. ಮಿಸ್ಟರ್ ಸಂತೋಷ್.. ನಿಮ್ಮ ಯೋಗ್ಯತೆಗೆ ಸರ್ಕಾರ ಲೂಟಿ ಮಾಡ್ತಾ ಇದಿಯಲ್ಲಾ. ದರೋಡೆ ಹಣ ತೆಲಂಗಾಣಕ್ಕೆ ಕೊಂಡೊಯ್ದು ಸರ್ಕಾರ ಬೀಳಿಸಲು ಹೊರಟಿದ್ದೀರಾ. ಇಂದು ಆರೋಪಿಯಾಗಿದ್ದೀರಾ. ಕ್ರಿಕೆಟ್ ಬೆಟ್ಟಿಂಗ್ ಮಾಡಿದ ಹಣದಿಂದ ಸರ್ಕಾರ ರಚನೆ ಮಾಡಿದ್ದೀರಾ. ಜನಗಳ ಮುಂದೆ ನಾವು ಹೋಗುವವರು. ನೀವು ರಣಹದ್ದುಗಳು. ಅಪಮಾರ್ಗದಿಂದ ಆಡಳಿತ ನಡೆಸುವವರು ನೀವು. ನಿಮ್ಮಿಂದ ತ್ಯಾಗ ಮನೋಭಾವ ಕಲಿಯಬೇಕಿಲ್ಲ ಎಂದು ವಾಗ್ದಾಳಿ ನಡೆಸಿದರು.

ಮೋದಿ ಹೆಸರಲ್ಲಿ ಹೊಟ್ಟೆ ಪಾಡು ಮಾಡುವವರು ನೀವು. ಲಘುವಾಗಿ ನಮ್ಮ ಪಕ್ಷದ ಬಗ್ಗೆ ಮಾತನಾಡಬೇಡಿ. ಅವರಿಗೆ ಜನರ ಕಷ್ಟ ಏನು ಗೊತ್ತು. ಬಿಜೆಪಿ ಎಂಪಿ ಶ್ರೀನಿವಾಸ್ ಪ್ರಸಾದ್ ಹೇಳಿದ್ದಾರಲ್ಲ. ವಿಶ್ವನಾಥ್ ಅವರಿಗೆ 15 ಕೋಟಿ ಕೊಟ್ಟಿರೋದಾಗಿ. ಈಗ ಯಾರ ಮೇಲೆ ಕ್ರಮ ತಗೋತಾರೆ ತಗೊಳ್ಳಲಿ. ಲೂಟಿ ಹೊಡೆದ ದುಡ್ಡು ಕೊಟ್ಟಿದ್ದಾರೆ ಎಂದು ಹೆಚ್‌ಡಿಕೆ ಕಿಡಿಕಾರಿದರು.

ಸಚಿವ ಅಶೋಕ್‌ಗೆ ತಿರುಗೇಟು: ಇದೇ ವೇಳೆ ಸಚಿವ ಆರ್.ಅಶೋಕ್‌ಗೆ ತಿರುಗೇಟು ನೀಡಿದ ಅವರು, ಬೆಳಗಾವಿ ಅಧಿವೇಶನ ನಡೆಸುವುದು ಬಿಲ್ ಪಾಸ್ ಮಾಡಲು. ಸಾವರ್ಕರ್ ಫೋಟೋ ಅನಾವರಣಕ್ಕೆ ಮಾಡುತ್ತಿದ್ದೀರಾ. ಬೆಳಗಾವಿಯಲ್ಲಿ ಸುವರ್ಣಸೌಧ ಕಟ್ಟಲು ಕಾರಣ ಕುಮಾರಸ್ವಾಮಿ. ನೀವು ಯಾರೂ ಸುವರ್ಣಸೌಧ ಕಟ್ಟಲು ಹೇಳಿಲ್ಲ ಎಂದು ಸಚಿವ ಆರ್.ಅಶೋಕ್‌ಗೆ ಕುಮಾರಸ್ವಾಮಿ ಟಾಂಗ್ ನೀಡಿದರು. ಬೆಳಗಾವಿ ಅಧಿವೇಶನಕ್ಕೆ ಬರದೇ ರಾಜ್ಯ ಸುತ್ತುತ್ತಿದ್ದೇನೆ. ನಿಮ್ಮ ಡ್ರಾಮಾ ನೋಡೋಕ್ಕೆ ಬೆಳಗಾವಿಗೆ ಬರ್ಬೇಕಾ. ಮತ್ತೆ ಜನತೆಗೋಸ್ಕರ ಪಕ್ಷ ಅಧಿಕಾರಕ್ಕೆ ತರಲು ರಾಜ್ಯಾದ್ಯಂತ ಓಡಾಡುತ್ತಿದ್ದೇನೆ. ಸಾವರ್ಕರ್ ಫೋಟೋ ಆದರೂ ಹಾಕಲಿ, ಗೋಡ್ಸೆ ಫೋಟೋ ಆದರೂ ಹಾಕಲಿ ಎಂದು ಸುವರ್ಣಸೌಧ ಸಭಾಂಗಣದಲ್ಲಿ ಸಾವರ್ಕರ್ ಫೋಟೋ ಅಳವಡಿಸಿದ್ದರ ವಿರುದ್ಧ ಹೆಚ್‌ಡಿಕೆ ಪ್ರತಿಕ್ರಿಯಿಸಿದರು.

ಮೈಮರೆತರೆ ಬದಲಾವಣೆ: ಜೆಡಿಎಸ್‌ನ 2023ರ ಚುನಾವಣೆಗಾಗಿನ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಮಾಡಿದ್ದೇವೆ. 116 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಬೇಕು ಎಂದುಕೊಂಡಿದ್ದೆವು. ಆದರೆ ಜಿಲ್ಲಾವಾರು ಪಕ್ಷದ ಮುಖಂಡರ ಮನವಿ ಮೇರೆಗೆ ಕೆಲವು ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ತಡೆ ಹಿಡಿದಿದ್ದೇವೆ. ಇದರಲ್ಲಿ ನಮ್ಮಿಂದ ಯಾವುದೇ ಲೋಪ ಇಲ್ಲ ಎಂದು ಸ್ಪಷ್ಟಪಡಿಸಿದರು.

ಮೈಸೂರು ಮಿತ್ರ
ಮಂಗಳವಾರ 20 ಡಿಸೆಂಬರ್ 2022



ಕಬ್ಬು ಮತ್ತು ಹಾಲಿಗೆ ಬೆಂಬಲ ನೀಡುವಂತೆ ಆಗ್ರಹಿಸಿ ರಾಜ್ಯ ರೈತ ಸಂಘ ಸೇರಿದಂತೆ ವಿವಿಧ ಸಂಘಟನೆಗಳು ಕರೆ ನೀಡಿದ್ದ ಮಂಡ್ಯ ನಗರ ಬಂದ್ ವೇಳೆ ಸಂಜಯ ವೃತ್ತದ ಬಳಿ ಜಮಾಯಿಸಿದ ಪ್ರತಿಭಟನಾಕಾರರು

ಸಿಎಸ್‌ಪಿಯಿಂದ ಸಮುದಾಯ ಭವನ ಉದ್ಘಾಟನೆ

ಪಾಂಡವಪುರ, ಡಿ.19– ತಾಲೂಕಿನ ಕೆಂಪೇಗೌಡನಕೊಪ್ಪಲು ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಡಾ.ಬಿ.ಆರ್. ಅಂಬೇಡ್ಕರ್ ಭವನವನ್ನು ಶಾಸಕ ಸಿ.ಎಸ್.ಪುಟ್ಟರಾಜು ಉದ್ಘಾಟಿಸಿದರು.



ಕೆಂಪೇಗೌಡನಕೊಪ್ಪಲು ಗ್ರಾಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನವನ್ನು ನಿರ್ಮಾಣ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಭವನಕ್ಕೆ ಸುತ್ತಗೋಡೆಯನ್ನು ನಿರ್ಮಾಣ ಮಾಡಿಕೊಡಲಾಗುವುದು ಎಂದು ಭರವಸೆ ನೀಡಿದರು.

ಗಿರಿಯಾರಹಳ್ಳಿ–ಹೊಸಕನ್ನಂಬಾಡಿ ಸಂಪರ್ಕರಸ್ತೆಯಿಂದ ಕೆಂಪೇಗೌಡನ ಕೊಪ್ಪಲು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗುವುದು. ನೂತನ ಅಂಗನವಾಡಿ ಕಟ್ಟಡವನ್ನು ನಿರ್ಮಾಣ, ಸ್ಥಗಿತಗೊಂಡಿರುವ ಮಾರಿಗುಡಿ ಕಟ್ಟಡವನ್ನು ಸಹ ಅಭಿವೃದ್ಧಿ ಪಡಿಸಲಾಗುವುದು ಎಂದು ಹೇಳಿದರು.

ಕೆಂಪೇಗೌಡನ ಕೊಪ್ಪಲಿನ ದಲಿತ ಬಡಾವಣೆಯಿಂದ ಗಿರಿಯಾರಹಳ್ಳಿ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಪರಿಶೀಲಿಸಿದ ಶಾಸಕರು ಕೆಆರ್‌ಎಸ್ ಹಿನ್ನೀರಿನಲ್ಲಿ ಕಾಂಪೌಂಡ್ ಹಾಕಿರುವುದನ್ನು ಕಾನೂನು ರೀತಿಯಲ್ಲಿ ತೆರವು ಮಾಡಿ ಓಡಾಡಲು ಅನುಕೂಲ ಮಾಡಿಕೊಡಬೇಕೆಂದು ಆರ್‌ಓ ಮಹದೇವಸ್ವಾಮಿಗೆ ಸೂಚಿಸಿದರು..

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ. ಯಶವಂತ್‌ಕುಮಾರ್, ತಾಪಂ ಮಾಜಿ ಅಧ್ಯಕ್ಷೆ ಪೂರ್ಣಿಮಾ ವೆಂಕಟೇಶ್, ಮಾಜಿ ಸದಸ್ಯರಾದ ಗೋವಿಂದಯ್ಯ, ಬಿ.ಪಿ.ಶ್ರೀನಿವಾಸ್, ಇಂದ್ರಕುಮಾರ್, ಗ್ರಾಪಂ ಮಾಜಿ ಉಪಾಧ್ಯಕ್ಷ ಶ್ರೀನಿವಾಸ್, ವಾಸು, ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ಎಸ್. ಜಗದೀಶ್, ಬನ್ನಂಗಾಡಿ ಯೋಗೇಶ್, ಅರಳಕುಪ್ಪೆ ಪ್ರಶಾಂತ್, ಶಂಕರ್, ರವಿಕುಮಾರ್, ಸತೀಶ್, ಮಹ ದೇವು, ಪ್ರದೀಪ್, ಮಹೇಂದ್ರ, ಶಿವ ಕುಮಾರ್, ಅರುಣ್, ಜಿ.ಎಸ್.ರಾಜು, ಸಮಾಜಕಲ್ಯಾಣ ಅಧಿಕಾರಿ ರಾಘವೇಂದ್ರ, ಪಿಡಿಓ ನಾರಾಯಣ, ಕೆಆರ್‌ಐಡಿಎಲ್ ಎಂಜಿನಿಯರ್ ಸುಮಿತ್ರ ಸೇರಿ ಇತರರಿದ್ದರು.

ಕಡಿಮೆ ವೆಚ್ಚದಲ್ಲಿ ಉತ್ತಮ ಸೇವೆ

ಆದಿಚುಂಚನಗಿರಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಡಾ.ಕೆ.ಎಂ.ಶಿವಕುಮಾರ್ ಹೇಳಿಕೆ



ನಾಗಮಂಗಲ, ಡಿ.19– ತಾಲೂಕಿನ ಬಿ.ಜಿ ನಗರದ ಆದಿಚುಂಚನಗಿರಿ ಸಂಶೋಧನಾ ಕೇಂದ್ರ ಆಸ್ಪತ್ರೆ ನೇತೃತ್ವದಲ್ಲಿ ಕಡಿಮೆ ವೆಚ್ಚದಲ್ಲಿ ಗ್ರಾಮೀಣ ಜನರಿಗೆ ಉತ್ತಮ ಚಿಕಿತ್ಸೆ ಸಿಗಬೇಕು ಎಂಬ ಉದ್ದೇಶ ದಿಂದ ಆದಿಚುಂಚನಗಿರಿ ಸೂಪರ್ ಸ್ಪೆಷಾ ಲಿಟಿ ಆಸ್ಪತ್ರೆಯನ್ನು ನಿರ್ಮಿಸಲಾಗಿದೆ ಎಂದು ಆದಿಚುಂಚನಗಿರಿ ಆಸ್ಪತ್ರೆ ಸಂಶೋ ಧನಾ ಕೇಂದ್ರದ ಮುಖ್ಯಸ್ಥ ಡಾಕ್ಟರ್ ಕೆ ಎಂ ಶಿವಕುಮಾರ್ ಹೇಳಿದರು.

ಬಾಲ ಗಂಗಾಧರನಾಥ ಸ್ವಾಮೀಜಿ ಅವರ ಆಸೆಯಂತೆ ಗ್ರಾಮೀಣ ಭಾಗದ ಜನರಿಗೆ ಹೆಚ್ಚಿನ ಉತ್ತಮ ಸೇವೆ ನೀಡುವ ಉದ್ದೇಶದಿಂದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆರಂಭಿಸಲಾಗಿದ್ದು, ಇದು ಸ್ವಾಮೀಜಿಯವರ ಆಶಯದಂತೆ 150 ಹಾಸಿಗೆಗಳ ಸೌಲಭ್ಯ ಹೊಂದಿದೆ. ಔಷಧಿ ವಿತರಣಾ ಕೇಂದ್ರಗಳಾದ ಪ್ರಧಾನ ಮಂತ್ರಿ ಜನೌಷಧ ಕೇಂದ್ರ ತುರ್ತು ವಾಹನ, ಪ್ರಯೋ ಗಾಲಯ, ತೀವ್ರನಿಗಾ ಘಟಕ, ಡಯಾಲಿಸಿಸ್ ಹಾಗೂ ರಕ್ತ ನಿಧಿ ಸೇವೆಗಳನ್ನು 24 ಗಂಟೆ ಸೇವೆ ಸಹ ಇದೆ ಎಂದು ಮಾಹಿತಿ ನೀಡಿದರು.

ಆದಿಚುಂಚನಗಿರಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾಕ್ಟರ್ ಎಂ.ಜಿ ಶಿವರಾಮು, ಆದಿಚುಂಚಗಿರಿ ವಿಶ್ವವಿದ್ಯಾಲಯದ ಆಡಳಿತ ಅಧಿಕಾರಿ ಬ್ರಿಜೇಶ್, ಸಾರ್ವಜನಿಕ ಸಂಪರ್ಕ ಅಧಿಕಾರಿ ಧರ್ಮೇಂದ್ರ, ಪಿಆರ್‌ಓ ಶಿವಕುಮಾರ್, ಉಪ ವೈದ್ಯಾಧಿಕಾರಿ ಡಾ. ರವಿ ಮುಂತಾದ ವೈದ್ಯರು ಇದ್ದರು.

ಕಬ್ಬಿನ ಗದ್ದೆಗೆ ಬೆಂಕಿ

ಕಿಕ್ಕೇರಿ, ಡಿ.19– ಹೋಬಳಿ ಯಲಾದಹಳ್ಳಿ ಗ್ರಾಮದ ಸಾಸಲು ಎಸ್.ಪಿ. ಮಲ್ಲಿಕಾರ್ಜುನ ಅವರಿಗೆ ಸೇರಿದ್ದ ಕಬ್ಬಿನ ಜಮೀನಿಗೆ ಬೆಂಕಿ ತಗುಲಿ ಅಪಾರ ನಷ್ಟ ಉಂಟಾಗಿದೆ.

ಸರ್ವೆ ನಂ. 161ರಲ್ಲಿದ್ದ 4ಎಕರೆ ಜಮೀನಿನಲ್ಲಿ 2ಎಕರೆ ಕಬ್ಬು ಬೆಳೆದಿದ್ದರು. ಕಬ್ಬು ಕಟಾವು ಮಾಡಲು ಆರಂಭಿಸಿ, ಸಾಗಣೆಗೆ ಸಿದ್ಧಪಡಿಸುತ್ತಿದ್ದರು. ಈ ವೇಳೆ ಆಕಸ್ಮಿಕವಾಗಿ ಕಬ್ಬಿಗೆ ಬೆಂಕಿ ಬಿದ್ದಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ. ಕಬ್ಬಿನ ಜಮೀನಿನಲ್ಲಿದ್ದ ತೆಂಗು, ಹನಿ ನೀರಾವರಿ ಪೈಪುಗಳು ಸಂಪೂರ್ಣ ನಾಶವಾಗಿದೆ. ತಾಲೂಕು ಅಗ್ನಿಶಾಮಕದಳ ಸಿಬ್ಬಂದಿ ಹರಸಾಹಸಪಟ್ಟು ಬೆಂಕಿ ನಂದಿಸಿ, ಅಕ್ಕಪಕ್ಕದಲ್ಲಿದ್ದ ಜಮೀನಿಗೆ ಬೆಂಕಿ ಹರಡದಂತೆ ರಕ್ಷಿಸಿದರು.

ಪಂಚರತ್ನ ಯಾತ್ರೆ ಯಶಸ್ವಿಗೆ ಶಾಸಕ ರವೀಂದ್ರ ಮನವಿ

ಶ್ರೀರಂಗಪಟ್ಟಣ, ಡಿ.19– ಮಾಜಿ ಮುಖ್ಯಮಂತ್ರಿ ಎಚ್.ಡಿ ಕುಮಾರಸ್ವಾಮಿ ನೇತೃತ್ವದ ಪಂಚರತ್ನ ಯಾತ್ರೆ ಡಿ.23 ರಂದು ಶ್ರೀರಂಗಪಟ್ಟಣವನ್ನು ಪ್ರವೇಶಿಸಲಿದ್ದು ಯಾತ್ರೆಯಲ್ಲಿ ಅತಿ ಹೆಚ್ಚಿನ ಸಂಖ್ಯೆ ಕಾರ್ಯಕರ್ತರು ಪಾಲ್ಗೊಳ್ಳುವಂತೆ ಶಾಸಕ ರವೀಂದ್ರ ಶ್ರೀಕಂಠಯ್ಯ ಕರೆ ನೀಡಿದರು.



ಪಟ್ಟಣದ ತಾಲೂಕು ಪಂಚಾಯಿತಿ ತಮ್ಮ ಕೊಠಡಿಯಲ್ಲಿ ಸುದ್ದಿಗಾರರ ಜೊತೆ ಮಾತನಾಡಿ, ನಮ್ಮ ನಾಯಕರಾದ ಎಚ್.ಡಿ ಕುಮಾರಸ್ವಾಮಿ ನೇತೃತ್ವದಲ್ಲಿ ಪಂಚರತ್ನ ಯಾತ್ರೆ ಕ್ಯಾತುಂಗೆರೆ ಗ್ರಾಮದಿಂದ ಬೇವನಹಳ್ಳಿ, ಕೊತ್ತತ್ತಿ ಮಾರ್ಗವಾಗಿ ಪಿ.ಹಳ್ಳಿ, ಆಲದಹಳ್ಳಿ, ಕೊಡಿಯಾಲ, ಅರಕೆರೆ, ತಡಗವಾಡಿ, ಮಂಡ್ಯಕೊಪ್ಪಲು, ಮಹದೇವಪುರ, ಮರಳಗಾಲ, ಬಾಬುರಾಯನ ಕೊಪ್ಪಲು, ಕಿರಂಗೂರು, ಶ್ರೀರಂಗಪಟ್ಟಣ ಮೂಲಕ ಪಾಲಹಳ್ಳಿ, ಪಂಪ್ ಹೊಸಹಳ್ಳಿ, ಬೆಳಗೊಳ, ಹುಲಿಕೆರೆ, ಪೇಪರ್ ಮಿಲ್ ಸರ್ಕಲ್ ಮಾರ್ಗವಾಗಿ ಕೆಆರ್‌ಎಸ್ ತಲುಪಲಿದೆ ಎಂದು ಮಾಹಿತಿ ನೀಡಿದರು.

ಜೆಡಿಎಸ್ ತಾಲೂಕು ಅಧ್ಯಕ್ಷ ಪೈ ಮುಕುಂದ ಮಾತನಾಡಿ, ಡಿ.20 ರಂದು ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ಪಂಚರತ್ನ ಯಾತ್ರೆ ಸಂಬಂಧ ಪೂರ್ವಭಾವಿ ಸಭೆ ನಡೆಯಲಿದ್ದು, ಕಾರ್ಯಕರ್ತರು ಹಾಗೂ ಕುಮಾರಸ್ವಾಮಿ ಅವರ ಅಭಿಮಾನಿಗಳು ಭಾಗವಹಿಸುವಂತೆ ಮನವಿ ಮಾಡಿದರು. ನಗುವನಹಳ್ಳಿ ಶಿವಸ್ವಾಮಿ, ಪುರಸಭೆ ಮಾಜಿ ಉಪಾಧ್ಯಕ್ಷ ಎಸ್.ಪ್ರಕಾಶ್, ಸದಸ್ಯ ಎಸ್.ಟಿ. ರಾಜು ಸೇರಿ ಇತರರು ಇದ್ದರು.

ವಿವಿಧ ದೇವಾಲಯಗಳ ಜೀರ್ಣೋದ್ಧಾರಕ್ಕೆ ನೆರವು



ಕೆ.ಆರ್.ಪೇಟೆ, ಡಿ.19– ವಿವಿಧ ಗ್ರಾಮಗಳ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸಮಾಜ ಸೇವಕ, ಕಾಂಗ್ರೆಸ್ ಮುಖಂಡ ಬೂಕನಕೆರೆ ವಿಜಯ್ ರಾಮೇಗೌಡ ಆರ್ಥಿಕ ನೆರವು ನೀಡಿದರು.

ತಾಲೂಕಿನ ಕಿಕ್ಕೇರಿ ಹೋಬಳಿ ಆನಗೊಳ ಗ್ರಾಮದಲ್ಲಿ ಲಕ್ಷ್ಮೀದೇವಿ (ಆನಗೊಳಮ್ಮ) ದೇವಾಲಯ ಹಾಗೂ ಕಡೆಹೆಮ್ಮಿಗೆ ಗ್ರಾಮದ ಬೀರೇಶ್ವರ, ಈಶ್ವರ ಸ್ವಾಮಿ ದೇವಾಲಯಗಳ ಜೀರ್ಣೋದ್ಧಾರಕ್ಕೆ ತಲಾ 50 ಸಾವಿರ ರೂ.ಗಳನ್ನು ದೇಣಿಗೆ ನೀಡಿದರು.

ಮುಖಂಡ ಮಂಜುನಾಥ್ ಮಾತನಾಡಿ, ನಮ್ಮ ಆನಗೊಳ ಗ್ರಾಮದಲ್ಲಿ ನೂತನವಾಗಿ ಲಕ್ಷ್ಮೀದೇವಿ ದೇವಾಲಯವನ್ನು ಗ್ರಾಮಸ್ಥರು ಸೇರಿ ನಿರ್ಮಿಸುತ್ತಿರುವ ಕಾರಣ ಆರ್ಥಿಕ ನೆರವು ನೀಡುವಂತೆ ಮನವಿಗೆ ಸ್ಪಂದಿಸಿದ ಸಮಾಜ ಸೇವಕ ವಿಜಯ್ ರಾಮೇಗೌಡ ಅವರು ನಮ್ಮ ಗ್ರಾಮಕ್ಕೆ ಆಗಮಿಸಿ, ಸಹಾಯ ಮಾಡಿದ್ದಾರೆ ಎಂದರು.

ಸಮಾಜ ಸೇವಕ ಕಾಂಗ್ರೆಸ್ ಮುಖಂಡ ಬೂಕನಕೆರೆ ವಿಜಯ್ ರಾಮೇಗೌಡ ಮಾತನಾಡಿ, ನಮ್ಮ ಊರಿನ ದೇವಾಲಯಗಳ ಜೀರ್ಣೋದ್ಧಾರಕ್ಕೆ ಹಾಗೂ ಪುನರ್ ನಿರ್ಮಾಣಕ್ಕೆ ಪಕ್ಷಾತೀತವಾಗಿ ಪಾಲ್ಗೊಂಡು ನಮ್ಮ ಕೈಲಾದ ಸೇವೆ ಹಾಗೂ ಆರ್ಥಿಕ ನೆರವು ನೀಡಬೇಕು ಎಂದರು.

ಜಿಪಂ ಮಾಜಿ ಸದಸ್ಯ ಕೋಡಿಮಾರನಹಳ್ಳಿ ದೇವರಾಜು, ಜಿಪಂ ಮಾಜಿ ಸದಸ್ಯ ದೇವರಾಜು, ಮಾಧವ ಪ್ರಸಾದ್, ನಾರಾಯಣಪ್ಪ, ಶ್ಯಾಮಣ್ಣ, ಗಣೇಶ್, ನಾಗೇಂದ್ರಕುಮಾರ್, ಎ.ಆರ್. ಮಂಜುನಾಥ್, ಶಂಭೇಗೌಡ, ಶ್ರೀನಿವಾಸ್ ನಾಗರಾಜು, ದೇವರಾಜು, ಪುನೀತ್, ಚಲುವೇಗೌಡ, ಮಂಜುನಾಥ್ ಶಾಂತರಾಜು ನಂಜಪ್ಪ ಆನೆ ಗೋಳ ಮುಖಂಡರು ಸೇರಿ ಇತರರು ಇದ್ದರು.

ರೈತ ದಿನಾಚರಣೆ: 23ರಂದು ಓಟದ ಸ್ಪರ್ಧೆ



ಪಾಂಡವಪುರ, ಡಿ.19– ತಾಲೂಕಿನ ಕ್ಯಾತನಹಳ್ಳಿ ಗ್ರಾಮದಲ್ಲಿ ವಿಶ್ವ ರೈತ ದಿನಾಚರಣೆ ಹಾಗೂ ದಿವಂಗತ ಕೆ.ಎಸ್.ಪುಟ್ಟಣ್ಣಯ್ಯ ಅವರ ಜನ್ಮದಿನದ ಅಂಗವಾಗಿ ಡಿ.23ರಂದು ಜಿಲ್ಲಾಮಟ್ಟದ ಪುರುಷ ಮತ್ತು ಮಹಿಳೆಯರ ರಸ್ತೆ ಓಟದ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿದೆ ಎಂದು ರೈತನಾಯಕಿ ಸುನೀತ ಪುಟ್ಟಣ್ಣಯ್ಯ ಹೇಳಿದರು.

ಕ್ಯಾತನಹಳ್ಳಿ ಗ್ರಾಮದ ಕ್ಯಾತನಹಳ್ಳಿ ಕ್ರೀಡಾ ಒಕ್ಕೂಟ ಆಯೋಜಿಸಿರುವ ಜಿಲ್ಲಾ ಮಟ್ಟದ ಪುರುಷ ಮತ್ತು ಮಹಿಳೆಯರ ರಸ್ತೆ ಓಟದ ಸ್ಪರ್ಧೆ ಗೆ ಬೆಳಗ್ಗೆ 7ಕ್ಕೆ ಚಾಲನೆ ನೀಡಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಕ್ಯಾತನಹಳ್ಳಿ ಗ್ರಾಮದ ಕೆ.ಎಸ್.ಪುಟ್ಟಣ್ಣಯ್ಯ ವೃತ್ತದಿಂದ ರಸ್ತೆ ಓಟಕ್ಕೆ ಚಾಲನೆ ನೀಡಲಾಗುವುದು. ಪುರುಷರಿಗೆ 10 ಕಿಮೀ ಹಾಗೂ ಮಹಿಳೆಯರಿಗೆ 6 ಕಿಮೀ ವರೆಗೆ ಓಟದ ಸ್ಪರ್ಧೆ ಆಯೋಜಿಸಲಾಗಿದೆ. ಆಸಕ್ತರು ಡಿ.21ರೊಳಗಾಗಿ ಹೆಸರು ನೋಂದಾಯಿಸಿಕೊಳ್ಳಬೇಕು. ಪ್ರವೇಶಾತಿ ಶುಲ್ಕ ಇರುವುದಿಲ್ಲ ಎಂದರು.

ಪುರುಷ ವಿಭಾಗದಲ್ಲಿ ವಿಜೇತರಿಗೆ ಪ್ರಥಮ ಬಹುಮಾನ 5 ಸಾವಿರ, ದ್ವಿತೀಯ ಬಹುಮಾನ 4 ಸಾವಿರ, ಮೂರನೇ ಬಹುಮಾನ 3 ಸಾವಿರ ಹಾಗೂ ಮಹಿಳೆಯರ ವಿಭಾಗದಲ್ಲಿ ವಿಜೇತರಿಗೆ 4 ಸಾವಿರ ಪ್ರಥಮ, 3 ಸಾವಿರ ದ್ವಿತೀಯ ಹಾಗೂ ಮೂರನೇ ಬಹುಮಾನ 2 ಸಾವಿರ ನೀಡಲಾಗುವುದು. ಮಾಹಿತಿಗೆ 9611233944, 9880816027, 94814 42615ಗೆ ಸಂಪರ್ಕಿಸಿ ಎಂದರು.

ಗೋಷ್ಠಿಯಲ್ಲಿ ರೈತ ಮುಖಂಡ ಕೆ.ಟಿ. ಗೋವಿಂದೇಗೌಡ, ಮೋಹನ್‌ಕುಮಾರ್, ಮನೋಹರ್, ರವಿಕುಮಾರ್, ಕುಮಾರ್, ಡಾ.ಅಭಿನಯ್, ಶಿವರಾಜು ಇದ್ದರು.

ಭಾರತೀನಗರ: ರೌಡಿಶೀಟರ್‌ಗಳ ಪರೇಡ್

ಭಾರತೀನಗರ, ಡಿ.19– ಭಾರತೀನಗರದ ಪೊಲೀಸ್ ಠಾಣೆಯಲ್ಲಿ ರೌಡಿಶೀಟರ್‌ಗಳ ಪರೇಡ್ ನಡೆಸಲಾಯಿತು. ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಕೆಎಂ ದೊಡ್ಡಿ ಠಾಣಾ ಪೊಲೀಸರು ರೌಡಿಶೀಟರ್‌ಗಳ ಪರೇಡ್ ನಡೆಸಿ ಯಾವುದೇ ಗಲಾಟೆ ನಡೆಯದಂತೆ ಎಚ್ಚರಿಕೆ ನೀಡಿದರು.

ಸಿಪಿಐ ಶಿವಮಲಯ್ಯ ಮಾತನಾಡಿ. ನಮ್ಮ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ವಿವಿಧ ಅಪರಾಧಗಳಲ್ಲಿ ಭಾಗಿಯಾದ 59 ಮಂದಿಗೆ ರೌಡಿಶೀಟರ್ ಪ್ರಕರಣ ದಾಖಲಿಸಲಾಗಿದೆ. ಅದರಲ್ಲಿ 35 ಮಂದಿ ರೌಡಿ ಶೀಟರ್‌ಗಳು ಈ ಪರೇಡ್‌ನಲ್ಲಿ ಭಾಗಿಯಾಗಿದ್ದಾರೆ ಎಂದು ತಿಳಿಸಿದರು. ಕಾನೂನು ಬಾಹಿರ ಚಟುವಟಿಕೆಗಳಲ್ಲಿ ಭಾಗವಹಿಸಬಾರದು ಒಂದು ವೇಳೆ ಗಲಾಟೆಗಳಿಗೆ ಮುಂದಾದರೆ ಜೈಲಿಗೆ ಅಥವಾ ಗಡಿಪಾರು ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಪಿಎಸ್‌ಐ ರಾಮಸ್ವಾಮಿ ಎ ಎಸ್ ಐ ರಾಜೇಂದ್ರ ವೆಂಕಟೇಶ್ ಕೃಷ್ಣಪ್ಪ, ಪುಟ್ಟಮ್ಮ, ಸಿಬ್ಬಂದಿ ಪ್ರಭು, ನಾಗರಾಜು, ರವಿಶಂಕರ್, ನಟರಾಜು, ಮಹೇಶ ಸೇರಿ ಇತರರಿದ್ದರು.

ರಾಜ್ಯಾದ್ಯಂತ 'ಟಿಪ್ಪು ನಿಜಕನಸುಗಳು' ಪ್ರದರ್ಶನ: ವೇಳಾಪಟ್ಟಿ ಪ್ರಕಟ

ಮೈಸೂರು, ಡಿ.19(ಎಂಕೆ)– ಮೈಸೂರು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ನಿರ್ದೇಶನದ 'ಟಿಪ್ಪು ನಿಜಕನಸುಗಳು' ನಾಟಕ ರಾಜ್ಯದಾದ್ಯಂತ ಪ್ರದರ್ಶನಕ್ಕೆ ವೇಳಾಪಟ್ಟಿ ಸಿದ್ಧವಾಗಿದೆ. ರಂಗಾಯಣದ ಭೂಮಿಗೀತ ಹಾಗೂ ಕಲಾಮಂದಿರ ಸೇರಿ ಮೈಸೂರಿನಲ್ಲೇ 12 ಭರ್ತಿ ಪ್ರದರ್ಶನ ಕಂಡಿರುವ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನದ ಪ್ರಯಾಣ ರಾಜ್ಯದಾದ್ಯಂತ ಸಾಗಿದೆ. ಬೆಂಗಳೂರಿನ ಕಲಾಗ್ರಾಮದಲ್ಲಿ ಡಿ.24 ಮತ್ತು 25 ರಂದು ಸಂಜೆ 6 ಗಂಟೆಗೆ ನಾಟಕದ 13 ಮತ್ತು 14ನೇ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಹಾಗೆಯೇ ಡಿ.27 ರಂದು ದಾವಣಗೆರೆಯ ಚಿಂದೋಡಿಲೀಲಾ ರಂಗಮಂದಿರ, ಡಿ.28 ಮತ್ತು 29ರಂದು ಚಿತ್ರದುರ್ಗದ ತರಾಸು ರಂಗಮಂದಿರ, ಡಿ.31 ಹಾಗೂ ಜ.1ರಂದು ಶಿವಮೊಗ್ಗ ರಂಗಾಯಣದಲ್ಲಿ, ಜ.6 ರಂದು ಹಾಸನದ ಹಾಸನಾಂಬ ಕಲಾಕ್ಷೇತ್ರ, ಜ.8 ರಂದು ಮೂಡುಬಿದಿರೆಯ ಆಳ್ವಾಸ್ ರಂಗ ಮಂದಿರ, ಜ.9 ರಂದು ಪುತ್ತೂರಿನ ವಿವೇಕಾನಂದ ಕಾಲೇಜು, ಜ.11 ರಂದು ಗೋಣಿಕೊಪ್ಪದ ಕೂರ್ಗ್ ಪಬ್ಲಿಕ್ ಸ್ಕೂಲ್ ರಂಗಮಂದಿರ ಹಾಗೂ ಜ.14 ಮತ್ತು 15 ರಂದು ಮಂಡ್ಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ 'ಟಿಪ್ಪು ನಿಜಕನಸುಗಳು' ನಾಟಕ ಪ್ರದರ್ಶನಗೊಳ್ಳಲಿದೆ.

ಆನ್‌ಲೈನ್ ಟಿಕೆಟ್ ಖರೀದಿ: ನಾಟಕ ಪ್ರದರ್ಶನ ನಡೆಯುವ ಸ್ಥಳಗಳಲ್ಲಿ ಅಲ್ಲದೆ ಆನ್‌ಲೈನ್ ಮೂಲಕ ಟಿಕೆಟ್ ಖರೀದಿಗೆ ಅವಕಾಶ ನೀಡಲಾಗಿದೆ. ರಂಗಾಸಕ್ತರು ವೆಬ್‌ಸೈಟ್ www.rangayana.org ಮೂಲಕ ಟಿಕೆಟ್ ಕಾಯ್ದಿರಿಸಬಹುದಾಗಿದೆ.

ಇಬ್ಬರ ಬಂಧನ:1.208 ಕೆಜಿ ಗಾಂಜಾ ವಶ

ಮೈಸೂರು, ಡಿ.19(ಎಂಕೆ)– ಗಾಂಜಾ ಹೊಂದಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಿರುವ ಸೆನ್ ಕ್ರೈಂ ಠಾಣೆ ಪೊಲೀಸರು, ಬಂಧಿತರಿಂದ 1 ಕೆಜಿ 208 ಗ್ರಾಂ ಗಾಂಜಾ ಮತ್ತು 2 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ಜೆಎಸ್‌ಎಸ್ 1ನೇ ಹಂತದ ರಾಜ್‌ಕುಮಾರ್ ರಸ್ತೆಯಲ್ಲಿರುವ ನೀರು ಸರಬರಾಜು ಕಚೇರಿ ಹಿಂಭಾಗದ ರಸ್ತೆಯಲ್ಲಿ ಗಸ್ತು ತಿರುಗುತ್ತಿದ್ದ ಪೊಲೀಸರನ್ನು ಕಂಡು ಗಾಬರಿಯಿಂದ ಓಡಿಹೋಗುತ್ತಿದ್ದ ಇಬ್ಬರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದಾಗ ಅವರ ಬಳಿ 30 ಸಾವಿರ ರೂ. ಮೌಲ್ಯದ 1 ಕೆಜಿ 208 ಗ್ರಾಂ ಗಾಂಜಾ ಇರುವುದು ಕಂಡುಬಂದಿದೆ. ಹೆಚ್ಚಿನ ವಿಚಾರಣೆಗಾಗಿ ಅವರ ಬಳಿಯಿದ್ದ 2 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದಿರುವ ಸೆನ್ ಕ್ರೈಂ ಠಾಣೆ ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ನೇಕಾರರಿಗೆ ಉಚಿತ ವಿದ್ಯುತ್: ಇಂದು ಆದೇಶ ಆಗುತ್ತೆ ಎಂದ ಸಿಎಂ

ಬೆಳಗಾವಿ: ವಿದ್ಯುತ್ ಕೈಮಗ್ಗದಲ್ಲಿ ಕೆಲಸ ಮಾಡುತ್ತಿರುವ ನೇಕಾರರಿಗೆ ನೇಕಾರ ಸಮ್ಮಾನ ಯೋಜನೆ, 2 ಲಕ್ಷದವರೆಗೆ ಶೂನ್ಯ ಬಡ್ಡಿ ದರದಲ್ಲಿ ಸಾಲ ಒದಗಿಸಿದ ಬೆನ್ನಲ್ಲೇ ನೇಕಾರರಿಗೆ ಮತ್ತೊಂದು ಶುಭ ಸುದ್ದಿ ನೀಡಿದ ಸಿಎಂ ಬೊಮ್ಮಾಯಿ, ನೇಕಾರರಿಗೆ ತಮಿಳುನಾಡಿನ ರೀತಿ ಉಚಿತ ವಿದ್ಯುತ್ ಪೂರೈಸುತ್ತೇವೆ ಎಂದು ಘೋಷಣೆ ಮಾಡಿದ್ದಾರೆ. ಬಹುದಿನಗಳ ಬೇಡಿಕೆ ಈಡೇರಿಸಿದ್ದಕ್ಕಾಗಿ ನೇಕಾರ ಸಮುದಾಯ ಸುವರ್ಣ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಇಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸನ್ಮಾನಿಸಿತು. ಈ ವೇಳೆ ಮಾತನಾಡಿದ ಬೊಮ್ಮಾಯಿ, ನೇಕಾರರಿಗೆ ತಮಿಳುನಾಡಿನ ರೀತಿ ಉಚಿತ ವಿದ್ಯುತ್ ಪೂರೈಸುತ್ತೇವೆ. ಅಲ್ಲಿ ಎಷ್ಟು ಫ್ರೀ ಕೊಡುತ್ತಿದೆಯೋ ಅಷ್ಟನ್ನು ನಾವು ಇಲ್ಲಿ ಕೊಡುತ್ತೇವೆ. ಯುನಿಟ್‌ಗೆ 80 ರೂ ಇದ್ದು, ಅದನ್ನು 40 ರೂ.ಗೆ ಇಳಿಸುತ್ತೇವೆ. ನಿಮ್ಮ ಪ್ರಮುಖ ಬೇಡಿಕೆಗಳಿಗೆ ನಾನು ಈಗಾಗಲೇ ಒಪ್ಪಿಗೆ ಕೊಟ್ಟಿದ್ದೇನೆ ಎಂದು ಹೇಳಿದರು.



ನಮ್ಮ ಮಕ್ಕಳಿಗೆ ಸ್ಕಾಲರ್‌ಶಿಪ್ ಕೊಡಿ ಎಂದು ನೀವು ಕೇಳಿರಲಿಲ್ಲ. ಆದರೆ ನಾನು ನೇಕಾರರ ಮಕ್ಕಳಿಗೂ ವಿದ್ಯಾನಿಧಿ ವಿಸ್ತರಣೆ ಮಾಡಿದ್ದೇನೆ. ಜನವರಿಯೊಳಗೆ ನೇಕಾರರ ಮಕ್ಕಳಿಗೆ ವಿದ್ಯಾನಿಧಿ ಯೋಜನೆ ಜಾರಿಯಾಗುತ್ತೆ. ನೇಕಾರರಿಗೆ ಘೋಷಿಸಿದ ಯೋಜನೆ ತಕ್ಷಣ ಜಾರಿಗೆ ಆದೇಶ ಪ್ರಕಟಿಸುತ್ತೇನೆ. ನಮ್ಮ ಸರ್ಕಾರ ನೇಕಾರರಿಗೆ ಸ್ಪಂದಿಸಿದಂತೆ ಯಾವ ಸರ್ಕಾರವೂ ಸ್ಪಂದಿಸಿಲ್ಲ ಎಂದರು.

ಡಿ.ಕೆ.ಶಿವಕುಮಾರ್ ಒಡೆತನದ ಶಿಕ್ಷಣ ಸಂಸ್ಥೆಗಳ ಮೇಲೆ CBI ದಾಳಿ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಮಾಲೀಕತ್ವದ ಶಿಕ್ಷಣ ಸಂಸ್ಥೆಗಳ ಮೇಲೆ ಸಿಬಿಐ ದಾಳಿ ನಡೆಸಿದ್ದು, ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿರುವ ನ್ಯಾಷನಲ್ ಎಜುಕೇಶನ್ ಫೌಂಡೇಷನ್ ಮೇಲೆ ದಾಳಿ ನಡೆದಿದೆ.



ಸದ್ಯ ಡಿ.ಕೆ. ಶಿವಕುಮಾರ್ ಅವರು ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಭಾಗವಹಿಸಿದ್ದು, ಇದೇ ಸಂದರ್ಭದಲ್ಲಿ ಇತ್ತ ಬೆಂಗಳೂರಿನಲ್ಲಿ ಸಿಬಿಐ ದಾಳಿ ನಡೆಸಿದೆ. ಅಧಿಕಾರಿಗಳು ಪ್ರಮುಖ ದಾಖಲೆಗಳನ್ನು ಪರಿಶೀಲನೆ ನಡೆಸುತ್ತಿದ್ದಾರೆ ಎನ್ನುವುದು ತಿಳಿದು ಬಂದಿದೆ.

ಈ ಹಿಂದೆ ಕೂಡ ಡಿ.ಕೆ. ಶಿವಕುಮಾರ್ ಅವರ ಮನೆ ಮೇಲೆ ಇಡಿ, ಆದಾಯ ತೆರಿಗೆ ಅಧಿಕಾರಿಗಳು, ಸಿಬಿಐ ಅಧಿಕಾರಿಗಳು ದಾಳಿ ನಡೆಸಿದ್ದು, ಅದಕ್ಕೆ ಸಂಬಂಧಪಟ್ಟಂತೆ ಅವರನ್ನು ಸದ್ಯ ವಿಚಾರಣೆ ನಡೆಸುತ್ತಿದೆ. ಡಿಕೆ ಶಿವಕುಮಾರ್ ಅವರು ನ್ಯಾಷನಲ್ ಎಜುಕೇಶನ್ ಫೌಂಡೇಶನ್ ಸಂಸ್ಥೆಯ ಛೇರ್ಮನ್ ಆಗಿದ್ದು, ಅವರ ಮಗಳಾದ ಐಶ್ವರ್ಯ ಅವರು ಕಾರ್ಯದರ್ಶಿಯಾಗಿದ್ದಾರೆ. ಇಂದು ಮಧ್ಯಾಹ್ನ ಎರಡು ಗಂಟೆ ಸುಮಾರಿಗೆ ದಾಳಿ ನಡೆದಿದೆ ಎನ್ನಲಾಗಿದೆ.

ದಾಳಿ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿರುವ ಡಿಕೆ ಶಿವಕುಮಾರ್, ಇಂದು ದಾಳಿ ವೇಳೆಯಲ್ಲಿ ನಮ್ಮ ಟ್ರಸ್ಟಿಗಳನ್ನು ಭೇಟಿ ಮಾಡಿ, ಕೆಲವು ದಾಖಲೆಗಳನ್ನು ಪರಿಶೀಲನೆ ನಡೆಸುತ್ತಿದ್ದಾರೆ. ನನ್ನ ವಕೀಲರಿಗೆ ಕೂಡ ನಾನು ನೀಡಿರುವ ಹಣಕ್ಕೆ ಸಂಬಂಧಪಟ್ಟಂತೆ ನೋಟಿಸ್ ನೀಡಿದ್ದಾರೆ. ಇದಲ್ಲದೇ ನಮ್ಮ ಊರಿಗೆ ತೆರಳಿ ಅಲ್ಲಿರುವ ಜಮೀನು ಹಾಗೂ ಮನೆಯನ್ನು ಸುತ್ತು ಹಾಕಿ ತಹಶೀಲ್ದಾರ್ ಅವರಿಂದ ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ನನ್ನ ವಿರುದ್ಧ ಕೇಸ್‌ಗಳು ನಡೆಯುತ್ತಿದ್ದು, ಎಲ್ಲಾ ಕಡೆಯಿಂದ ನನಗೆ ತೊಂದರೆ ನೀಡುತ್ತಿದ್ದಾರೆ ಎಂದು ಹೇಳಿದರು.

ಸಿಬಿಐ ದಾಳಿಯಿಂದ ನನಗೆ ಯಾವುದೇ ಭಯವಿಲ್ಲ, ನಾನು ತಪ್ಪು ಮಾಡಿಲ್ಲ. ಹೆಚ್. ವಿಶ್ವನಾಥ್ ಬಗ್ಗೆ ಇತ್ತೀಚೆಗೆ ಹಣಕಾಸಿನ ಬಗ್ಗೆ ರಾಜಾರೋಷವಾಗಿ ಹೇಳಿದ್ದರು ಕೂಡ ಯಾರು ಈ ಬಗ್ಗೆ ಮಾತನಾಡಿಲ್ಲ. ಇದಲ್ಲದೇ ವಿರೋಧಿಗಳನ್ನು ಮಟ್ಟ ಹಾಕುವ ನಿಟ್ಟಿನಲ್ಲಿ ಬಿಜೆಪಿ ಮುಂದಾಗಿದ್ದು, ಈ ಬಗ್ಗೆ ನ್ಯಾಯಾಲಯ ಜನತೆಗಳ ಜೊತೆಗೆ ನಾವು ಹೋಗುತ್ತೇವೆ ಎಂದು ಹೇಳಿದರು. ಎರಡು ದಿನಗಳ ಹಿಂದೆ ಮಾಧ್ಯಮಗಳ ಜೊತೆಗೆ ಕೊಪ್ಪಳದಲ್ಲಿ ಮಾತನಾಡಿದ್ದ ಡಿ.ಕೆ. ಶಿವಕುಮಾರ್, ಚುನಾವಣೆ ಹಿನ್ನಲೆಯಲ್ಲಿ ನನಗೆ ಸೇರಿದಂತೆ ಹಲವರಿಗೆ ಸಿಬಿಐ ತೊಂದರೆ ಕೊಡುತ್ತಿದೆ ಎಂದು ಡಿ.ಕೆ. ಶಿವಕುಮಾರ್ ಬೇಸರ ವ್ಯಕ್ತಪಡಿಸಿದರು.

ಯಶಸ್ವಿ 'ವಾಟರ್ ಅದಾಲತ್'

ಕಾರ್ಪೊರೇಟರ್ ಕೆ.ವಿ.ಶ್ರೀಧರ್ ನೇತೃತ್ವದಲ್ಲಿ ಕುಡಿಯುವ ನೀರಿನ ಸಂಬಂಧ ಕುಂದು–ಕೊರತೆಗಳ ನಿವಾರಣೆ

ಮೈಸೂರು, ಡಿ.19(ಎಂಕೆ)– ನಗರಪಾಲಿಕೆ ವಾಣಿವಿಲಾಸ ನೀರು ಸರಬರಾಜು ಕುರಿತ ಕುಂದು–ಕೊರತೆಗಳ 'ವಾಟರ್ ಅದಾಲತ್' ಅನ್ನು ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ನೇತೃತ್ವದಲ್ಲಿ ವಾರ್ಡ್ ನಂ 1,2 ಮತ್ತು 3ರ ವ್ಯಾಪ್ತಿಯಲ್ಲಿ ಸೋಮವಾರ ನಡೆಸಲಾಯಿತು.



ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ವಾಣಿ ವಿಲಾಸ ನೀರು ಸರಬರಾಜಿನಿಂದ ಉಂಟಾಗಿರುವ ಕುಂದು–ಕೊರತೆಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಮೊದಲ ಬಾರಿಗೆ ಪ್ರಾಯೋಗಿಕವಾಗಿ 'ವಾಟರ್ ಅದಾಲತ್' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗಾಗಲೇ ಸಾಕಷ್ಟು ಜನರು ಬಂದು ನೀರು ಸರಬರಾಜಿನಲ್ಲಿದ್ದ ತಮಗಿದ್ದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದರೆ ನಾಳೆಯೂ ಮುಂದುವರೆಸಲಾಗುವುದು ಎಂದು ತಿಳಿಸಿದರು.

2021ರಲ್ಲಿ ಅಂದಿನ ಪಾಲಿಕೆ ಆಯುಕ್ತರಾಗಿದ್ದ ಗುರುದತ್ ಹೆಗಡೆಯವರೊಂದಿಗೆ 'ವಾಟರ್ ಅದಾಲತ್' ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಚರ್ಚಿಸಲಾಗಿತ್ತು. ಕಾರ್ಯಗತವಾಗುವಷ್ಟರಲ್ಲಿ ಅವರು ವರ್ಗಾವಣೆಯಾದರು. ನಂತರ ಸ್ಥಗಿತಗೊಂಡಿದ್ದ 'ವಾಟರ್ ಅದಾಲತ್' ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಇದರಿಂದ ವಾಟರ್ ಬಿಲ್ ಸಮಸ್ಯೆ, ನೀರು ಸರಬರಾಜಿನಲ್ಲಿ ವ್ಯತ್ಯಯ, ಖಾತೆ ವರ್ಗಾವಣೆ ಸೇರಿದಂತೆ ಕುಡಿಯುವ ನೀರು ಸರಬರಾಜಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ. ಪಾಲಿಕೆ ಅಧಿಕಾರಿಗಳು ಕೂಡ ಉತ್ತಮವಾಗಿ ಸ್ಪಂದಿಸುತ್ತಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಬೆಳಗಾವಿ ಅಧಿವೇಶನ ಆರಂಭ ಅಗಲಿದ ಗಣ್ಯರಿಗೆ ವಿಧಾನಸಭೆ ಸಂತಾಪ


ಬೆಂಗಳೂರು, ಡಿ. 19 (ಕೆಎಂಶಿ)–ಬೆಳಗಾವಿಯ ಸುವರ್ಣಸೌಧದಲ್ಲಿ ಸೋಮವಾರ ಆರಂಭವಾದ ಚಳಿಗಾಲ ಅಧಿವೇಶನದಲ್ಲಿ ಇತ್ತೀಚೆಗೆ ನಿಧನರಾದ ಮಹನೀಯರಿಗೆ ಸಂತಾಪ ಸೂಚಿಸಲಾಯಿತು.



ವಿಧಾನಸಭೆಯ ಹಾಲಿ ಉಪಸಭಾಧ್ಯಕ್ಷರಾಗಿದ್ದ ಆನಂದ ಮಾಮನಿ, ಉತ್ತರಪ್ರದೇಶ ಮಾಜಿ ಸಿಎಂ ಮುಲಾಯಂಸಿಂಗ್ ಯಾದವ್, ರಾಜ್ಯಸಭೆ ಮಾಜಿ ಸದಸ್ಯ ಅಬ್ದುಲ್ ಸಮದ್ ಸಿದ್ದಿಕಿ, ಲೋಕಸಭೆ ಮಾಜಿ ಸದಸ್ಯ ಕೋಳೂರು ಬಸವನಗೌಡ, ಮಾಜಿ ಸಚಿವರಾಗಿದ್ದ ಜಬ್ಬಾರಖಾನ್ ಹೊನ್ನಳ್ಳಿ, ಸುಧೀಂದ್ರರಾವ್ ಕಸ್ಬೆ ಮತ್ತು ಮಾಜಿ ಸದಸ್ಯರುಗಳಾಗಿದ್ದ ಎನ್.ಟಿ.ಬೊಮ್ಮಣ್ಣ, ಶ್ರೀಶೈಲಪ್ಪ ಬಿದರೂರು, ಕುಂಬ್ಳೆ ಸುಂದರರಾವ್, ಶಂಕರಗೌಡ ಎನ್.ಪಾಟೀಲ್ ಸೇರಿದಂತೆ ಅಗಲಿದ ಗಣ್ಯರಿಗೆ ವಿಧಾನಮಂಡಲ ಸಂತಾಪ ಸೂಚಿಸಲಾಯಿತು. ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಸಂತಾಪ ಸೂಚನೆ ಮಂಡಿಸಿ ನಿಧನ ಹೊಂದಿದ ಆನಂದ ಮಾಮನಿ ಸೇರಿದಂತೆ ಗಣ್ಯರ ಹೆಸರುಗಳನ್ನು ಪ್ರಸ್ತಾಪಿಸಿ ಅವರ ಜೀವನ, ಸಾಧನೆಗಳನ್ನು ತಿಳಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಆನಂದ ಮಾಮನಿ, ಉತ್ತರ ಪ್ರದೇಶದ ಮಾಜಿ ಸಿಎಂ ಮುಲಾಯಂಸಿಂಗ್ ಯಾದವ ಸೇರಿದಂತೆ ಅಗಲಿದ ಗಣ್ಯರೊಂದಿಗಿನ ಒಡನಾಟವನ್ನು ಇದೇ ಸಂದರ್ಭದಲ್ಲಿ ಸ್ಮರಿಸಿದರು. ಸಚಿವರಾದ ಸಿ.ಸಿ.ಪಾಟೀಲ್, ಶಶಿಕಲಾ ಜೊಲ್ಲೆ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ, ಸದನದ ಸದಸ್ಯರಾದ ಬಂಡೆಪ್ಪ ಕಾಶೆಂಪುರ, ಎಚ್.ಕೆ.ಪಾಟೀಲ್, ಯು.ಟಿ.ಖಾದರ್, ಜಿ.ಸೋಮಶೇಖರರೆಡ್ಡಿ, ವೆಂಕಟರಾವ್ ನಾಡಗೌಡ, ವಿ.ತುಕಾರಾಂ ಸೇರಿದಂತೆ ಅನೇಕರು ಅಗಲಿದ ಗಣ್ಯರ ಕುರಿತು ಮಾತನಾಡಿ ಅವರ ಒಡನಾಟ ಮತ್ತು ಸಾಧನೆಗಳನ್ನು ಸ್ಮರಿಸಿಕೊಂಡರು. ಅಗಲಿದ ಗಣ್ಯರಿಗೆ ಸಂತಾಪ ಸೂಚಿಸಿದ ನಂತರ ಸಭಾಧ್ಯಕ್ಷರು ಸದನವನ್ನು ನಾಳೆಗೆ ಮುಂದೂಡಿದರು.

ಬೊಮ್ಮಾಯಿ ಮನವಿಗೆ ಪ್ರತಿಭಟನೆ ಹಿಂಪಡೆದ ರೈತರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೆಳಗಾವಿಯ ಸುವರ್ಣಸೌಧದ ಬಳಿ ಕೋಡಿಹಳ್ಳಿ ಚಂದ್ರಶೇಖರ್ ನೇತೃತ್ವದಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದರು. ಆದರೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮನವಿ ನಂತರ ರೈತರು ಪ್ರತಿಭಟನೆ ಹಿಂಪಡೆದಿದ್ದಾರೆ. ಇಂದು (ಡಿ.19) ಬೆಳಗ್ಗೆ ಚಳಿಗಾಲದ ಅಧಿವೇಶನ ಆರಂಭವಾಗುತ್ತಿದಂತೆ ರೈತರು ಪ್ರತಿಭಟನೆಗೆ ಇಳಿದಿದ್ದರು. ಈ ವೇಳೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಗೃಹ ಸಚಿವ ಆರಗ ಜ್ಞಾನೇಂದ್ರ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ರೈತರ ಮನವೊಲಿಸಲು ಯಶಸ್ವಿಯಾಗಿದ್ದಾರೆ. ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಗೃಹ ಸಚಿವ ಆರಗ ಜ್ಞಾನೇಂದ್ರ ಮುಖ್ಯಮಂತ್ರಿ ಬೊಮ್ಮಾಯಿ ಅಧಿವೇಶನದಲ್ಲಿ ಬ್ಯುಸಿಯಾಗಿದ್ದಾರೆ. 2023ರ ಜನವರಿ 3 ಮತ್ತು 4ರಂದು ಭೇಟಿಗೆ ಅವಕಾಶ ನೀಡಿದ್ದಾರೆ ಎಂದು ಹೇಳಿದರು.

ವ್ಯಕ್ತಿ ನಾಪತ್ತೆ



ಮೈಸೂರು, ಡಿ.19– ಎರಡು ತಿಂಗಳ ಹಿಂದೆ ಮನೆಬಿಟ್ಟು ಹೋದ ವ್ಯಕ್ತಿ ಈವರೆಗೂ ವಾಪಸ್ಸಾಗಿಲ್ಲ ಎಂದು ಮೈಸೂರಿನ ವರುಣಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ತಾಲೂಕು ಪುಟ್ಟೇಗೌಡನಹುಂಡಿ ಗ್ರಾಮದ ಮಹದೇವಸ್ವಾಮಿ(48) ಕಳೆದ ಸೆಪ್ಟೆಂಬರ್ 24ರಿಂದ ಕಾಣೆಯಾಗಿದ್ದಾರೆ. ಮದ್ಯಪಾನ ಮಾಡಿ ಬಂದಿದ್ದನ್ನು ಪ್ರಶ್ನಿಸಿದ್ದಕ್ಕೆ ಮನೆಬಿಟ್ಟು ಹೋಗಿದ್ದು, ಮಹದೇಶ್ವರ ಬೆಟ್ಟ, ನಂಜನಗೂಡು ಸೇರಿದಂತೆ ಎಲ್ಲಾ ಕಡೆ ಹುಡುಕಾಡಿದರೂ ಪತ್ತೆಯಾಗಿಲ್ಲ. ಈ ಹಿಂದೆಯೂ ಸಣ್ಣಪುಟ್ಟ ವಿಚಾರಕ್ಕೆ ಗಲಾಟೆ ಮಾಡಿಕೊಂಡು ಮನೆಬಿಟ್ಟು ಹೋಗಿ 15 ದಿನ, ತಿಂಗಳ ಬಳಿಕ ಮನೆಗೆ ಬಂದಿದ್ದರು ಎಂದು ಮಹದೇವಸ್ವಾಮಿ ಪತ್ನಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಇವರ ಬಗ್ಗೆ ಮಾಹಿತಿ ತಿಳಿದವರು ಮೈಸೂರು ಜಿಲ್ಲಾ ಪೊಲೀಸ್ ಕಂಟ್ರೋಲ್(0821–2444800) ಅಥವಾ ವರುಣಾ ಠಾಣೆ(2594411) ಸಂಪರ್ಕಿಸುವಂತೆ ಪೊಲೀಸರು ಪ್ರಕಟಣೆಯಲ್ಲಿ ಕೋರಿದ್ದಾರೆ.




ಮಳವಳ್ಳಿ ಕ್ಷೇತ್ರದ ಶಾಸಕರ ಪರಂಪರೆ

1952	ಬಿ.ಪಿ.ನಾಗರಾಜಮೂರ್ತಿ	ಕಿಸಾನ್ ಮಜ್ದೂರ್ (ಸಾಮಾನ್ಯ ಕ್ಷೇತ್ರ)
1952	ಎನ್.ಚಿಕ್ಕಲಿಂಗಯ್ಯ	ಷೆಡ್ಯೂಲ್ ಕಾಸ್ಟ್ ಫೆಡರೇಷನ್ (ಮೀಸಲು ಕ್ಷೇತ್ರ)
1957	ಎಚ್.ವಿ.ವೀರೇಗೌಡ	ಕಾಂಗ್ರೆಸ್ (ಸಾಮಾನ್ಯ ಕ್ಷೇತ್ರ)
1957	ಎಂ.ಮಲ್ಲಿಕಾರ್ಜುನಸ್ವಾಮಿ	ಕಾಂಗ್ರೆಸ್ (ಮೀಸಲು ಕ್ಷೇತ್ರ)
1962	ಎಂ.ಮಲ್ಲಿಕಾರ್ಜುನಸ್ವಾಮಿ	ಕಾಂಗ್ರೆಸ್
1967	ಎಂ.ಮಲ್ಲಿಕಾರ್ಜುನಸ್ವಾಮಿ	ಕಾಂಗ್ರೆಸ್
1972	ಎಂ.ಮಲ್ಲಿಕಾರ್ಜುನಸ್ವಾಮಿ	ಕಾಂಗ್ರೆಸ್
1978	ಕೆ.ಎಲ್.ಮರಿಸ್ವಾಮಿ	ಜನತಾ ಪಕ್ಷ
1983	ಬಿ.ಸೋಮಶೇಖರ್	ಜನತಾ ಪಕ್ಷ
1985	ಬಿ.ಸೋಮಶೇಖರ್	ಜನತಾ ಪಕ್ಷ
1989	ಮಲ್ಲಾಜಮ್ಮ	ಕಾಂಗ್ರೆಸ್
1994	ಬಿ.ಸೋಮಶೇಖರ್	ಜನತಾದಳ
1999	ಬಿ.ಸೋಮಶೇಖರ್	ಜೆಡಿಯು
2004	ಡಾ.ಕೆ.ಅನ್ನದಾನಿ	ಜೆಡಿಎಸ್
2008	ಪಿ.ಎಂ.ನರೇಂದ್ರಸ್ವಾಮಿ	ಪಕ್ಷೇತರ
2013	ಪಿ.ಎಂ.ನರೇಂದ್ರಸ್ವಾಮಿ	ಕಾಂಗ್ರೆಸ್
2018	ಡಾ.ಕೆ.ಅನ್ನದಾನಿ	ಜೆಡಿಎಸ್

ಮಳವಳ್ಳಿ ವಿಧಾನಸಭಾ (ಮೀಸಲು) ಕ್ಷೇತ್ರ
ಕಾಂಗ್ರೆಸ್–ಬಿಜೆಪಿ ಟಿಕೆಟ್‌ಗೆ ಭಾರೀ ಪೈಪೋಟಿ



●ಜೆಡಿಎಸ್‌ನಿಂದ ಹಾಲಿ ಶಾಸಕ ಡಾ.ಕೆ.ಅನ್ನದಾನಿಗೆ ಟಿಕೆಟ್ ಘೋಷಣೆ ●ಕಾಂಗ್ರೆಸ್‌ನಲ್ಲಿ ನರೇಂದ್ರಸ್ವಾಮಿ, ಡಾ.ಮೂರ್ತಿ, ಮಲ್ಲಾಜಮ್ಮ ಆಕಾಂಕ್ಷಿಗಳು ●ಬಿಜೆಪಿಯಲ್ಲಿ ಮುನಿರಾಜು, ಬಿ.ಸೋಮಶೇಖರ್ ನಡುವೆ ಫೈಟ್ ●ಬಿಎಸ್ಪಿಯಿಂದ ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ ಸ್ಪರ್ಧೆ


ಕೆ.ಅನ್ನದಾನಿ | ಬಿ.ಸೋಮಶೇಖರ್ | ನರೇಂದ್ರಸ್ವಾಮಿ | ಮೂರ್ತಿ | ಕೃಷ್ಣಮೂರ್ತಿ | ಮುನಿರಾಜು | ಮಲ್ಲಾಜಮ್ಮ

■ ಎಂ.ಕೆ.ಮೋಹನ್‌ರಾಜ್

ಜಿಲ್ಲೆಯ ಏಕೈಕ ಮೀಸಲು ವಿಧಾನಸಭಾ ಕ್ಷೇತ್ರ ಮಳವಳ್ಳಿಯಲ್ಲಿ ಚುನಾವಣಾ ಕಣ ರಂಗೇರಿದ್ದು, ಜೆಡಿಎಸ್‌ನಿಂದ ಈಗಾಗಲೇ ಹಾಲಿ ಶಾಸಕ ಡಾ.ಕೆ.ಅನ್ನದಾನಿ ಮತ್ತೊಮ್ಮೆ ಕಣಕ್ಕಿಳಿಯುವುದು ಖಾತ್ರಿಯಾಗಿದ್ದರೆ, ಇತ್ತ ಕಾಂಗ್ರೆಸ್ ಟಿಕೆಟ್‌ಗಾಗಿ ಮಾಜಿ ಸಿಎಂ ಸಿದ್ದರಾಮಯ್ಯ ಆಪ್ತ ಪಿ.ಎಂ.ನರೇಂದ್ರಸ್ವಾಮಿ ಹಾಗೂ ಆದರ್ಶ ಶಿಕ್ಷಣ ಸಂಸ್ಥೆ ಮಾಲೀಕ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬೆಂಬಲಿಗ ಡಾ.ಮೂರ್ತಿ ನಡುವೆ ಟಿಕೆಟ್‌ಗಾಗಿ ಭಾರೀ ಪೈಪೋಟಿ ನಡೆಯುತ್ತಿದ್ದರೆ, ಇತ್ತ ಬಿಜೆಪಿಯಲ್ಲಿಯೂ ಮಾಜಿ ಸಚಿವ ಬಿ.ಸೋಮಶೇಖರ್ ಹಾಗೂ ಹಿರಿಯ ಮುಖಂಡ ಮುನಿರಾಜು ನಡುವೆ ಜಿದ್ದಾಜಿದ್ದಿ ಏರ್ಪಟ್ಟಿದೆ.

ರಾಜಕೀಯ ಲೆಕ್ಕಾಚಾರ ಹಾಗೂ ಜಾತಿವಾರು ಸಮೀಕರಣ ಹಿನ್ನೆಲೆಯಲ್ಲಿ ಮೀಸಲು ಕ್ಷೇತ್ರ ಮಳವಳ್ಳಿಯಲ್ಲಿ ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಹಾಗೂ ಬಿಎಸ್ಪಿ ಪಕ್ಷಗಳು ತನ್ನದೇ ಆದ ಮತ ಬ್ಯಾಂಕ್ ಹೊಂದಿದ್ದು, ಇಡೀ ಮಂಡ್ಯ ಜಿಲ್ಲೆಯಲ್ಲಿಯೇ ಅತೀ ಹೆಚ್ಚು ಮತದಾರರಿರುವ ಕ್ಷೇತ್ರ ಮಳವಳ್ಳಿಯಾಗಿದೆ. ದಲಿತ ಸಮುದಾಯ, ಒಕ್ಕಲಿಗ ಮತದಾರರು ಹೆಚ್ಚು ಕಡಿಮೆ ಸರಿಸಮಾನವಾಗಿದ್ದರೆ, ಲಿಂಗಾಯಿತರು ಹಾಗೂ ಕುರುಬರು ಸಹ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರತಿನಿಧಿಸುವ ಕನಕಪುರ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸ್ಪರ್ಧಿಸುವ ಚನ್ನಪಟ್ಟಣ ಮಳವಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಅಕ್ಕಪಕ್ಕ ಇರುವುದರಿಂದ ಕ್ಷೇತ್ರ ರಾಜಕೀಯವಾಗಿ ಬಹುದೊಡ್ಡದಾಗಿ ಸದ್ದು ಮಾಡುತ್ತಿದೆ.

ಜೆಡಿಎಸ್‌ನಿಂದ ಅನ್ನದಾನಿಗೆ ಟಿಕೆಟ್: ಜೆಡಿಎಸ್ ಪಕ್ಷದಿಂದ ಹಾಲಿ ಶಾಸಕ ಡಾ.ಕೆ.ಅನ್ನದಾನಿಗೆ ಟಿಕೆಟ್ ಘೋಷಣೆಯಾಗಿದೆ. 2004 ಹಾಗೂ 2018ರಲ್ಲಿ 2 ಬಾರಿ ಮಳವಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿರುವ ಡಾ.ಕೆ.ಅನ್ನದಾನಿ, ಹೆಚ್.ಡಿ.ಕುಮಾರಸ್ವಾಮಿ ಪರಮಾಪ್ತ. ಹೆಚ್‌ಡಿಕೆ ನಂಬಿಕಸ್ತ ನಾಯಕರ ಪೈಕಿ ಡಾ.ಕೆ.ಅನ್ನದಾನಿ ಮೊದಲಿಗರು. ಈ ಹಿನ್ನೆಲೆಯಲ್ಲಿ ಕ್ಷೇತ್ರದ ಕೆಲ ಮುಖಂಡರು ಶಾಸಕ ಅನ್ನದಾನಿ ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂದು ಕುಮಾರಸ್ವಾಮಿಗೆ ದೂರು ನೀಡಿದಾಗಲೆಲ್ಲಾ ಬಹಿರಂಗ ವೇದಿಕೆಗಳಲ್ಲೇ ಕುಮಾರಸ್ವಾಮಿ ಅನ್ನದಾನಿ ಪರ ಬ್ಯಾಟ್ ಬೀಸಿ, ಸಣ್ಣಪುಟ್ಟ ತಪ್ಪುಗಳನ್ನು ಸರಿಪಡಿಸುತ್ತೇನೆ. ಅನ್ನದಾನಿ ಬೆಂಬಲಿಸುವಂತೆ ಮನವೊಲಿಸಿದ್ದಾರೆ. ಇನ್ನು ಮೊದಲ ಬಾರಿ ಶಾಸಕರಾದಾಗ ಡಾ. ಅನ್ನದಾನಿ, ಮಳವಳ್ಳಿ ಕ್ಷೇತ್ರದ ಐತಿಹಾಸಿಕ ಗಗನಚುಕ್ಕಿಯಲ್ಲಿ ಗಗನಚುಕ್ಕಿ ಜಲಪಾತೋತ್ಸವ ಆಚರಣೆ ಮಾಡುವ ಮೂಲಕ ಕ್ಷೇತ್ರದ ಜನರ ಮನೆ ಮಾತಾದರು. ಎರಡನೇ ಬಾರಿ ಶಾಸಕರಾದಾಗ ತಾಲೂಕಿನ ಹಲವು ಗ್ರಾಮಗಳಲ್ಲಿ ಹೈಟೆಕ್ ಬಸ್ ನಿಲ್ದಾಣ, ಕುಡಿಯುವ ನೀರು, ರಸ್ತೆ, ಮೂಲ ಸೌಕರ್ಯ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಮಾಡಿದ್ದು, ಮೈಷುಗರ್ ಕಾರ್ಖಾನೆಗಾಗಿ ಮಳವಳ್ಳಿಯಿಂದ ಮಂಡ್ಯದವರೆಗೆ ಇವರ ಪಾದಯಾತ್ರೆ ಬಹಳಷ್ಟು ಗಮನ ಸೆಳೆದಿದೆ.

ಜೊತೆಗೆ ಮಳವಳ್ಳಿ ಪ್ರಭಾವಿ ಜೆಡಿಎಸ್ ಮುಖಂಡರಾದ ಕೆಎಂಎಫ್ ನಿರ್ದೇಶಕ ವಿಶ್ವನಾಥ್ ಅವರನ್ನು ಜೆಡಿಎಸ್ ಮಳವಳ್ಳಿ ತಾಲೂಕು ಘಟಕದ ಅಧ್ಯಕ್ಷರನ್ನಾಗಿ ನೇಮಿಸಿ, ಜಿಪಂ ಮಾಜಿ ಸದಸ್ಯ ಕಂಸಾಗರ ರವಿ ಅವರನ್ನು ಜೆಡಿಎಸ್ ಮಂಡ್ಯ ಜಿಲ್ಲಾ ಯುವ ಘಟಕದ ಅಧ್ಯಕ್ಷರನ್ನಾಗಿ ನೇಮಿಸುವ ಮೂಲಕ ಕ್ಷೇತ್ರದಲ್ಲಿ ಜೆಡಿಎಸ್ ಅನ್ನು ಮಾಜಿ ಸಿಎಂ ಕುಮಾರಸ್ವಾಮಿ ಮತ್ತಷ್ಟು ಬಲಪಡಿಸಿದ್ದಾರೆ.

ಕೈ ಟಿಕೆಟ್‌ಗೆ ಭಾರೀ ಪೈಪೋಟಿ: ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ 2008ರಲ್ಲಿ ಪಕ್ಷೇತರ ಹಾಗೂ 2013ರಲ್ಲಿ ಕಾಂಗ್ರೆಸ್‌ನಿಂದ ಶಾಸಕರಾಗಿ ಆಯ್ಕೆಯಾಗಿದ್ದು, ಈ ಬಾರಿಯೂ ಅವರೇ ಪ್ರಬಲ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದು, ಕೆಪಿಸಿಸಿಗೆ ಅರ್ಜಿ ಸಹ ಸಲ್ಲಿಸಿದ್ದಾರೆ. ಈ ನಡುವೆ ಕೈ ಟಿಕೆಟ್‌ಗಾಗಿ ಆದರ್ಶ ಶಿಕ್ಷಣ ಸಂಸ್ಥೆ ಮುಖ್ಯಸ್ಥ, ಹಿರಿಯ ಕಾಂಗ್ರೆಸ್ ಮುಖಂಡ ಡಾ.ಮೂರ್ತಿ ಸಹ ಅರ್ಜಿ ಸಲ್ಲಿಸಿ ಟಿಕೆಟ್‌ಗೆ ಪೈಪೋಟಿ ನಡೆಸುತ್ತಿದ್ದು, ಇವರ ಜೊತೆಗೆ ಮಾಜಿ ಶಾಸಕಿ ಮಲ್ಲಾಜಮ್ಮ ಸಹ ಅರ್ಜಿ ಸಲ್ಲಿಸಿ, ಟಿಕೆಟ್ ಬೇಕು ಎಂದು ಪಟ್ಟು ಹಿಡಿದಿದ್ದಾರೆ.

ಪಿ.ಎಂ.ನರೇಂದ್ರಸ್ವಾಮಿಗೆ 2008ರಲ್ಲಿ ಕಾಂಗ್ರೆಸ್ ಟಿಕೆಟ್ ಕೈ ತಪ್ಪಿತ್ತು. ಆದರೂ ಛಲ ಬಿಡದೇ ಪಕ್ಷೇತರವಾಗಿ ಸ್ಪರ್ಧಿಸಿ ಗೆಲ್ಲುವ ಮೂಲಕ ಮಳವಳ್ಳಿಯಲ್ಲಿ ಇತಿಹಾಸ ಸೃಷ್ಟಿಸಿದ್ದರು. ಬಿ.ಎಸ್.ಯಡಿಯೂರಪ್ಪ ನೇತೃತ್ವದ ಸರ್ಕಾರಕ್ಕೆ ಬೆಂಬಲ ನೀಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾಗಿ ಹಲವು ಅಭಿವೃದ್ಧಿ ಕೆಲಸ ಮಾಡಿದ ಅವರನ್ನು 2013ರಲ್ಲಿ ಜನ ಕಾಂಗ್ರೆಸ್ ಪಕ್ಷದಿಂದ ಪುನರಾಯ್ಕೆ ಮಾಡಿದರು. ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಹಲವು ಜನಪರ ಯೋಜನೆಗಳನ್ನು ಕ್ಷೇತ್ರಕ್ಕೆ ತಂದು ಸಮರ್ಪಕವಾಗಿ ಅಭಿವೃದ್ಧಿ ಮಾಡಿದ ಕೀರ್ತಿ ನರೇಂದ್ರಸ್ವಾಮಿ ಹೆಸರಲ್ಲಿದ್ದು, ಈ ಬಾರಿಯೂ ಅಭಿವೃದ್ಧಿ ಮತ್ತು ಅನುಕಂಪದ ಹೆಸರಿನಲ್ಲಿ ಮತ್ತೊಮ್ಮೆ ಅವಕಾಶದ ನಿರೀಕ್ಷೆಯಲ್ಲಿದ್ದಾರೆ.

ಇನ್ನು ಮಳವಳ್ಳಿ ಕ್ಷೇತ್ರದ ಹಿರಿಯ ಕಾಂಗ್ರೆಸ್ ಮುಖಂಡ ಡಾ.ಮೂರ್ತಿ ಸಹ ಟಿಕೆಟ್‌ಗಾಗಿ ಪೈಪೋಟಿ ನಡೆಸುತ್ತಾ ಕ್ಷೇತ್ರದಲ್ಲಿ ಸಕ್ರೀಯವಾಗಿ ಓಡಾಡುತ್ತಿದ್ದಾರೆ. 2013ರಲ್ಲಿ ಬಿಎಸ್‌ಆರ್ ಕಾಂಗ್ರೆಸ್‌ನಿಂದ ಸ್ಪರ್ಧಿಸಿ 8 ಸಾವಿರಕ್ಕೂ ಹೆಚ್ಚು ಮತ ಪಡೆದಿದ್ದ ಇವರು, ಪ್ರತಿ ಗ್ರಾಮದಲ್ಲೂ ಬೆಂಬಲಿಗರೊಂದಿಗೆ ಸಭೆ ನಡೆಸುತ್ತಾ, ತಮಗೆ ಆಶೀರ್ವಾದ ಮಾಡುವಂತೆ ಕೋರುತ್ತಿದ್ದಾರೆ. ತಮ್ಮ ಆಪ್ತರಾದ ಮಲ್ಲಿಕಾರ್ಜುನ ಖರ್ಗೆ ಹಾಗೂ ಡಿ.ಕೆ.ಶಿವಕುಮಾರ್‌ಗೆ ನನ್ನ ಪರ ಒಲವಿದ್ದು, ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧನಿದ್ದೇನೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಎರಡು ಪಕ್ಷದಲ್ಲೂ ಅಸಮಾಧಾನ: ಇನ್ನು ಎರಡೂ ಪಕ್ಷದಲ್ಲೂ ಅತೃಪ್ತರಿದ್ದು, ಜೆಡಿಎಸ್ ವಿರುದ್ಧ ಮುನಿಸಿಕೊಂಡಿರುವ ಹಿರಿಯ ನಾಯಕ, ವಿಧಾನಪರಿಷತ್ ಸದಸ್ಯ ಮರಿತಿಬ್ಬೇಗೌಡ ಒಂದು ಕಾಲನ್ನು ಕಾಂಗ್ರೆಸ್‌ನತ್ತ ಇಟ್ಟಿದ್ದು, ಕಳೆದ ವಿಧಾನಪರಿಷತ್ ಚುನಾವಣೆಯಲ್ಲಿ ಬಹಿರಂಗವಾಗಿಯೇ ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಿದ್ದರು. ಈ ಚುನಾವಣೆಯಲ್ಲಿ ಇವರ ನಡೆ ಏನೆಂಬುದು ಇದೀಗ ಕುತೂಹಲ ಮೂಡಿಸಿದ್ದು, ಇವರು ಜೆಡಿಎಸ್‌ಗೆ ಕೈಕೊಟ್ಟರೆ ಪಕ್ಷಕ್ಕೆ ಹಿನ್ನಡೆಯಾಗಲಿದೆ. ಮತ್ತೊಂದೆಡೆ ನರೇಂದ್ರಸ್ವಾಮಿ ಅವರ ಬಗ್ಗೆ ಕಾಂಗ್ರೆಸ್ ಮುಖಂಡರಾದ ದಡದಪುರ ಶಿವಣ್ಣ ಹಾಗೂ ಮಲ್ಲಾಜಮ್ಮ ಹಲವು ಬಾರಿ ಬಹಿರಂಗ ಅಸಮಾಧಾನ ಹೊರ ಹಾಕಿದ್ದು, ಕಾಂಗ್ರೆಸ್ ಇದನ್ನು ಹೇಗೆ ಸಂಭಾಳಿಸಲಿದೆ ಎಂಬುದನ್ನು ಕಾದು ನೋಡಬೇಕಿದ್ದರೆ, ಮತ್ತೊಂದೆಡೆ ನರೇಂದ್ರಸ್ವಾಮಿಗೆ ಟಿಕೆಟ್ ಬೇಡ ಎಂದು ಇತ್ತೀಚೆಗೆ ಕೆಲ ಕಾಂಗ್ರೆಸ್‌ನ ಅತೃಪ್ತ ಮುಖಂಡರು ಸಭೆ ನಡೆಸಿದ್ದರು.

ಬಿಜೆಪಿಯಲ್ಲೂ ಟಿಕೆಟ್‌ಗಾಗಿ ಫೈಟ್: ಇನ್ನು ಬಿಜೆಪಿ ಪಕ್ಷದಲ್ಲಿ ಟಿಕೆಟ್‌ಗಾಗಿ ಮಾಜಿ ಸಚಿವ ಬಿ.ಸೋಮಶೇಖರ್ ಹಾಗೂ 2013ರ ಚುನಾವಣೆ ಪರಾಜಿತ ಅಭ್ಯರ್ಥಿ ಮುನಿರಾಜು ನಡುವೆ ಭಾರೀ ಪೈಪೋಟಿ ಇದ್ದು, ಈ ನಡುವೆ ಯಮದೂರು ಸಿದ್ದರಾಜು ಸಹ ಟಿಕೆಟ್ ಬಯಸಿದ್ದಾರೆ. ಈ ಹಿಂದೆ ಜೆಡಿಯುನಲ್ಲಿದ್ದ ಬಿ.ಸೋಮಶೇಖರ್ ಶಾಸಕರಾಗಿ, ಸಚಿವರಾಗಿ ಕಾರ್ಯನಿರ್ವಹಿಸಿದ್ದವರು. ಕ್ರಮೇಣ ಇವರು ಕ್ಷೇತ್ರದಲ್ಲಿ ಅಸ್ತಿತ್ವ ಕಳೆದುಕೊಳ್ಳುತ್ತಾ ಬಂದರು. ಕಳೆದ ಚುನಾವಣೆಯಲ್ಲೂ ಸಹ ಸ್ಪರ್ಧೆ ಮಾಡಿ, ಠೇವಣಿ ವಂಚಿತರಾದ ಇವರು, ಈ ಬಾರಿಯೂ ನನಗೆ ಟಿಕೆಟ್ ಕೊಡಿ ಎಂದು ಕೇಳುತ್ತಿದ್ದು, ನನಗೆ ಕೊಡದಿದ್ದರೆ ಅಣ್ಣನ ಮಗನಿಗೆ ಕೊಡಿ ಎಂದು ದುಂಬಾಲು ಬಿದ್ದಿದ್ದಾರೆ. ಮತ್ತೊಂದೆಡೆ 2013ರ ವಿಧಾನಸಭಾ ಚುನಾವಣೆಯಲ್ಲಿ ಕೆಜೆಪಿಯಿಂದ ಸ್ಪರ್ಧಿಸಿ, ಅಚ್ಚರಿ ಎಂಬಂತೆ 26 ಸಾವಿರ ಮತ ಪಡೆದು ಎಲ್ಲರ ಹುಬ್ಬೇರುವಂತೆ ಮಾಡಿದ್ದ ಮುನಿರಾಜುಗೆ ಕಳೆದ ಬಾರಿ ಬಿಜೆಪಿ ಟಿಕೆಟ್ ಕೈ ತಪ್ಪಿತ್ತು. ಈ ಬಾರಿ ಬಿಜೆಪಿಯಿಂದ ಟಿಕೆಟ್ ಪಡೆಯಲು ಭಾರೀ ಕಸರತ್ತು ನಡೆಸುತ್ತಿದ್ದು, ಕ್ಷೇತ್ರದಲ್ಲಿ ಚುರುಕಿನಿಂದ ಓಡಾಡುತ್ತಿದ್ದಾರೆ. ಒಟ್ಟಾರೆ ಇಬ್ಬರ ಪೈಕಿ ಯಾರಿಗೆ ಟಿಕೆಟ್ ಸಿಗಲಿದೆ ಎಂಬುದನ್ನು ಕಾದು ನೋಡಬೇಕು.

ಬಿಎಸ್ಪಿಯಿಂದ ಕೃಷ್ಣಮೂರ್ತಿ ಕಣಕ್ಕೆ: ಬಿಎಸ್ಪಿ ಪಕ್ಷವು ಕ್ಷೇತ್ರದಲ್ಲಿ ತನ್ನದೇ ಆದ ಓಟ್ ಬ್ಯಾಂಕ್ ಹೊಂದಿದ್ದು, ಕಳೆದ 2018ರ ಚುನಾವಣೆಯಲ್ಲಿ ಜೆಡಿಎಸ್–ಬಿಎಸ್ಪಿ ಮೈತ್ರಿಯಿಂದ ಈ ಕ್ಷೇತ್ರದಲ್ಲಿ ಜೆಡಿಎಸ್ ಗೆಲ್ಲಲು ವರದಾನವಾಗಿತ್ತು. ಈ ಬಾರಿಯ ಚುನಾವಣೆಯಲ್ಲಿ ಮಳವಳ್ಳಿಯವರೇ ಆದ ಬಿಎಸ್ಪಿ ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ ಸ್ಪರ್ಧಿಸಲಿದ್ದಾರೆ.


ಅತೀ ಹೆಚ್ಚು ಸಚಿವರನ್ನು ನೀಡಿದ್ದು ಮಳವಳ್ಳಿ ಕ್ಷೇತ್ರ

ಮಂಡ್ಯ ಜಿಲ್ಲೆಗೆ ಅತಿ ಹೆಚ್ಚು ಮಂತ್ರಿಗಳನ್ನು ಕೊಟ್ಟ ಹೆಗ್ಗಳಿಕೆಗೆ ಪಾತ್ರವಾಗಿರುವ ಮಳವಳ್ಳಿ ವಿಧಾನಸಭಾ ಕ್ಷೇತ್ರ, ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಿಂದಲೂ ಹೆಸರುವಾಸಿಯಾಗಿದ್ದು, 1957 ಹಾಗೂ 1962ರ ಎರಡು ಚುನಾವಣೆಗಳಲ್ಲಿ ಕ್ಷೇತ್ರ ದ್ವಿಸದಸ್ಯತ್ವವನ್ನು ಹೊಂದಿತ್ತು.

ಮಳವಳ್ಳಿ ಕ್ಷೇತ್ರದಿಂದ ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾದ ಎಂ.ಮಲ್ಲಿಕಾರ್ಜುನಸ್ವಾಮಿ, ನಾಲ್ಕನೇ ಬಾರಿ ಗೆದ್ದಾಗ 1972ರಲ್ಲಿ ಗ್ರಾಮೀಣಾಭಿವೃದ್ಧಿ, ಲೋಕೋಪಯೋಗಿ, ಸಮಾಜ ಕಲ್ಯಾಣ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಇನ್ನು ಬಿ.ಸೋಮಶೇಖರ್ ಸಹ ನಾಲ್ಕು ಬಾರಿ ಶಾಸಕರಾಗಿ ಮಳವಳ್ಳಿಯಿಂದ ಆಯ್ಕೆಯಾಗಿದ್ದು, 1983ರಲ್ಲಿ ಮೊದಲ ಬಾರಿ ಗೆದ್ದಾಗ ರಾಮಕೃಷ್ಣ ಹೆಗಡೆ ಸಂಪುಟದಲ್ಲಿ ಶಿಕ್ಷಣ ಸಚಿವರಾಗಿ, 1985ರಲ್ಲಿ ಎರಡನೇ ಬಾರಿ ಗೆದ್ದಾಗ ತೋಟಗಾರಿಕೆ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರಾಗಿ ಮತ್ತು 1994ರಲ್ಲಿ ಮೂರನೇ ಬಾರಿ ಗೆಲುವು ಸಾಧಿಸಿದಾಗ ಜೆ.ಹೆಚ್.ಪಟೇಲ್ ಸಂಪುಟದಲ್ಲಿ ಉನ್ನತ ಶಿಕ್ಷಣ ಹಾಗೂ ಕಂದಾಯ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

ಇನ್ನು ಈಗಾಗಲೇ ಹೇಳಿದಂತೆ ಮಳವಳ್ಳಿ ಕ್ಷೇತ್ರ 1952 ಹಾಗೂ 1957ರ ಚುನಾವಣೆಯಲ್ಲಿ ದ್ವಿಸದಸ್ಯತ್ವ ಹೊಂದಿದ್ದು, ಒಂದು ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದರೆ, ಮತ್ತೊಂದು ಮೀಸಲು ಕ್ಷೇತ್ರವಾಗಿತ್ತು. ಇಲ್ಲಿನ ಜನ ಇಬ್ಬರು ಶಾಸಕರಿಗೆ ಮತ ಕೊಡುವ ಅವಕಾಶ ಹೊಂದಿದ್ದರು. ಆದರೆ 1962ರಲ್ಲಿ ಮಳವಳ್ಳಿಯಿಂದ ಪ್ರತ್ಯೇಕಗೊಂಡು ಕಿರುಗಾವಲು ಕ್ಷೇತ್ರ ಸ್ಥಾಪನೆಯಾದಾಗ ಮಳವಳ್ಳಿ ಮೀಸಲು ಕ್ಷೇತ್ರವಾದರೆ, ಕಿರುಗಾವಲು ಸಾಮಾನ್ಯ ಕ್ಷೇತ್ರವಾಗಿ ಮಾರ್ಪಟ್ಟಿತು.

ಮಳವಳ್ಳಿ ವಿಧಾನಸಭಾ ಕ್ಷೇತ್ರ 2009ರವರೆಗೆ ಕನಕಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತಿತ್ತು. ಈ ನಿಟ್ಟಿನಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಹಾಗೂ ಹೆಚ್.ಡಿ. ಕುಮಾರಸ್ವಾಮಿ ಸೇರಿದಂತೆ ಹಲವರು ಸಂಸದರಾಗಿ ಮಳವಳ್ಳಿ ತಾಲೂಕನ್ನು ಕನಕಪುರ ಲೋಕಸಭಾ ಕ್ಷೇತ್ರದ ಮೂಲಕ ಪ್ರತಿನಿಧಿಸಿದ್ದಾರೆ. 2009ರಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಾಗಿ ಕನಕಪುರ ಕ್ಷೇತ್ರ ಅಸ್ತಿತ್ವ ಕಳೆದುಕೊಂಡು, ಬೆಂಗಳೂರು ಗ್ರಾಮಾಂತರ ಕ್ಷೇತ್ರ ನಿರ್ಮಾಣವಾದರೆ, ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಕೆರಗೋಡು ಮತ್ತು ಕಿರುಗಾವಲು ವಿಧಾನಸಭಾ ಕ್ಷೇತ್ರಗಳು ಮಂಡ್ಯ, ಮದ್ದೂರು, ಮಳವಳ್ಳಿ ಕ್ಷೇತ್ರದಲ್ಲಿ ವಿಲೀನವಾದವು. ಆಗ ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಮಳವಳ್ಳಿ ಮತ್ತು ಮೈಸೂರಿನ ಕೆ.ಆರ್.ನಗರ ವಿಧಾನಸಭಾ ಕ್ಷೇತ್ರಗಳು ಸೇರಿಕೊಂಡವು. ಇನ್ನು ಮಳವಳ್ಳಿಯಲ್ಲಿ ಐತಿಹಾಸಿಕ ಪ್ರವಾಸಿ ತಾಣ ಶಿಂಷಾದ ಶಿವನ ಸಮುದ್ರ (ಗಗನಚುಕ್ಕಿ) ಜಲಪಾತವಿದ್ದು, ನಿತ್ಯ ನೂರಾರು ಜನರು ಜಲಪಾತ ವೀಕ್ಷಣೆಗೆ ಬರುತ್ತಾರೆ. ಇದರೊಟ್ಟಿಗೆ ಹಲಗೂರು ಬಳಿಯ ಗಾಣಾಳು ಜಲಪಾತ ಹಾಗೂ ಮುತ್ತತ್ತಿ ಪ್ರಸಿದ್ಧ ಪ್ರವಾಸಿ ತಾಣಗಳಾಗಿವೆ.



ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಡಿ.19– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವತಿಯಿಂದ ಡಿ.20 ರಂದು ಸರಸ್ವತಿಪುರಂ 1 ರಿಂದ 5 ನೇ ಮೇನ್, ನ್ಯೂಕಾಂತರಾಜ ಅರಸ್ ರಸ್ತೆ, ಕೆ.ಜಿ ಕೊಪ್ಪಲು ಮುಖ್ಯರಸ್ತೆ, ಯುನಿವರ್ಸಿಟಿ ಕ್ವಾರ್ಟ್ರಸ್, ಮುಸ್ಲಿಂ ಹಾಸ್ಟೆಲ್, ವಿಶ್ವಮಾನವ ಜೋಡಿರಸ್ತೆ ಮುರಗನ್ ಮೆಡಿಕಲ್ಸ್‌ನಿಂದ ಕುಕ್ಕರಹಳ್ಳಿ ಕೆರೆ ರಸ್ತೆವರೆಗೆ, ಸರಸ್ವತಿಪುರಂ 5 ರಿಂದ 16ನೇ ಮೇನ್, ಪಡುವಾರಹಳ್ಳಿ, ಡಿ.ಸಿ ರೆಸಿಡೆನ್ಸಿ ರಿಜನಲ್ ಕಮಿಷನರ್ ಆಫೀಸ್, ಸಿ.ಎಫ್.ಟಿ.ಆರ್.ಐ ಕ್ಯಾಂಪಸ್, ವಾಲ್ಮೀಕಿ ರಸ್ತೆ, ಜಡ್ಜ್ ಕ್ವಾರ್ಟ್ರಸ್, ಒಂಟಿಕೊಪ್ಪಲು, ಹುಣಸೂರು ಮುಖ್ಯರಸ್ತೆ ವಾಗ್ದೇವಿ ನಗರ, ಜೆ.ಸಿ.ಕಾಲೇಜು ಸುತ್ತಮುತ್ತ, ಚಾಮರಾಜ ಮೊಹಲ್ಲಾ, ಜಿಪಂ ಕಛೇರಿ, ಕೋರ್ಟ್, ಅರಸು ರಸ್ತೆ, ಡಿಸಿ ಕಛೇರಿ, ಮಹಾರಾಜ ಮತ್ತು ಯುವರಾಜ ಕಾಲೇಜು ಸುತ್ತಮುತ್ತ, ಶಿವರಾಂಪೇಟೆ, ದಿವಾನ್ಸ್ ರಸ್ತೆ, ಧನ್ವಂತರಿ ರಸ್ತೆ, ಜೆ.ಕೆ ಗ್ರೌಂಡ್ ಸುತ್ತಮುತ್ತಲಿನ ಪ್ರದೇಶ, ಮೆಟ್ರೋಪೋಲ್ ಸುತ್ತಮುತ್ತ, ಜೆ.ಎಲ್.ಬಿ, ರಸ್ತೆ, ಜಯಲಕ್ಷ್ಮೀ ವಿಲಾಸ್, ಏರ್‌ಲೈನ್ಸ್ ಹೊಟೇಲ್ ರಸ್ತೆ, ಗೀತಾರಸ್ತೆ, ರಾಮಸ್ವಾಮಿ ವೃತ್ತ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ವಿಜಯನಗರ 4ನೇ ಹಂತ, ಕೆ.ಹೆಚ್.ಬಿ ಕಾಲೋನಿ, ಹೂಟಗಳ್ಳಿ ಗ್ರಾಮ, ಬೆಳವಾಡಿ ಗ್ರಾಮ, ಬಸವನಪುರ, ಮರಟಿ ಕ್ಯಾತನಹಳ್ಳಿ, ಪಂಚಾಚಾರ್ಯ ಲೇಔಟ್, ಕೆ. ಹೆಮ್ಮನಹಳ್ಳಿ, ಲಿಂಗದೇವರಕೊಪ್ಪಲು, ಇಲವಾಲ, ಹೂಟಗಳ್ಳಿ ಕೆ.ಆರ್.ಎಸ್.ರೋಡ್, ಆದಿತ್ಯಾ ಬಡಾವಣೆ, ಎಸ್.ಆರ್.ಎಸ್. ಕಾಲೋನಿ, ಕೂರ್ಗಳ್ಳಿ ಗ್ರಾಮ, ಎನ್.ಹೆಚ್.ಬಿ ಕಾಲೋನಿ, ಬೆಳವಾಡಿ ಕೈಗಾರಿಕಾ ಪ್ರದೇಶ, ಶಾಹಿ ಗಾರ್ಮೆಂಟ್ಸ್, ಹೂಟಗಳ್ಳಿ ಕೈಗಾರಿಕಾ ಪ್ರದೇಶ, ಕೂರ್ಗಳ್ಳಿ ಕೈಗಾರಿಕಾ ಪ್ರದೇಶ, ಗ್ರ್ಯಾಂಡ್ ಮೌರ್ಯ ಹೋಟೆಲ್, ರಿಲಾಯನ್ಸ್, ಮಾಸ್ ಫರ್ನೀಸ್, ಯಶಸ್ವಿನಿ ಕಲ್ಯಾಣ ಮಂಟಪ, ಸೌಪರ್ಣಿಕ ಅಪಾರ್ಟ್‌ಮೆಂಟ್ ಹಿನಕಲ್, ಎಸ್.ವಿ.ಇ.ಐ ಕಾಲೇಜು ಸುತ್ತಮುತ್ತ, ಜಟ್ಟಿಹುಂಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ವಿ.ವಿ. ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಾಮಧಾರಿ ಸಮಾಜವನ್ನು ಪ್ರವರ್ಗ–2ಎಗೆ ಸೇರಿಸಿ ಹಾಗೂ ಮೈಸೂರು ನಗರದಲ್ಲಿ ನಿರ್ಮಾಣವಾಗುತ್ತಿರುವ ನಾಮಧಾರಿ ಸಮಾಜದ ಬಾಲಕರ ವಿದ್ಯಾರ್ಥಿನಿಲಯ ಕಟ್ಟಡದ ಮುಂದುವರೆದ ಕಾಮಗಾರಿಗೆ 10 ಕೋಟಿ ಮಂಜೂರು ಮಾಡುವಂತೆ ಶಾಸಕ ಸಾ.ರಾ. ಮಹೇಶ್ ಬೆಳಗಾವಿಯಲ್ಲಿ ಸಿಎಂ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಿದರು. ಶಾಸಕ ಹೆಚ್.ಡಿ.ರೇವಣ್ಣ ಚಿತ್ರದಲ್ಲಿದ್ದಾರೆ.

ಸಚಿವ ಸ್ಥಾನಕ್ಕೆ ಈಶ್ವರಪ್ಪ ಸೌಜನ್ಯ ಪ್ರತಿಭಟನೆ: ಅಧಿವೇಶನಕ್ಕೆ ಗೈರು

ಬೆಂಗಳೂರು,ಡಿ.19(ಕೆಎಂಶಿ)–ಸಚಿವ ಸ್ಥಾನ ಸಿಗದ ಹಿನ್ನೆಲೆ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪನವರು ಬಹಿರಂಗವಾಗಿ ಅಸಮಾಧಾನ ಹೊರ ಹಾಕಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಳಗಾವಿಗೆ ಹೋಗುತ್ತೇನೆ, ಆದರೆ ಅಧಿವೇಶನಕ್ಕೆ ಹೋಗಲ್ಲ. ಅಧಿವೇಶನದಲ್ಲಿ ಇರಲ್ಲ ಎಂದ ಅವರು, ಪಕ್ಷದ ವರಿಷ್ಠರು, ಸಿಎಂ ನಡೆ ನೋವು ತಂದಿದೆ, ಅಪಮಾನ ಆಗಿದೆ. ಅದಕ್ಕೆ ಅಧಿವೇಶನಕ್ಕೆ ಹೋಗದೇ ಸೌಜನ್ಯದ ಪ್ರತಿಭಟನೆ ಮಾಡುತ್ತಿದ್ದೇನೆ ಎಂದರು. ಅಪರಾಧದಿಂದ ಮುಕ್ತವಾದ ವ್ಯಕ್ತಿಗಳಿಗೆ ಯಾವ ಕಾರಣಕ್ಕೂ ಶಿಕ್ಷೆ ಆಗುವುದಿಲ್ಲ. ನನ್ನ ವಿಚಾರದಲ್ಲಿ ತೀರ್ಪು ಬಂದಾಗಿದೆ, ಕ್ಲೀನ್‌ಚಿಟ್ ಸಿಕ್ಕಾಗಿದೆ. ನಿಮ್ಮನ್ನು ಸಚಿವರನ್ನಾಗಿ ಮಾಡ್ತೀವಿ ಎಂದು ಸಿಎಂ ಹೇಳ್ತಾರೆ. ಆದರೆ ಏಕೆ ಇನ್ನೂ ತಗೊಳ್ತಿಲ್ಲವೋ ಗೊತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಇಡೀ ರಾಜ್ಯದಲ್ಲಿ ನಮ್ಮ ಕಾರ್ಯಕರ್ತರು, ಮಠಾಧೀಶರು ನನಗೆ ಫೋನ್ ಮಾಡಿ ನಿಮ್ಮನ್ನು ಏಕೆ ಸಚಿವರನ್ನಾಗಿ ಮಾಡ್ತಿಲ್ಲ ಎಂದು ಕೇಳುತ್ತಿದ್ದಾರೆ. ಇದನ್ನು ಸಿಎಂ ಮತ್ತು ಹೈಕಮಾಂಡ್‌ಗೆ ಅರ್ಥ ಮಾಡಿಸಬೇಕು ಎನ್ನುವ ಒಂದೇ ಕಾರಣಕ್ಕೆ ಸೌಜನ್ಯ ಪ್ರತಿಭಟನೆ ಮಾಡುತ್ತಿದ್ದೇನೆ ಎಂದರು.

ಪಾಲಿಕೆ ಕಟ್ಟಡ ಬಾಡಿಗೆ ಪರಿಷ್ಕರಣೆ, ರೆವಿನ್ಯೂ ಬಡಾವಣೆಗಳಿಂದ ತೆರಿಗೆ ಸಂಗ್ರಹಿಸಿ

ನಗರಪಾಲಿಕೆ ಬಜೆಟ್ ಪೂರ್ವಭಾವಿ ಸಭೆಯಲ್ಲಿ ಮಾಜಿ ಮೇಯರ್, ಉಪಮೇಯರ್‌ಗಳ ಸಲಹೆ



ಮೈಸೂರು,ಡಿ.19(ಆರ್‌ಕೆ)–ಕಟ್ಟಡಗಳ ಬಾಡಿಗೆ ದರ ಹೆಚ್ಚಿಸುವುದು, ರೆವಿನ್ಯೂ ಬಡಾವಣೆ ಆಸ್ತಿಗಳಿಂದಲೂ ತೆರಿಗೆ ಸಂಗ್ರಹ, ಕುಡಿಯುವ ನೀರಿನ ಬಾಬ್ತು, ಉದ್ದಿಮೆ ರಹದಾರಿ ಸೇರಿದಂತೆ ಎಲ್ಲಾ ಬಗೆಯ ತೆರಿಗೆ ವಸೂಲಿ ಮಾಡುವ ಮೂಲಕ ಮೈಸೂರು ಮಹಾನಗರಪಾಲಿಕೆ ಹೆಚ್ಚಿನ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಲು ಒತ್ತು ನೀಡಬೇಕು ಎಂದು ಮಾಜಿ ಮೇಯರ್, ಉಪಮೇಯರ್‌ಗಳು ಇಂದಿಲ್ಲಿ ಸಲಹೆ ನೀಡಿದ್ದಾರೆ

ನಗರಪಾಲಿಕೆ ಕಚೇರಿ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ನಡೆದ 2023–24ನೇ ಸಾಲಿನ ಪಾಲಿಕೆ ಆಯ–ವ್ಯಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಮಾಜಿ ಮೇಯರ್ (ಮೊದಲ ಮೇಯರ್) ಪಿ.ವಿಶ್ವನಾಥ್, ಖರ್ಚು ವೆಚ್ಚದ ಬಗ್ಗೆ ಆಲೋಚನೆ ಮಾಡಿ ಅದಕ್ಕೆ ತಕ್ಕಂತೆ ಆದಾಯದ ಮೂಲಗಳನ್ನು ಸದೃಢಪಡಿಸಿ ಮೈಸೂರು ನಗರವನ್ನು ವ್ಯವಸ್ಥಿತವಾಗಿ ನಿರ್ವಹಣೆ ಮಾಡಬೇಕು ಎಂದರು.

ಬಜೆಟ್‌ನಲ್ಲಿ ಹೊಸ ಯೋಜನೆಗಳನ್ನು ಜೋಡಿಸುವಾಗ ಅದರ ಆಗು–ಹೋಗುಗಳ ಬಗ್ಗೆ ಚಿಂತಿಸಬೇಕು. ರಸ್ತೆ, ನೀರು, ಚರಂಡಿ ನಿರ್ವಹಣೆ ಸಮರ್ಪಕವಾಗಿರಬೇಕಾದರೆ ಮೇಯರ್ ಮತ್ತು ಆಯುಕ್ತರು ನಿತ್ಯ ಬೆಳಗ್ಗೆ 6–30ರಿಂದ 8–30 ಗಂಟೆವರೆಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸುವುದು ಸೂಕ್ತ ಎಂದ ಅವರು, ಸ್ವಚ್ಛತಾ ಆ್ಯಪ್‌ನಂತೆಯೇ ಒಳಚರಂಡಿ, ರಸ್ತೆಗೆ ಸಂಬಂಧಿಸಿದಂತೆಯೂ ಆ್ಯಪ್ ಕ್ರಿಯೇಟ್ ಮಾಡಿ ಸಾರ್ವಜನಿಕರಿಂದ ಬರುವ ದೂರು, ಸಲಹೆಗಳನ್ವಯ ತಕ್ಷಣ ಕ್ರಮ ವಹಿಸುವ ವ್ಯವಸ್ಥೆಯನ್ನು ಜಾರಿಗೆ ತನ್ನಿ ಎಂದರು.

ಆಸ್ತಿ ಎಷ್ಟಿದೆ ಗುರ್ತಿಸಿ: ಮೈಸೂರು ನಗರದಲ್ಲಿ ಪಾಲಿಕೆಗೆ ಸೇರಿದ ಆಸ್ತಿ ಎಷ್ಟಿದೆ ಎಂದು ಗುರುತಿಸಿ ಬಜೆಟ್‌ನಲ್ಲಿ ಪ್ರಕಟಿಸಿದ ಎಲ್ಲಾ ಯೋಜನೆಗಳನ್ನು ಅನುಷ್ಠಾನ ಮಾಡಿ, ಆನ್‌ಲೈನ್ ದೋಷ ಸರಿಪಡಿಸಿ. ರೆವಿನ್ಯೂ ಬಡಾವಣೆಗಳಿಂದ ತೆರಿಗೆ ವಸೂಲಿ ಮಾಡಿ, ಉದ್ದಿಮೆದಾರರಿಂದ ಸಮರ್ಪಕವಾಗಿ ಟ್ರೇಡ್ ಲೈಸೆನ್ಸ್ ಶುಲ್ಕ ಸಂಗ್ರಹಿಸಿ, ಕಸ ಸಂಗ್ರಹ– ನಿರ್ವಹಣೆಗೆ ಹೆಚ್ಚು ಒತ್ತು ನೀಡಿ ಎಂದು ಸಲಹೆ ನೀಡಿದ ಮಾಜಿ ಮೇಯರ್ ಸಂದೇಶ್ ಸ್ವಾಮಿ, ವಸ್ತುಸ್ಥಿತಿಗೆ ಹತ್ತಿರವಾದ ಬಜೆಟ್ ಮಂಡಿಸಿ ಅದನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಿ ಎಂದು ಸಲಹೆ ನೀಡಿದರು.

ವಲಯ ಕಚೇರಿಗಳಲ್ಲಿ ದಂಧೆ: ಯಾವುದೇ ಸೇವೆ ಒದಗಿಸಲು ಪಾಲಿಕೆ ವಲಯ ಕಚೇರಿಗಳಲ್ಲಿ ಭಾರೀ ದಂಧೆ ನಡೆಯುತ್ತಿದೆ ಎಂದು ಗಂಭೀರ ಆರೋಪ ಮಾಡಿದ ಮಾಜಿ ಮೇಯರ್ ಪುರುಷೋತ್ತಮ್ ಅವರು, ಎಲ್ಲಾ ಬಡಾವಣೆಗಳಲ್ಲಿ ನೀರು, ಆಸ್ತಿ ತೆರಿಗೆ ವಸೂಲಿ ಮಾಡಿ ರೆವಿನ್ಯೂ ಬಡಾವಣೆಗಳಿಂದ ದುಪ್ಪಟ್ಟು ತೆರಿಗೆ ಸಂಗ್ರಹಿಸಿ ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಎಸ್ಸಿ, ಎಸ್ಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ವಿಶೇಷ ಬಜೆಟ್ ತಯಾರಿಸಿ ಎಂದು ಅವರು ಸಲಹೆ ನೀಡಿದರು.

ಮಹಿಳೆಯರಿಗೆ ತರಬೇತಿ: ಮಹಿಳೆಯರ ಸುಧಾರಣೆಗೆ ಹೊಲಿಗೆ ತರಬೇತಿ, ನಾನಾ ಶೈಕ್ಷಣಿಕ ಚಟುವಟಿಕೆಗಳಿಗೆ ಆದ್ಯತೆ ನೀಡಿ, ಮೈಸೂರಿನಲ್ಲಿರುವ ಎಲ್ಲಾ ಪಾಲಿಕೆ ಆಸ್ತಿಗಳ ಮುಂದೆ ಫಲಕ ಅಳವಡಿಸಿ. ಒತ್ತುವರಿ, ಅತಿಕ್ರಮ ಪ್ರವೇಶ ತಪ್ಪಿಸಿ ಎಂದು ಮಾಜಿ ಉಪಮೇಯರ್ ಶಾಂತಕುಮಾರಿ ಸಲಹೆ ನೀಡಿದರು.

ಈ ಹಿಂದೆ ಬಡಕುಟುಂಬಗಳಿಗೆ ಒದಗಿಸಲಾಗುತ್ತಿದ್ದ, ಭಾಗ್ಯ ಜಲ, ಭಾಗ್ಯ ಜ್ಯೋತಿ ಯೋಜನೆಗಳನ್ನು ಮತ್ತೆ ಜಾರಿಗೆ ತನ್ನಿ, ಆಸ್ತಿ ತೆರಿಗೆ, ನೀರಿನ ಕರ ವಸೂಲಾತಿಗೆ ಪ್ರತ್ಯೇಕ ಸಮಿತಿ ರಚಿಸಿ, ರೆವಿನ್ಯೂ ಬಡಾವಣೆಗಳಿಗೂ ಸೌಲಭ್ಯ ನೀಡುತ್ತಿರುವುದರಿಂದ ಅಲ್ಲಿಯೂ ತೆರಿಗೆ ವಸೂಲಾತಿಗೆ ಕ್ರಮ ವಹಿಸಿ ಎಂದರು.

ಖಾತಾ ಕಂದಾಯ ನೀಡಿ: ಕುರುಬಾರಹಳ್ಳಿ ಸರ್ವೆ ನಂಬರ್‌ಗೆ ಬಡಾವಣೆಗಳ ಆಸ್ತಿಗಳ ಖಾತೆ–ಕಂದಾಯ ಮಾಡಿಕೊಡಿ. ಪ್ಲಾನ್ ಮಂಜೂರು ಮಾಡಿಕೊಟ್ಟು ನೀರು, ಕಂದಾಯ ಸೋರಿಕೆ ತಡೆಗಟ್ಟಿ, ಖಾಲಿ ನಿವೇಶನಗಳನ್ನು ಸ್ವಚ್ಛಗೊಳಿಸಲು ಕ್ರಮವಹಿಸಿ ಎಂದು ಮಾಜಿ ಉಪಮೇಯರ್ ಮಹದೇವಮ್ಮ ತಿಳಿಸಿದರು.

ಸಿಎ ಸೈಟ್ ಪಡೆಯಿರಿ: ಪಾಲಿಕೆ ವಲಯ ಕಚೇರಿ, ಕಸ ವಿಲೇವಾರಿಯಂತಹ ಸಾರ್ವಜನಿಕ ಉದ್ದೇಶಕ್ಕೆ ಮುಡಾದಿಂದ ಸಿಎ ನಿವೇಶನವನ್ನು ಪಡೆದುಕೊಳ್ಳಲು ಪ್ರಯತ್ನಿಸಿ ಎಂದು ಮಾಜಿ ಮೇಯರ್ ಬಿ.ಎಲ್.ಭೈರಪ್ಪ ಹೇಳಿದರು. ಟ್ರೇಡ್ ಲೈಸೆನ್ಸ್, ನೀರಿನ ತೆರಿಗೆ, ಸ್ಲಂ, ರೆವಿನ್ಯೂ ಬಡಾವಣೆಗಳಿಂದ ಕಂದಾಯ ವಸೂಲಿಯಾಗುತ್ತಿಲ್ಲ. ಅದಕ್ಕಾಗಿ ಖಾತಾ– ಕಂದಾಯ ಮೇಳ ಮಾಡಿ ಕಂದಾಯ ಬಡಾವಣೆಗಳಿಗೆ 'ಬಿ' ಖಾತಾ ನೀಡಿ ತೆರಿಗೆ ವಸೂಲಿ ಮಾಡಿ ಎಂದು ಅವರು ಸಲಹೆ ನೀಡಿದರು.

ಅತೀ ಕಡಿಮೆ ಬಾಡಿಗೆ: ಪಾಲಿಕೆಗೆ ಸೇರಿದ ಕಟ್ಟಡಗಳಲ್ಲಿನ ಬಾಡಿಗೆ ಪರಿಷ್ಕರಿಸಬೇಕು, ದೇವರಾಜ ಮಾರುಕಟ್ಟೆ ಮಳಿಗೆ ಬಾಡಿಗೆದಾರರು ಬೇರೆಯವರಿಗೆ ಹೆಚ್ಚಿನ ದರಕ್ಕೆ ಬಾಡಿಗೆಗೆ ನೀಡಿದ್ದಾರೆ. ಮೂಲೆ, ಅಪಾರ್ಟ್‌ಮೆಂಟ್ ವಾಣಿಜ್ಯ ಕಟ್ಟಡಗಳ ವಿಸ್ತೀರ್ಣವನ್ನು ಕಡಿಮೆ ತೋರಿಸಿ ತೆರಿಗೆ ವಂಚಿಸುತ್ತಿರುವುದನ್ನು ತಪ್ಪಿಸಿ ಆದಾಯ ವೃದ್ಧಿಸಲು ಕ್ರಮವಹಿಸುವಂತೆ ಗುತ್ತಿಗೆದಾರರ ಸಂಘದ ಉದಯ್‌ಕುಮಾರ್ ಒತ್ತಾಯಿಸಿದರು.

ಪಿಂಕ್ ಟಾಯ್ಲೆಟ್: ಮಹಿಳೆಯರ ಸುರಕ್ಷತೆ ದೃಷ್ಟಿಯಿಂದ ಮೈಸೂರಲ್ಲಿ ಪಿಂಕ್ ಶೌಚಾಲಯ, ಪಿಂಕ್ ಆಟೋರಿಕ್ಷಾ, ಹೊಲಿಗೆ ಯಂತ್ರ ವಿತರಿಸಿ ಎಂದ ಮಾಜಿ ಉಪಮೇಯರ್ ಪುಷ್ಪವಲ್ಲಿ, ಎಲ್ಲಾ ನೀರಿನ ಸಂಪರ್ಕಗಳಿಗೂ ಮೀಟರ್ ಅಳವಡಿಸಿ ಎಂದರು.

ತೀವ್ರ ನಿಗಾ ಇರಲಿ: ನಕ್ಷೆಗನುಗುಣವಾಗಿ ಕಟ್ಟಡ ನಿರ್ಮಿಸುತ್ತಿದ್ದಾರೆಯೇ ಎಂಬುದರ ಬಗ್ಗೆ ಅಧಿಕಾರಿಗಳು ನಿರ್ಮಾಣ ಹಂತದಲ್ಲೇ ನಿಗಾವಹಿಸಬೇಕು. ತಪ್ಪಿದಲ್ಲಿ ದ್ವೇಷಕ್ಕೆ ಅಮಾಯಕ ನಾಗರಿಕರು ಬಲಿಯಾಗಬೇಕಾಗುತ್ತದೆ ಎಂದು ನಿವೃತ್ತ ಐಬಿ ಅಧಿಕಾರಿ ಆರ್.ಎನ್. ಕುಲಕರ್ಣಿ ಅವರ ಹತ್ಯೆ ಪ್ರಕರಣವನ್ನು ಮಾಜಿ ಮೇಯರ್ ಮೋದಾಮಣಿ ಅವರು ಉಲ್ಲೇಖಿಸಿದರು.

ರಸ್ತೆ ನಿರ್ವಹಣೆಗೆ ಒತ್ತು: ರಸ್ತೆ ನಿರ್ವಹಣೆ, ಕಸ ವಿಲೇವಾರಿಗೆ ಒತ್ತು ನೀಡಿ ಖರ್ಚು ಕಡಿಮೆ ಮಾಡಿ ಆದಾಯ ವೃದ್ಧಿಸಿಕೊಂಡು ಮೈಸೂರು ನಗರವನ್ನು ಸಮರ್ಪಕವಾಗಿ ನಿರ್ವಹಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಿ ಎಂದು ಮಾಜಿ ಮೇಯರ್ ಬಿ.ಕೆ.ಪ್ರಕಾಶ್ ಇದೇ ವೇಳೆ ಸಲಹೆ ನೀಡಿದರು.

ಮಾಜಿ ಮೇಯರ್‌ಗಳಾದ ಅಯೂಬ್ ಖಾನ್, ಆರಿಫ್ ಹುಸೇನ್ ಸೇರಿದಂತೆ ಹಲವು ಜನಪ್ರತಿನಿಧಿಗಳು, ಸಾರ್ವಜನಿಕರು ಸಹ 2023–24 ನೇ ಸಾಲಿನ ಹೊಸ ಯೋಜನೆಗಳಿಗೆ ಹಣ ಮೀಸಲಿರಿಸಿ, ಯೋಜನೆಗಳನ್ನು ಸಂಪೂರ್ಣವಾಗಿ ಜಾರಿಗೆ ತರಲು ಪ್ರಯತ್ನಿಸಿ ಎಂದು ಸಲಹೆ ನೀಡಿದರು.

ಎಲ್ಲರ ಸಲಹೆ–ಸೂಚನೆಗಳನ್ನು ಆಲಿಸಿದ ಮೇಯರ್ ಶಿವಕುಮಾರ್, ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಅವರು, ಈ ಎಲ್ಲಾ ಅಂಶಗಳನ್ನೂ ಗಮನದಲ್ಲಿರಿಸಿಕೊಂಡು ಪೂರಕವಾಗಿ ಬಜೆಟ್ ಪ್ರತಿ ಸಿದ್ಧಪಡಿಸುವ ಭರವಸೆ ನೀಡಿದರು.

ಉಪಮೇಯರ್ ಡಾ.ರೂಪಾ, ನಗರಪಾಲಿಕೆ ಅಧಿಕಾರಿಗಳಾದ ರೂಪಾ, ಎಂ.ಕೆ.ಸವಿತಾ ಮಹೇಶ್, ಸುವರ್ಣ ಸೇರಿದಂತೆ ಹಲವರು ಸಭೆಯಲ್ಲಿ ಹಾಜರಿದ್ದರು.

ನಗರ ಸ್ವಚ್ಛತೆಗೆ ಒತ್ತು ನೀಡಿ

ಮಡಿಕೇರಿ, ಡಿ.19– ಮಡಿಕೇರಿ ನಗರಸಭೆಯಲ್ಲಿ ಕಟ್ಟಡಗಳ ಭಗ್ನ ಅವಶೇಷಗಳನ್ನು ಎಲ್ಲೆಂದರಲ್ಲಿ ಹಾಕುತ್ತಿರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನಗಳ ಓಡಾಟಕ್ಕೆ ತುಂಬಾ ತೊಂದರೆ ಉಂಟಾಗಿದೆ.

ಆದ್ದರಿಂದ ಕಟ್ಟಡಗಳ ಭಗ್ನ ಅವಶೇಷಗಳನ್ನು ಎಲ್ಲೆಂದರಲ್ಲಿ ಎಸೆಯದೆ/ ಹಾಕದೆ ತಾತ್ಕಾಲಿಕವಾಗಿ ನಗರಸಭೆ ಘನತ್ಯಾಜ್ಯ ನಿವೇಶನ ಘಟಕದಲ್ಲಿ ಜಾಗವನ್ನು ನಿಗದಿಪಡಿಸಿದ್ದು, ನಿಗದಿತ ಶುಲ್ಕ ಪಾವತಿಸಿ ವಾಹನವನ್ನು ಅಗತ್ಯವಿದ್ದಲ್ಲಿ ಪಡೆಯಬಹುದು ಅಥವಾ ತಮ್ಮ ಸ್ವಂತ ವೆಚ್ಚದಲ್ಲಿ ಸ್ವಂತ/ ಖಾಸಗಿ ವಾಹನ ಉಪಯೋಗಿಸಿಕೊಂಡು ನಿಗದಿತ ಸ್ಥಳದಲ್ಲಿ ವಿಲೇವಾರಿ ಮಾಡುವುದು. ಈ ಆದೇಶವನ್ನು ಉಲ್ಲಂಘಿಸಿ ನಗರಸಭೆ ವ್ಯಾಪ್ತಿಯಲ್ಲಿಯ ಸಾರ್ವಜನಿಕ ಸ್ಥಳ ಅಥವಾ ರಸ್ತೆಗಳಲ್ಲಿ ಹಾಕಿದಲ್ಲಿ ಒಂದು ಸಾವಿರ ರೂ ವರೆಗೆ ದಂಡ ವಿಧಿಸಲಾಗುವುದು ಹಾಗೂ ಸೂಕ್ತ ಕಾನೂನು ಅಡಿ ಕ್ರಮ ಕೈಗೊಳ್ಳಲಾಗುವುದು. ನಗರವನ್ನು ಸ್ವಚ್ಛವಾಗಿಡಲು ಹಾಗೂ ಸ್ವಚ್ಛ ಭಾರತ್ ಮಿಷನ್ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸಾರ್ವಜನಿಕರು ಸಂಪೂರ್ಣ ಸಹಕಾರ ನೀಡಬೇಕಾಗಿ ಪೌರಾಯುಕ್ತರಾದ ವಿಜಯ ಅವರು ಕೋರಿದ್ದಾರೆ.

ನಾಳೆಯಿಂದ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ

ಮಡಿಕೇರಿ, ಡಿ.19– ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಸಂಸ್ಥೆ ಹಾಗೂ ಮೂಡಬಿದ್ರೆ ಆಳ್ವಾಸ್ ವಿದ್ಯಾಸಂಸ್ಥೆ ಸಹಯೋಗದೊಂದಿಗೆ ಡಿಸೆಂಬರ್, 21 ರಿಂದ 27 ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರೆಯಲ್ಲಿ ನಡೆಯುವ ಅಂತರ ರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿಯಲ್ಲಿ ಭಾಗವಹಿಸುವ ಕೊಡಗಿನ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಡಿಸೆಂಬರ್, 20 ರಂದು ಗಾಂಧಿ ಮಂಟಪದ ಬಳಿ ಸೇರುವುದು. ಡಿಸೆಂಬರ್, 20 ರಂದು ಮಧ್ಯಾಹ್ನ 2 ಗಂಟೆಗೆ ಸರಿಯಾಗಿ ಜಿಲ್ಲಾಧಿಕಾರಿಗಳೊಂದಿಗೆ ಇತರ ಅಧಿಕಾರಿಗಳು ಶುಭ ಕೋರಿ ಬೀಳ್ಕೊಡಲಿರುವರು. 11 ಸಾರಿಗೆ ಬಸ್ಸಿನಲ್ಲಿ ತೆರಳಲಿದ್ದಾರೆ ಎಂದು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಘಟಕರಾದ ಸಿ.ದಮಯಂತಿ ಅವರು ತಿಳಿಸಿದ್ದಾರೆ.

ಮಾಜಿ ಸೈನಿಕರ ಸಮಸ್ಯೆಯ ಗಮನ ಸೆಳೆಯಲು ಸಿಎಂ ಭೇಟಿ

ಮಾಜಿ ಸೈನಿಕರ ಸಂಘದ ಸಮಾವೇಶದಲ್ಲಿ ನಿರ್ಣಯ



ಸಮಸ್ಯೆಗಳ ಅನಾವರಣ

ಸಮಾವೇಶದಲ್ಲಿ ಪಾಲ್ಗೊಂಡಿದ್ದ ಹೆಚ್ಚಿನ ಸಂಖ್ಯೆಯ ಮಾಜಿ ಯೋಧರು ಇಸಿಹೆಚ್‌ಎಸ್ ಮತ್ತು ಆರ್ಮಿ ಕ್ಯಾಂಟೀನ್‌ನಲ್ಲಿ ಆಗುತ್ತಿರುವ ಸಮಸ್ಯೆಗಳ ಕುರಿತು ಗಮನ ಸೆಳೆದರು. ಕ್ಯಾಂಟೀನ್‌ನಲ್ಲಿ 70 ವರ್ಷ ಮೇಲ್ಪಟ್ಟರಿಗೆ ಸಾಲಿನಲ್ಲಿ ನಿಂತು ವಸ್ತು ಖರೀದಿಸುವ ನಿಯಮದಿಂದ ರಿಯಾಯಿತಿ ನೀಡಿ ನೇರವಾಗಿ ಪಡೆಯಲು ಅವಕಾಶ ಕಲ್ಪಿಸಬೇಕು. ಕಣ್ಣು ನೋವು, ಹಲ್ಲು ನೋವಿಗೂ ಹೊರ ಊರಿನ ಆಸ್ಪತ್ರೆಗೆ ಚಿಕಿತ್ಸೆಗೆಂದು ತೆರಳಬೇಕಾದ ಅನಿವಾರ್ಯತೆ ಇದೆ. ಇದರಿಂದ ವಯಸ್ಸಾದ ನಮಗೆ ಸಮಯ ಮತ್ತು ಹಣ ವ್ಯರ್ಥವಾಗುತ್ತಿದೆ. ವಿವಾಹ ಸಮಾರಂಭವಿದ್ದಾಗ ಕ್ಯಾಂಟೀನ್‌ನಲ್ಲಿ ನಾವು ಕೇಳಿದ ಬ್ರಾಂಡ್‌ನ ಮದ್ಯವನ್ನು ನೀಡಿ ಸಹಕರಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳ ಕುರಿತು ಮನವಿ ಮಾಡಿದರು. ಇಸಿಹೆಚ್‌ಎಸ್ ಅಧಿಕಾರಿ ಮಾತನಾಡಿ ಕೊಡಗಿನಲ್ಲಿ ಎಲ್ಲಾ ಸೌಲಭ್ಯಗಳಿರುವ ಸೂಕ್ತ ಆಸ್ಪತ್ರೆಯ ಕೊರತೆ ಇದೆ. ಈ ಕಾರಣದಿಂದ ದೊಡ್ಡ ಸಮಸ್ಯೆಗಳಿದ್ದಾಗ ಮೈಸೂರು, ಬೆಂಗಳೂರು, ಮಂಗಳೂರಿಗೆ ರೋಗಿಗಳನ್ನು ಕಳುಹಿಸಬೇಕಾದ ಪರಿಸ್ಥಿತಿ ಎದುರಾಗುತ್ತಿದ್ದು, ಸುಸಜ್ಜಿತ ಆಸ್ಪತ್ರೆಯ ಅವಶ್ಯಕತೆ ಇದೆ ಎಂದರು.

ಮಡಿಕೇರಿ, ಡಿ.19– ಮಾಜಿ ಸೈನಿಕರ ವಿವಿಧ ಬೇಡಿಕೆಗಳು ಮತ್ತು ಸಮಸ್ಯೆಗಳ ಕುರಿತು ಸರ್ಕಾರದ ಗಮನ ಸೆಳೆಯಲು ಈ ತಿಂಗಳ ಅಂತ್ಯದೊಳಗೆ ಮುಖ್ಯಮಂತ್ರಿಗಳ ಬಳಿಗೆ ನಿಯೋಗ ತೆರಳಲು ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಕೊಡಗು ಜಿಲ್ಲಾ ಘಟಕ ನಿರ್ಧರಿಸಿದೆ.

ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಸಂಘದ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ಕೆ.ಪಿ.ಸೋಮಣ್ಣ, ಕಳೆದ ಬಾರಿ ಬೆಂಗಳೂರು ಚಲೋ ಸಮಾವೇಶ ನಡೆಸಿದಾಗ ಕಂದಾಯ ಸಚಿವ ಆರ್.ಅಶೋಕ್ ಅವರನ್ನು ಮಾತ್ರ ಭೇಟಿ ಮಾಡಲಾಗಿತ್ತು. ಈ ಬಾರಿ ದಿನಾಂಕ ನಿಗದಿಪಡಿಸಿಕೊಂಡು ಮುಖ್ಯಮಂತ್ರಿಗಳನ್ನು ಭೇಟಿಯಾಗಿ ಕ್ಯಾಂಟೀನ್ ಮತ್ತು ಇಸಿಹೆಚ್‌ಎಸ್ ಸಮಸ್ಯೆಯ ಕುರಿತು ತಿಳಿಸಲಾಗುವುದು ಎಂದರು.

ಕೊಡಗಿನ ಮಟ್ಟಿಗೆ ಸೇನಾ ಕ್ಯಾಂಟೀನ್‌ನ ನಿಯಮಗಳನ್ನು ಸಡಿಲಿಸಬೇಕು, ಇಸಿಹೆಚ್‌ಎಸ್ ಸಮಸ್ಯೆ ಬಗೆಹರಿಯಬೇಕು. ತಾಲೂಕುವಾರು ಮಾಜಿ ಯೋಧರಿಗಾಗಿ ಸಮುದಾಯ ಭವನ ಮತ್ತು ಮಾಜಿ ಯೋಧರ ಕಾಲೋನಿ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಸಂಘದ ಉಪಾಧ್ಯಕ್ಷ ಸುಧೀರ್ ಮಾತನಾಡಿ, ಇತ್ತೀಚೆಗೆ ಬೆಂಗಳೂರಿನಲ್ಲಿ ಹೋರಾಟ ನಡೆಸಿದ ಪರಿಣಾಮವಾಗಿ ಜಮೀನು ಮಂಜೂರಾತಿ ಬಗ್ಗೆ ಸರ್ಕಾರದಿಂದ ಭರವಸೆ ದೊರೆತಿದೆ. ಸಂಘಟಿತರಾಗಿ ಹೋರಾಟ ನಡೆಸಿದಾಗ ಮಾತ್ರ ಸಮಸ್ಯೆಗಳಿಗೆ ಪರಿಹಾರ ಸಿಗಲು ಸಾಧ್ಯ. ಜಿಲ್ಲಾ ಸಂಘ ಆರಂಭಗೊಂಡಾಗ ಕೇವಲ 6 ಮಂದಿ ಇದ್ದರು, ಇಂದು 600ಕ್ಕೂ ಹೆಚ್ಚು ಮಂದಿ ಸದಸ್ಯತ್ವವನ್ನು ಪಡೆದಿದ್ದಾರೆ ಎಂದರು.

ಜಂಟಿ ಕಾರ್ಯದರ್ಶಿ ಹಾಗೂ ಜೈ ಭಾರತ್ ಅಕಾಡೆಮಿಯ ತರಬೇತುದಾರ ಲವ ಮಾತನಾಡಿ, ಪಿಯುಸಿ ಶಿಕ್ಷಣ ಮುಗಿಸಿದ ತಕ್ಷಣ ಮಕ್ಕಳನ್ನು ಸೇನೆಗೆ ಸೇರಿಸಬೇಕು, ಪದವಿ ಶಿಕ್ಷಣದ ಸಂದರ್ಭ ಸೇನೆಗೆ ಸೇರಲು ಆಸಕ್ತಿ ತೋರಿದರೆ ವಯೋಮಿತಿ ಮೀರಿ ಹೋಗಿರುತ್ತದೆ. ಆದ್ದರಿಂದ ಪಿಯುಸಿ ಸಂದರ್ಭದಲ್ಲೇ ಹೆಚ್ಚು ಹೆಚ್ಚು ಮಂದಿ ಸೇನೆಗೆ ಸೇರಿಕೊಳ್ಳಿ, ಆಸಕ್ತರಿಗೆ ನಮ್ಮ ಅಕಾಡೆಮಿ ವತಿಯಿಂದ ತರಬೇತಿ ನೀಡಲಾಗುವುದು ಎಂದರು.

ಸಭೆಯಲ್ಲಿದ್ದ ಇಸಿಹೆಚ್‌ಎಸ್ ಅಧಿಕಾರಿ, ಆರ್ಮಿ ಕ್ಯಾಂಟೀನ್ ವ್ಯವಸ್ಥಾಪಕರು, ಕೂಡಿಗೆ ಸೈನಿಕ ಶಾಲೆಯ ಅಧಿಕಾರಿ ಹಾಗೂ ಸೈನಿಕ ಮತ್ತು ಪುನರ್ ವಸತಿ ಇಲಾಖೆಯ ಅಧಿಕಾರಿಗಳು ತಮ್ಮ ವ್ಯಾಪಿಗೆ ಸಂಬಂಧಿಸಿದ ಮಾಹಿತಿಯನ್ನು ಮಾಜಿ ಯೋಧರಿಗೆ ನೀಡಿದರು.

ಈ ಸಂದರ್ಭ ಅಂತರರಾಷ್ಟ್ರೀಯ ಮಟ್ಟದ ಪದಕ ವಿಜೇತ ಕ್ರೀಡಾಪಟು ಹಾಗೂ ಮಾಜಿ ಸೈನಿಕ ಹೆಚ್.ಎ.ಚಿನ್ನಪ್ಪ, ರಾಷ್ಟ್ರಮಟ್ಟದ ಪದಕ ವಿಜೇತ ಕ್ರೀಡಾಪಟು ಹಾಗೂ ಮಾಜಿ ಸೈನಿಕ ಬಾರನ ರಂಗನಾಥ್, ಮಡಿಕೇರಿ ತಾಲೂಕು ಅಧ್ಯಕ್ಷ ಪಿ.ಕುಟ್ಟಪ್ಪ, ಕೊಡಗು ಗೌಡ ಮಾಜಿ ಸೈನಿಕರ ಸಂಘದ ಕಾರ್ಯದರ್ಶಿ ತಳೂರು ಕಾಳಪ್ಪ ಮತ್ತಿತರರು ಉಪಸ್ಥಿತರಿದ್ದರು.

ನಿವೇಶನಕ್ಕೆ ಆಗ್ರಹಿಸಿ ಗ್ರಾಪಂ ಮುಂದೆ ಪ್ರತಿಭಟನೆ



ವಿರಾಜಪೇಟೆ, ಡಿ.19– ಬಡ ಕುಟುಂಬದ ದಲಿತರು, ಆದಿವಾಸಿಗಳಿಗೆ ಸ್ವಂತ ಸೂರು ಇಲ್ಲದೆ ಬಾಡಿಗೆ ಮನೆ ಹಾಗೂ ಲೈನ್ ಮನೆಗಳಲ್ಲಿ ವಾಸಮಾಡುತ್ತಿದ್ದು ನಿವೇಶನಕ್ಕಾಗಿ ಅನೇಕ ವರ್ಷಗಳಿಂದ ಹೋರಾಟ ನಡೆಸಿ ಮನವಿ ಸಲ್ಲಿಸಿದ್ದರೂ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಮತ್ತು ಸ್ಥಳೀಯ ನಿವಾಸಿಗಳು ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಕಾರ್ಮಾಡು ಗ್ರಾಮ ಪಂಚಾಯಿತಿ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಿ.ಪಿ.ಐ.(ಎಂ) ಕಾರ್ಯದರ್ಶಿ ಎ.ಮಹದೇವ್ ಮಾತನಾಡಿ, ಅಮ್ಮತ್ತಿ ಕಾರ್ಮಾಡು ವ್ಯಾಪ್ತಿಯಲ್ಲಿ ಅನೇಕ ದಲಿತರು ಮತ್ತು ಆದಿವಾಸಿಗಳು ಸ್ವಂತ ಸೂರು ಇಲ್ಲದೆ ಜೀವನ ನಡೆಸುತ್ತಿದ್ದಾರೆ. 2010 ರಿಂದಲೂ ನಿವೇಶನಕ್ಕಾಗಿ ಸ್ಥಳೀಯ ಪಂಚಾಯಿತಿಗೆ ಅರ್ಜಿ ಸಲ್ಲಿಸುತ್ತಿದ್ದರೂ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಯಾರೂ ಗಮನ ಹರಿಸದಿರುವುದರಿಂದ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ಮೇಲಧಿಕಾರಿಗಳು ಬಂದು ಪ್ರತಿಭಟನೆ ಸ್ಥಳದಲ್ಲಿಯೇ ತೀರ್ಮಾನ ಕೈಗೊಳ್ಳಬೇಕು. ಇಲ್ಲವಾದಲ್ಲಿ ನಿರಂತರ ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ಹೇಳಿದರು.

ನಂತರ ವಿರಾಜಪೇಟೆ ತಹಶೀಲ್ದಾರ್ ಅರ್ಚನಾ ಭಟ್ ಅವರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಪ್ರತಿಭಟನೆಯಲ್ಲಿದ್ದ ಮುಖಂಡರು, ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಬಿ. ನಾಣಯ್ಯ, ಅಭಿವೃದ್ಧಿ ಅಧಿಕಾರಿ ಎ.ಟಿ.ಮಾನಸ, ಸದಸ್ಯ ಅಭಿಜೀತ್, ಕಂದಾಯ ಪರಿವೀಕ್ಷಕ ಬಿ.ಆರ್. ಅನಿಲ್‌ಕುಮಾರ್, ಗ್ರಾಮಲೆಕ್ಕಿಗರಾದ ದೇವಯ್ಯ ಅವರುಗಳೊಂದಿಗೆ ಪಂಚಾಯಿತಿ ಸಭಾಂಗಣದಲ್ಲಿ ಸಭೆ ನಡೆಸಿ, ನಿರಾಶ್ರಿತರು, ಬಡ ಕಾರ್ಮಿಕರು ಮತ್ತು ಆದಿವಾಸಿಗಳು ಮನೆ ಇಲ್ಲದವರನ್ನು ಗುರುತಿಸಿ ಪಟ್ಟಿ ಮಾಡಿ ಗ್ರಾಮ ಸಭೆಯಲ್ಲಿ ಚರ್ಚಿಸಿ ಮಾಹಿತಿ ನೀಡುವಂತೆ ಗ್ರಾಪಂ, ಪಿಡಿಓಗೆ ಸೂಚಿಸಿದರಲ್ಲದೆ ಈ ಸಂಬಂಧ ಜಿಲ್ಲಾಧಿಕಾರಿಗಳೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸುವುದಾಗಿ ತಿಳಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ (ಎಂ) ಪಕ್ಷದ ಇಬ್ರಾಹಿಂ, ಹೆಚ್.ಪಿ.ರಮೇಶ್, ಹೋರಾಟ ಸಮಿತಿ ಅಧ್ಯಕ್ಷಪಾಪಣ್ಣ ಉಪಾಧ್ಯಕ್ಷ ಮನೋಜ್, ಸದಸ್ಯರಾದ ಯಶೋದ, ಪುಷ್ಪ, ಕುಮಾರ, ಮತ್ತಿತರರು ಉಪಸ್ಥಿತರಿದ್ದರು. ಪ್ರತಿಭಟನೆ ಸಂದರ್ಭ ಅಹಿತಕರ ಘಟನೆಗಳು ನಡೆಯದಂತೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು ಡಿವೈಎಸ್‌ಪಿ ನಿರಂಜನ್ ರಾಜೆ ಅರಸ್, ಗೋಣಿಕೊಪ್ಪ ವೃತ್ತನಿರೀಕ್ಷಕ ಗೋವಿಂದರಾಜು, ನಗರ ಠಾಣಾಧಿಕಾರಿ ಶ್ರೀಧರ್ ಭಾಗವಹಿಸಿದ್ದರು.

ಇಂದು ಜಿಲ್ಲಾ ಮಟ್ಟದ ಉದ್ಯೋಗ ಮೇಳ

ಮಡಿಕೇರಿ, ಡಿ.19– ಕೊಡಗು ಜಿಲ್ಲಾಡಳಿತ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆ ಹಾಗೂ ಗೋಣಿಕೊಪ್ಪ ಕಾವೇರಿ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳವು ಡಿಸೆಂಬರ್, 20 ರಂದು ಬೆಳಗ್ಗೆ 11.30 ಗಂಟೆಗೆ ಗೋಣಿಕೊಪ್ಪಲು ಕಾವೇರಿ ಕಾಲೇಜಿನಲ್ಲಿ ನಡೆಯಲಿದೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಕಿಕ್ ಬಾಕ್ಸಿಂಗ್‌ನಲ್ಲಿ ಬೆಳ್ಳಿ ಪದಕ



ಮಡಿಕೇರಿ, ಡಿ.19– ಮೈಸೂರಿನಲ್ಲಿ ನಡೆದ ರಾಜ್ಯ ಮಟ್ಟದ ಕಿಕ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಬೆಟ್ಟಗೇರಿ ಕಿಕ್ ಬಾಕ್ಸಿಂಗ್ ಸಂಸ್ಥೆಯ ಕ್ರೀಡಾಪಟು ಪಿ.ಬಿ.ಧನುಷ್ ಬೆಳ್ಳಿ ಪದಕ ಗೆದ್ದಿದ್ದಾರೆ. ಧನುಷ್ ಅವರು ಕೊಡಗು ಕಿಕ್ ಬಾಕ್ಸಿಂಗ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಎನ್.ಸಿ.ಸುದರ್ಶನ್ ಹಾಗೂ ತರಬೇತುದಾರ ಬಿ.ಎ.ಆನಂದ ಪೂಜಾರಿ ಅವರ ಮಾರ್ಗದರ್ಶನದಲ್ಲಿ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ಧನುಷ್ ಚೇರಂಬಾಣೆ ಅರುಣ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ವಿದ್ಯಾರ್ಥಿ ಮತ್ತು ಹೆರವನಾಡು ಗ್ರಾಮದ ಪಟ್ಟಡ ಬಿ.ಬೆಳ್ಯಪ್ಪ ಹಾಗೂ ಭಾರತಿ ದಂಪತಿಯ ಪುತ್ರರಾಗಿದ್ದಾರೆ.

ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ



ಗೋಣಿಕೊಪ್ಪ, ಡಿ.19– ಪೊನ್ನಂಪೇಟೆ ತಹಸೀಲ್ದಾರ್ ಕಚೇರಿಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ 16 ಫಲಾನುಭವಿಗಳಿಗೆ ಶಾಸಕ ಕೆ. ಜಿ. ಬೋಪಯ್ಯ ಹಕ್ಕುಪತ್ರ ವಿತರಣೆ ಮಾಡಿದರು.

ಒಟ್ಟು 57 ಅರ್ಜಿಗಳಲ್ಲಿ 7 ಸಾಗುವಳಿ, 9 ಮನೆ ನಿವೇಶನ ಹಕ್ಕುಪತ್ರ ವಿತರಿಸಲಾಯಿತು. ನಂತರ ಅವರು ಮಾತನಾಡಿ, ಉಳಿದಿರುವ ಅರ್ಹ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲು ಶೀಘ್ರವಾಗಿ ಕ್ರಮಕೈಗೊಳ್ಳಬೇಕು ಎಂದರು. ತಹಸೀಲ್ದಾರ್ ಎನ್.ಎಸ್. ಪ್ರಶಾಂತ್ ಮಾತನಾಡಿ, ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಹಕ್ಕುಪತ್ರ ವಿತರಿಸಲು ಕ್ರಮಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಬಗರ್‌ಹುಕುಂ ಸಾಗುವಳಿ ಸಮಿತಿ ತಾಲೂಕು ಅಧ್ಯಕ್ಷ ಗಿರೀಶ್ ಗಣಪತಿ, ಸದಸ್ಯ ಲಾಲಾ ಇದ್ದರು.

ಸರಣಿ ಅಪಘಾತ: ಬೈಕ್ ಸವಾರರಿಗೆ ಗಾಯ

ಕುಶಾಲನಗರ, ಡಿ.19– ಸಮೀಪದ ಗಂಧದಕೋಟಿ ಬಳಿ ಸೋಮವಾರ ಮಧ್ಯಾಹ್ನ ಸರಣಿ ಅಪಘಾತ ಸಂಭವಿಸಿದೆ. ಉಡುಪಿಯಿಂದ ಮೈಸೂರಿಗೆ ತೆರಳುತ್ತಿದ್ದ ವ್ಯಾಗನಾರ್ ಕಾರು ನಿಯಂತ್ರಣ ತಪ್ಪಿ ಎದುರಿಗೆ ಬರುತ್ತಿದ್ದ ಎರಡು ದ್ವಿಚಕ್ರ ವಾಹನಗಳಿಗೆ ಡಿಕ್ಕಿಯಾಗಿದೆ. ಬಳಿಕ ರಸ್ತೆ ಬದಿ ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದೆ. ಘಟನೆಯಲ್ಲಿ ದ್ವಿಚಕ್ರ ವಾಹನ ಸವಾರರಾದ ಚಂದ್ರಶೇಖರ್ ಎಂಬವರ ಕೈಬೆರಳು ತುಂಡಾಗಿದ್ದು ಮತ್ತೊಬ್ಬ ಸವಾರ ಸಂಜಯ್ ಗೆ ಸಣ್ಣಪುಟ್ಟ ಗಾಯಗಳಾಗಿವೆ. ಕಾರು ಚಾಲಕ ಮೈಸೂರಿನ ಶ್ರೀನಿವಾಸ ಎಂಬವರ ವಿರುದ್ಧ ಕುಶಾಲನಗರ ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಶಾರ್ಟ್ ಸರ್ಕ್ಯೂಟ್: 5 ಎಕರೆ ಕಬ್ಬು ಭಸ್ಮ

ಚಾಮರಾಜನಗರ, ಡಿ.19– ತಾಲೂಕಿನ ನಲ್ಲೂರುಮೋಳೆ ಗ್ರಾಮದ ಸುಂದರ್ ಅವರು ಹೊಂಡರಬಾಳು ಗ್ರಾಮದಲ್ಲಿ ಗುತ್ತಿಗೆ ಪಡೆದು 5 ಎಕರೆ ಜಮೀನಿನಲ್ಲಿ



ಬೆಳೆದು ಕಟಾವಿಗೆ ಬಂದಿದ್ದ ಕಬ್ಬಿನ ಬೆಳೆ ಇತ್ತೀಚೆಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಸುಟ್ಟು ಭಸ್ಮವಾಗಿದೆ. ಸ್ಥಳಕ್ಕೆ ಅಗ್ನಿಶಾಮಕದಳ ಸಿಬ್ಬಂದಿಯವರು ಧಾವಿಸಿ ನಂದಿಸುವವಷ್ಟರಲ್ಲಿ ಕಬ್ಬಿನ ಬೆಳೆ ಬೆಂಕಿ ಕೆನ್ನಾಲಿಗೆಗೆ ಭಸ್ಮವಾಗಿದ್ದು, ರಾಮಸಮುದ್ರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸಾಲ ಮಾಡಿ ಕಷ್ಟಪಟ್ಟು ಬೆವರು ಸುರಿಸಿ ಬೆಳೆದ ಕಬ್ಬು ಸುಟ್ಟು ಹೋಗಿದ್ದು, ಅಲ್ಲದೆ ತೆಂಗು, ಅಡಿಕೆ ಸಸಿಗಳು ಹಾಗೂ ತುಂತುರು ನೀರಾವರಿ ಪರಿಕರಗಳು ಕೂಡ ಬೆಂದು ಹೋಗಿದ್ದು, ಸುಮಾರು 8 ಲಕ್ಷಕ್ಕೂ ಹೆಚ್ಚು ರೂ.ನಷ್ಟ ಉಂಟಾಗಿದೆ.

ಇಂದು ಕೊಳ್ಳೇಗಾಲ, 22ರಂದು ಗುಂಡ್ಲುಪೇಟೆಗೆ ಲೋಕಾಯುಕ್ತ ಅಧಿಕಾರಿಗಳ ಭೇಟಿ: ದೂರು ಸ್ವೀಕಾರ

ಚಾಮರಾಜನಗರ, ಡಿ.19– ಜಿಲ್ಲೆಯ ಲೋಕಾಯುಕ್ತ ಅಧಿಕಾರಿಗಳು ಡಿಸೆಂಬರ್ 20ರಂದು ಕೊಳ್ಳೇಗಾಲ ಹಾಗೂ 22ರಂದು ಗುಂಡ್ಲುಪೇಟೆ ತಾಲೂಕು ಕೇಂದ್ರಗಳಿಗೆ ಭೇಟಿ ನೀಡಿ ಸಾರ್ವಜನಿಕರಿಂದ ದೂರು ಅರ್ಜಿ ಸ್ವೀಕರಿಸಿ ವಿಚಾರಣೆ ನಡೆಸಲಿದ್ದಾರೆ.

ಡಿ.20ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಕೊಳ್ಳೇಗಾಲದ ಪ್ರವಾಸಿ ಮಂದಿರ ಮತ್ತು ಡಿ.22ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಗುಂಡ್ಲುಪೇಟೆ ಪ್ರವಾಸಿಮಂದಿರದಲ್ಲಿ ಸಾರ್ವಜನಿಕರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಭರ್ತಿ ಮಾಡಿದ ದೂರು ಅರ್ಜಿಗಳನ್ನು ಸ್ವೀಕರಿಸಿ ವಿಚಾರಣೆ ನಡೆಸುವರು.

ಚಾ.ನಗರದಲ್ಲಿ ನಂದಿನಿ ಸಿಹಿ ಉತ್ಸವಕ್ಕೆ ಚಾಲನೆ



ಚಾಮರಾಜನಗರ, ಡಿ.19– ರಾಜ್ಯ ಹಾಲು ಒಕ್ಕೂಟದ ವತಿಯಿಂದ ನಂದಿನಿ ಸಿಹಿ ಉತ್ಸವಕ್ಕೆ ಚಾಲನೆ ನೀಡಿದ್ದು, ಅದರಂತೆ ಚಾಮುಲ್ ವತಿಯಿಂದಲೂ ಸಿಹಿ ಉತ್ಸವಕ್ಕೆ ಚಾಲನೆ ನೀಡುತ್ತಿದ್ದು ಶೇ. 20 ರಿಯಾಯಿತಿ ದರದಲ್ಲಿ ನಂದಿನಿ ವಿವಿಧ ಬಗೆಯ ಸಿಹಿ ಉತ್ಪನ್ನಗಳು ಸಾರ್ವಜನಿಕರಿಗೆ ದೊರೆಯಲಿವೆ ಎಂದು ಚಾಮುಲ್ ಅಧ್ಯಕ್ಷ ವೈ.ಸಿ. ನಾಗೇಂದ್ರ ಹೇಳಿದರು.

ನಗರದ ಚಿಕ್ಕ ಅಂಗಡಿ ಬೀದಿಯಲ್ಲಿರುವ ನಂದಿನಿ ವಾಕಿಂಗ್ ಕೂಲ್ಡ್ ಸ್ಟೋರೇಜ್‌ನಲ್ಲಿ ಸಿಹಿ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕರ್ನಾಟಕ ಹಾಲು ಮಂಡಳಿ ವತಿಯಿಂದ ರಾಜ್ಯದಲ್ಲಿರುವ ಎಲ್ಲಾ ಹಾಲು ಒಕ್ಕೂಟಗಳಲ್ಲೂ ಕಳೆದ 15 ವರ್ಷಗಳಿಂದ ನಂದಿನಿ ಸಿಹಿ ಉತ್ಸವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಮೈಸೂರ್ ಪಾಕ್, ಪೇಡಾ, ಬೆಸನ್ ಲಡ್ಡು, ಸಿರಿಧಾನ್ಯ ಲಾಡು ಮತ್ತು ಇತರೆ ಸಿಹಿ ಉತ್ಪನ್ನಗಳನ್ನು ಒಕ್ಕೂಟದ ಎಲ್ಲಾ ಶಾಪಿ, ಕ್ಷೀರ ಮಳಿಗೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಇದರಿಂದ ನೆಚ್ಚಿನ ನಂದಿನಿ ಗ್ರಾಹಕರನ್ನು ಸಂತೃಪ್ತಿಪಡಿಸುವುದು ಮುಖ್ಯ ಉದ್ದೇಶವಾಗಿದೆ ಎಂದರು.

ಚಾಮುಲ್ ಮುಖ್ಯ ವ್ಯವಸ್ಥಾಪಕ ರಾಜಶೇಖರಮೂರ್ತಿ, ನಂದಿನಿ ಹಾಲಿನ ಬಗ್ಗೆ ವಿವರಣೆ ನೀಡುತ್ತಾ ಒಕ್ಕೂಟಕ್ಕೆ ಲಾಭ ಮಾಡುವುದಷ್ಟೇ ಅಲ್ಲದೇ ರೈತರ ಹಿತರಕ್ಷಣೆ ಮಾಡುವುದರ ಜೊತೆಗೆ ಗ್ರಾಹಕರಿಗೆ ತಾಜಾ ಹಾಗೂ ಪರಿಶುದ್ಧವಾದ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸರಬರಾಜು ಮಾಡುವುದು ಒಕ್ಕೂಟದ ಮುಖ್ಯ ಉದ್ದೇಶವಾಗಿದೆ ಎಂದು. ಮನೆಗಳಲ್ಲಿ ನಂದಿನಿ ಹಾಲಿನ ವಿವಿಧ ಮಾದರಿಯ ಹಾಲು, ನಂದಿನಿ ಶುಭಂ, ನಂದಿನಿ ಸ್ಪೆಷಲ್ ಹಾಲು, ನಂದಿನಿ ಶುಭಂ ಗೋಲ್ಡ್ ಹಾಗೂ ನಂದಿನಿ ಹಾಲನ್ನು ತಪ್ಪದೇ ಬಳಸುವಂತೆ ತಿಳಿಸಿದರು.

ಚಾಮುಲ್ ನಿರ್ದೇಶಕ ಎಚ್. ಎಸ್. ಬಸವರಾಜು, ಶೀಲಾಪುಟ್ಟರಂಗಶೆಟ್ಟಿ, ಸದಾಶಿವ ಮೂರ್ತಿ, ಅಯ್ಯನಪುರ ಶಿವಕುಮಾರ್, ಚಾಮುಲ್ ಮಾರಾಟಾಧಿಕಾರಿ ರಾಘವೇಂದ್ರ, ವಿಸ್ತರಣಾಧಿಕಾರಿ ಶ್ಯಾಮಸುಂದರ್, ರಮಾನಂದ, ಭಾಗ್ಯರಾಜ್, ಲಕ್ಷ್ಮಿ, ಮಧುಸೂದನ್ ಕೂಲ್ಡ್ ಸ್ಟೋರೇಜ್‌ನ ಮಾಲೀಕರಾದ ಎನ್. ಆರ್. ಪುರುಷೋತ್ತಮ್, ಮಹೇಶ್ (ಪಾಪು) ಬಿಸಲವಾಡಿ ಮಹೇಶ್, ವಿಜಯ ಕುಮಾರ್, ಪುನೀತ್, ಇತರರು ಇದ್ದರು.

ಬಿಆರ್‌ಟಿಯಲ್ಲಿ ಗಂಡು ಹುಲಿ ಸಾವು

ಚಾಮರಾಜನಗರ, ಡಿ.19– ಬಿಳಿಗಿರಿ ರಂಗನಾಥಸ್ವಾಮಿ ದೇವಾಲಯ (ಬಿಆರ್‌ಟಿ) ಹುಲಿ ಸಂರಕ್ಷಿತ ಪ್ರದೇಶದ ಕೊಳ್ಳೇಗಾಲ ವಲಯ ಕಣ್ಣೂರು ಬೀಟ್‌ನ ಕುರುಬನ ಕೆರೆ ಬಳಿ ಗಂಡು ಹುಲಿಯ ಕಳೇಬರ ಪತ್ತೆಯಾಗಿದೆ.

ಶನಿವಾರ ಹುಲಿಯ ಕಳೇಬರ ಪತ್ತೆಯಾಗಿದ್ದು, ಅರಣ್ಯ ಇಲಾಖೆ ಸೋಮವಾರ ಈ ಬಗ್ಗೆ ಮಾಹಿತಿ ನೀಡಿದೆ. ಹುಲಿಗೆ 5ರಿಂದ 7ವರ್ಷ ವಯಸ್ಸಾಗಿರಬಹುದು ಎಂದು ಅಂದಾಜಿಸಲಾಗಿದೆ. 2020ರಲ್ಲಿ ಆ ಪ್ರದೇಶದಲ್ಲಿ ಈ ಹುಲಿಯನ್ನು ಗುರುತಿಸಲಾಗಿತ್ತು ಹುಲಿಯ ಉಗುರುಗಳು, ಹಲ್ಲುಗಳು ಎಲ್ಲವೂ ಇವೆ. ಮುಖಕ್ಕೆ ಗಾಯಗಳಾಗಿದ್ದು ಒಂದು ಕಣ್ಣು ಹೊರಗಡೆ ಬಂದಿದೆ. ಇನ್ನೊಂದು ಹುಲಿಯೊಂದಿಗೆ ನಡೆಸಿದ ಕಾದಾಟದಲ್ಲಿ ಮೃತಪಟ್ಟಿರಬಹುದು ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ.

ದೇಹದ ಅಂಗಾಂಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ತಿಳಿಸಿದ್ದಾರೆ.

ನಿಗದಿತ ಆರೋಗ್ಯ ತಪಾಸಣೆಗೆ ಸಲಹೆ

ಶಾಸಕ ನಿರಂಜನ್‌ಕುಮಾರ್ ಅಭಿಮತ



ಗುಂಡ್ಲುಪೇಟೆ, ಡಿ.19– ನಿಗದಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದರೊಂದಿಗೆ ಮುಂದಾಗುವ ಅನಾಹುತವನ್ನು ತಪ್ಪಿಸಿಕೊಳ್ಳಬಹುದು ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಹೇಳಿದರು.

ಪಟ್ಟಣದ ಜೆ.ಎಸ್.ಎಸ್.ಅನುಭವಮಂಟಪದಲ್ಲಿ ಮೈಸೂರಿನ ಜೆ.ಎಸ್.ಎಸ್.ಆಸ್ಪತ್ರೆ ಮತ್ತು ಜೆಎಸ್‌ಎಸ್ ವಿದ್ಯಾಪೀಠದ ವತಿಯಿಂದ ಆಯೋಜಿಸಿದ್ದ ಬೃಹತ್ ಆರೋಗ್ಯ ತಪಾಸಣೆ ಶಿಬಿರ ಹಾಗೂ ರಂಗೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರೋಗ ಬಂದ ನಂತರ ಆರೋಗ್ಯ ಪರೀಕ್ಷೆಗಳನ್ನು ಮಾಡಿಸುವ ಬದಲಾಗಿ ಬಿ.ಪಿ. ಮತ್ತು ಸಕ್ಕರೆ ಕಾಯಿಲೆಯ ನಿಗದಿತ ಸಾಮಾನ್ಯ ಆರೋಗ್ಯ ಪರೀಕ್ಷೆಗಳನ್ನು ಪ್ರತಿಯೊಬ್ಬರೂ ಮಾಡಿಸಿಕೊಂಡಾಗ ಮುಂದಾಗುವ ಕಿಡ್ನಿ ವೈಫಲ್ಯ ಸೇರಿದಂತೆ ಹಲವು ರೋಗಗಳನ್ನು ತಡೆಗಟ್ಟಬಹುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಾಜಿ ಸಚಿವೆ ಡಾ.ಗೀತಾ ಮಹದೇವಪ್ರಸಾದ್ ಮಾತನಾಡಿ, ಅನಾರೋಗ್ಯಕ್ಕೊಳಗಾದವರು ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಹೋಗಲು ಹೆಚ್ಚಿನ ಸಮಯ ಹಾಗೂ ಹಣ ವೆಚ್ಚವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜೆ.ಎಸ್.ಎಸ್. ಸಂಸ್ಥೆಯು ಪಟ್ಟಣದಲ್ಲಿ ಇಡೀ ವರ್ಷ ಉಚಿತ ಶಿಬಿರ ನಡೆಸಿ ತಜ್ಞ ವೈದ್ಯರಿಂದ ಸುಮಾರು 70ಕ್ಕೂ ಹೆಚ್ಚಿನ ರೋಗಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಲು ಮುಂದಾಗಿದೆ ಎಂದು ಹೇಳಿದರು.

ರಂಗೋತ್ಸವ ಕಾರ್ಯಕ್ರಮ ಉದ್ಘಾಟಿಸಿದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಂಗಕರ್ಮಿ ಎಂ.ವೈ.ಪುಟ್ಟಣ್ಣಯ್ಯ ಮಾತನಾಡಿ, ಜನರ ಮಾನಸಿಕ ಹಾಗೂ ದೈಹಿಕ ಆರೋಗ್ಯಕ್ಕೆ ಜೆ.ಎಸ್.ಎಸ್.ತನ್ನದೇ ಆದ ಶೈಲಿಯಲ್ಲಿ ರಂಗೋತ್ಸವ ಹಾಗೂ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜೆ.ಎಸ್.ಎಸ್.ಸಂಸ್ಥೆಯ ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಚಿಕ್ಕತುಪ್ಪೂರು ಶಿವಪೂಜಾ ಮಠದ ಚನ್ನವೀರ ಸ್ವಾಮೀಜಿ, ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಹೆಚ್.ಬಸವನಗೌಡಪ್ಪ, ಕಲಾಮಂಟಪದ ಸಂಚಾಲಕ ಚಂದ್ರಶೇಖರ್ ಹೆಗ್ಗೊಠಾರ, ಡಾ.ಆರ್.ಮಹೇಶ್, ಡಾ.ಮಧು, ಪದವಿ ಕಾಲೇಜಿನ ಪ್ರಾಂಶುಪಾಲ ಮರಿಸ್ವಾಮಪ್ಪ ವೀರಶೈವ ಮುಖಂಡರಾದ ಹೆಚ್.ಎಂ.ಗಣೇಶ ಪ್ರಸಾದ್, ಹೆಚ್.ಎಸ್.ನಂಜುಂಡಪ್ರಸಾದ್, ಹೆಚ್.ಎಸ್.ನಂಜಪ್ಪ, ನಿಟ್ರೆನಾಗರಾಜಪ್ಪ ಸೇರಿದಂತೆ ಹಲವರು ಭಾಗವಹಿಸಿದ್ದರು.

ಹನೂರಲ್ಲಿ ಕಾಂಗ್ರೆಸ್-ಜೆಡಿಎಸ್ ಕಾರ್ಯಕರ್ತರು ಬಿಜೆಪಿ ಸೇರ್ಪಡೆ



ಹನೂರು, ಡಿ.19– ಪಟ್ಟಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗಮಿಸಿ ವಿವಿಧ ಕಾರ್ಯಕ್ರಮಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ಮಾಡಿದ ನಂತರ ಕ್ಷೇತ್ರ ವ್ಯಾಪ್ತಿಯಲ್ಲಿ ಸಂಚಲನ ಮೂಡಿದ್ದು, ಕಾಂಗ್ರೆಸ್ ಹಾಗೂ ಜೆಡಿಎಸ್ ಕಾರ್ಯಕರ್ತರುಗಳು ಪಕ್ಷ ತೊರೆದು ಬಿಜೆಪಿ ಸೇರ್ಪಡೆಯಾಗುತ್ತಿದ್ದಾರೆ ಎಂದು ಒಬಿಸಿ ಕಾರ್ಯಕಾರಿಣಿ ರಾಜ್ಯ ಸಮಿತಿ ಸದಸ್ಯ ಜನಧ್ವನಿ ಬಿ ವೆಂಕಟೇಶ್ ತಿಳಿಸಿದರು.

ತಮ್ಮ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಪಕ್ಷ ಸೇರ್ಪಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ಆಡಳಿತವನ್ನು ನೋಡಿ ಕಾಂಗ್ರೆಸ್ ಹಾಗೂ ಜೆಡಿಎಸ್ ಕಾರ್ಯಕರ್ತರು ಬಿಜೆಪಿ ಸೇರ್ಪಡೆಯಾಗಿರುವುದು ಸಂತಸದ ವಿಚಾರ. ಮುಂದಿನ ದಿನಗಳಲ್ಲಿ ಪಕ್ಷವನ್ನು ಸಂಘಟನೆ ಮಾಡಿ, ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುವುದೇ ನಮ್ಮ ಪ್ರಮುಖ ಗುರಿ ಎಂದರು.


ಪಿಜಿ ಪಾಳ್ಯ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ ಮಾತನಾಡಿ, ವೆಂಕಟೇಶ್ ಅವರ ಜನಪರ ಕಾರ್ಯಕ್ರಮಗಳು, ಕೊರೊನಾ ಕಷ್ಟ ಕಾಲದಲ್ಲಿ ಬಡವರಿಗೆ ಸ್ಪಂದಿಸಿದ ರೀತಿ, ಕ್ಷೇತ್ರದ ಅಭಿವೃದ್ಧಿಗೆ ತೆಗೆದುಕೊಂಡಿರುವ ನಿರ್ಧಾರಗಳನ್ನು ಮೆಚ್ಚಿ ಪಕ್ಷ ಸೇರ್ಪಡೆಯಾಗುತ್ತಿದ್ದೇವೆ ಎಂದು ತಿಳಿಸಿದರು.

ಪಿ ಜಿ ಪಾಳ್ಯ ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಎನ್ ಕೃಷ್ಣಮೂರ್ತಿ, ರಾಮ್‌ಮೂರ್ತಿ, ಸಂತೋಷ್ ಕುಮಾರ್, ಮಾದೇಶ್, ಮುಖಂಡರುಗಳಾದ ಕರಳಿ ಮಾದೇಗೌಡ, ಮಲ್ಲು ಚಂದ್ರು ನಾಗರಾಜು ಕೃಷ್ಣ ಶೆಟ್ಟಿ ಲಿಂಗರಾಜು, ಮೆಲಿನ್ ಕುಮಾರ್ ಜಾ.ದಳ ತೊರೆದು ಒಬಿಸಿ ಕಾರ್ಯಕಾರಿ ರಾಜ್ಯ ಸಮಿತಿ ಸದಸ್ಯ ಜನಧ್ವನಿ ಬಿ ವೆಂಕಟೇಶ್ ನೇತೃತ್ವದಲ್ಲಿ ಬಿಜೆಪಿ ಸೇರ್ಪಡೆಯಾದರು. ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯರುಗಳಾದ ವರಪ್ರಸಾದ್, ರಾಜಪ್ಪ, ಜಬಿವುಲ್ಲಾ, ಮಲ್ಲೇಶ್ ಒಬಿಸಿ ಮಂಡಲ ಅಧ್ಯಕ್ಷ ಕೃಷ್ಣಪ್ಪ, ಬಿಜೆಪಿ ಮಂಡಲ ಉಪಾಧ್ಯಕ್ಷ ವೆಂಕಟೇಶ್, ಮುಖಂಡರುಗಳಾದ ಉಗನಿಯ ಮಹೇಶ್ ಮದುವನಹಳ್ಳಿ ಮಹೇಂದ್ರ, ಚಿನ್ನರಾಜು, ದೀಪು, ಜಾಫರ್, ರಂಗ ಹಾಜರಿದ್ದರು

ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲೂ ಬಿಎಸ್‌ಪಿ ಸ್ಪರ್ಧೆ: ಪಕ್ಷದ ಜಿಲ್ಲಾಧ್ಯಕ್ಷ ಎನ್.ನಾಗಯ್ಯ

ಆಕಾಂಕ್ಷಿಗಳು ಅರ್ಜಿ ಸಲ್ಲಿಸಲು ಡಿ. 25 ಕೊನೆ ದಿನ

ಚಾಮರಾಜನಗರ, ಡಿ.19– ಜಿಲ್ಲೆಯ 4 ವಿಧಾನಸಭಾ ಕ್ಷೇತ್ರಗಳಲ್ಲೂ ಬಿಎಸ್ಪಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು ಎಂದು ಬಹುಜನ ಸಮಾಜ ಪಕ್ಷದ ಜಿಲ್ಲಾಧ್ಯಕ್ಷ ಎನ್. ನಾಗಯ್ಯ ತಿಳಿಸಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಪರ್ಧಿಸುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಡಿ. 25 ಕೊನೆಯ ದಿನವಾಗಿದೆ. ಈಗಾಗಲೇ ರಾಜ್ಯಾದ್ಯಂತ ಅರ್ಜಿ ಸ್ವೀಕಾರ ಕಾರ್ಯಕ್ರಮ ನಡೆಯುತ್ತಿದೆ. ಎಲ್ಲ ಅರ್ಜಿಗಳನ್ನು ಕ್ರೋಢಕರಿಸಿ ಜ. 15 ರಂದು ಪಕ್ಷದ ವರಿಷ್ಠರಾದ ಮಾಯಾವತಿ ಅವರ ಹುಟ್ಟುಹಬ್ಬದ ದಿನ. ರಾಜ್ಯದ 224 ಕ್ಷೇತ್ರಗಳ ಪಕ್ಷದ ಅಭ್ಯರ್ಥಿಗಳ ಪಟ್ಟಿಯನ್ನು ಬಿಡಗಡೆ ಮಾಡಲಾಗುವುದು ಎಂದರು.

ಪಕ್ಷದ ವತಿಯಿಂದ ಬೆಂಗಳೂರಿನಲ್ಲಿ ಡಿ. 27 ರಂದು ಯುವ ಕಾರ್ಯಕರ್ತರ ಸಮಾವೇಶ ನಡೆಯಲಿದ್ದು ಈ ಕಾರ್ಯಕ್ರಮಕ್ಕೆ ಪಕ್ಷದ ರಾಷ್ಟ್ರೀಯ ಸಂಯೋಜಕರಾದ ಆಕಾಶ್ ಆನಂದ್ ಭಾಗವಹಿಸಲಿದ್ದಾರೆ ಎಂದರು.

ದೇಶ, ರಾಜ್ಯದಲ್ಲಿ ಆಡಳಿತ ನಡೆಸಿರುವ ಕಾಂಗ್ರೆಸ್, ಜೆಡಿಎಸ್ ಹಾಗೂ ಪ್ರಸ್ತುತ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರಗಳು ಜನಸಾಮಾನ್ಯ ಪರ ಯೋಜನೆ, ಕಾನೂನು ರೂಪಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ದೇಶದ ಅರ್ಥಿಕ ಅಸಮಾನತೆ, ಸಾಮಾಜಿಕ ಅಸಮಾನತೆ ಹೆಚ್ಚಾಗುತ್ತಿದೆ. ಧರ್ಮ ಧರ್ಮಗಳ ನಡುವೆ ಕೋಮುದ್ವೇಷ ಉಂಟಾಗಿದೆ. ಪ್ರಬುದ್ಧ ಭಾರತ ನಿರ್ಮಾಣಕ್ಕಾಗಿ ಸರ್ವಜನಾಂಗದ ಹಿತಕ್ಕಾಗಿ ಬಹುಜನ ಸಮಾಜ ಪಕ್ಷ ಅಧಿಕಾರಕ್ಕೆ ಬರಬೇಕಿದೆ ಈ ನಿಟ್ಟಿನಲ್ಲಿ ರಾಜ್ಯಾದ್ಯಂತ ಪಕ್ಷ ಸಂಘಟನೆಯಾಗುತ್ತಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕನಿಷ್ಠ ರಾಜ್ಯದಲ್ಲಿ 25 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಲು ಪಣತೊಟ್ಟಿದ್ದು ಸಿದ್ಧತೆಗಳು ನಡೆಯುತ್ತಿದೆ. ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸುವ ಗುರಿ ಹೊಂದಲಾಗಿದ್ದು, ಈ ನಿಟ್ಟಿನಲ್ಲಿ ನಾವು ಶ್ರಮಿಸಲಾಗುತ್ತಿದೆ ಎಂದರು

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಉಪಾಧ್ಯಕ್ಷ ಬ್ಯಾಡಮೂಡ್ಲುಬಸವಣ್ಣ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬ.ಮು.ಕೃಷ್ಣಮೂರ್ತಿ, ತಾಲೂಕು ಅಧ್ಯಕ್ಷ ಅಮಚವಾಡಿ ಪ್ರಕಾಶ್, ಉಪಾಧ್ಯಕ್ಷ ಗಗನ್‌ಚಂದ್ರಶೆಟ್ಟಿ ಹಾಜರಿದ್ದರು.

ಮೂರನೇ ಪುಟದಿಂದ

48.3 ಕೋಟಿ ರೂ. ಯೋಜನೆಗೆ ಕೇಂದ್ರದ ಅಸ್ತು

ಶ್ರೀ ಚಾಮುಂಡೇಶ್ವರಿ ದೇವಸ್ಥಾನದವರೆಗೆ ರಸ್ತೆ, ಆವರಣದ ಸೌಂದರ್ಯ ಅಭಿವೃದ್ಧಿಪಡಿಸುವ ಉದ್ದೇಶ ಯೋಜನೆಯಲ್ಲಿ ಸೇರಿದೆ. ಮಹಿಷಾಸುರ ಪ್ರತಿಮೆಯಿಂದ ಶ್ರೀ ಚಾಮುಂಡೇಶ್ವರಿ ದೇವಸ್ಥಾನದವರೆಗೆ ಪಾರಂಪರಿಕ ವಿದ್ಯುತ್ ದೀಪಗಳು, ಎಂಟ್ರೆನ್ಸ್ ಪ್ಲಾಜಾ, ಮಹಾಬಲೇಶ್ವರ ದೇವಸ್ಥಾನದ ಸುತ್ತಲಿನ ಪ್ರದೇಶದ ಅಭಿವೃದ್ಧಿಯೂ ಪ್ರಸ್ತಾವನೆಯಲ್ಲಿ ಸೇರಿದೆ. ಮಾರ್ಗಸೂಚಿಯಂತೆ ಇರದಿದ್ದ ಕಾರಣ 2019ರಲ್ಲಿ ಸಲ್ಲಿಸಿದ್ದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ತಿರಸ್ಕರಿಸಿದ್ದರಿಂದ ಕಳೆದ ವರ್ಷ ರಾಜ್ಯ ಪ್ರವಾಸೋದ್ಯಮ ಇಲಾಖೆಯು ಡಿಪಿಆರ್ ತಯಾರಿಸಿ ಹೊಸದಾಗಿ ಪ್ರಸ್ತಾವನೆ ಸಲ್ಲಿಸಿತ್ತು. ಈ ಯೋಜನೆಯಡಿ ಮೈಸೂರಿನ ಚಾಮುಂಡೇಶ್ವರಿ ದೇವಾಲಯ, ಆವರಣ, ನಂದಿ ಪ್ರತಿಮೆ ಆವರಣದ ಸಮಗ್ರ ಅಭಿವೃದ್ಧಿಪಡಿಸಲೆಂದು ಸಂಸದ ಪ್ರತಾಪ್ ಸಿಂಹ ನಿರಂತರ ಪ್ರಯತ್ನ ಮಾಡಿ ಯೋಜನೆ ಮಂಜೂರು ಮಾಡಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೇಂದ್ರ ಸರ್ಕಾರದಿಂದ ಈ ಬಗ್ಗೆ ಆದೇಶ ಹೊರಬೀಳುತ್ತಿದ್ದಂತೆಯೇ ಕಾಮಗಾರಿ ಆರಂಭವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೊದಲ ಪಟ್ಟಿ ಪ್ರಕಟ

ದಾಸರಹಳ್ಳಿ: ಆರ್. ಮಂಜುನಾಥ್
ತುಮಕೂರು: ಗೌರಿಶಂಕರ್
ಪಾವಗಡ: ತಿಮ್ಮರಾಯಪ್ಪ
ಮಧುಗಿರಿ: ವೀರಭದ್ರಯ್ಯ
ಚಿಂತಾಮಣಿ: ಜೆ.ಕೆ. ಕೃಷ್ಣಾರೆಡ್ಡಿ
ಮುಳಬಾಗಿಲು: ಸಮೃದ್ಧಿ ಮಂಜುನಾಥ್
ನಾಗಠಾಣ: ದೇವಾನಂದ ಚವಾನ್
ಮಾನ್ವಿ: ರಾಜಾವೆಂಕಟಪ್ಪ ನಾಯಕ
ಸಿಂಧನೂರು: ವೆಂಕಟರಾವ್ ನಾಡಗೌಡ
ಆನೇಕಲ್: ಕೆ.ಪಿ.ರಾಜು
ಬೆಂಗಳೂರು ದಕ್ಷಿಣ: ಪ್ರಭಾಕರ್ ರೆಡ್ಡಿ
ಬಸವನಗುಡಿ: ಅರಮನೆ ಶಂಕರ್
ಗೋವಿಂದರಾಜನಗರ: ಆರ್.ಪ್ರಕಾಶ್
ರಾಜಾಜಿನಗರ: ಗಂಗಾಧರ್‌ಮೂರ್ತಿ
ಗಾಂಧಿನಗರ: ವಿ.ನಾರಾಯಣಸ್ವಾಮಿ
ಹೆಬ್ಬಾಳ: ಮೊಹಿನ್ ಅಲ್ತಾಫ್
ಬ್ಯಾಟರಾಯನಪುರ : ವೇಣುಗೋಪಾಲ್
ಮಾಲೂರು: ಜೆ.ಇ.ರಾಮೇಗೌಡ
ಹೂವಿನ ಹಡಗಲಿ : ಪುತ್ರೇಶ್
ಸಂಡೂರು : ಸೋಮಪ್ಪ
ಚಳ್ಳಕೆರೆ : ರವೀಶ್
ಹೊಸದುರ್ಗ : ಎಂ. ತಿಪ್ಪೇಸ್ವಾಮಿ
ಹರಿಹರ : ಹೆಚ್.ಎಸ್. ಶಿವಶಂಕರ
ದಾವಣಗೆರೆ ದಕ್ಷಿಣ : ಅಮಾನುಲ್ಲಾ
ಚೆನ್ನಗಿರಿ : ಯೋಗೇಶ್
ಹೊನ್ನಾಳಿ : ಶಿವಮೂರ್ತಿಗೌಡ
ಶಿವಮೊಗ್ಗ (ಗ್ರಾ) : ಶಾರದಾ ನಾಯಕ್
ಭದ್ರಾವತಿ : ಶಾರದಾ ಅಪ್ಪಾಜಿಗೌಡ
ತೀರ್ಥಹಳ್ಳಿ : ರಾಜಾರಾಮ್
ಶೃಂಗೇರಿ : ಸುಧಾಕರ್ ಶೆಟ್ಟಿ
ಮೂಡಿಗೆರೆ: ಬಿ.ಬಿ. ನಿಂಗಯ್ಯ
ಚಿಕ್ಕಮಗಳೂರು : ತಿಮ್ಮಶೆಟ್ಟಿ
ಚಿಕ್ಕನಾಯಕನಹಳ್ಳಿ: ಜಿ.ಬಿ.ಸುರೇಶ್ ಬಾಬು
ತುರುವೇಕೆರೆ : ಎಂ.ಟಿ. ಕೃಷ್ಣಪ್ಪ
ಕುಣಿಗಲ್ : ಡಿ. ನಾಗರಾಜಯ್ಯ
ತುಮಕೂರು ನಗರ : ಗೋವಿಂದರಾಜು
ಕೊರಟಗೆರೆ : ಸುಧಾಕರ್ ಲಾಲ್
ಗುಬ್ಬಿ : ನಾಗರಾಜ
ಗೌರಿಬಿದನೂರು : ನರಸಿಂಹಮೂರ್ತಿ
ಬಾಗೇಪಲ್ಲಿ : ನಾಗರಾಜರೆಡ್ಡಿ
ಚಿಕ್ಕಬಳ್ಳಾಪುರ : ಕೆ.ಪಿ. ಬಚ್ಚೆಗೌಡ
ಶಿಡ್ಲಘಟ್ಟ : ರವಿಕುಮಾರ್
ಶ್ರೀನಿವಾಸಪುರ : ಜಿ.ಕೆ. ವೆಂಕಟಶಿವಾರೆಡ್ಡಿ
ಕೆಜಿಎಫ್ : ರಮೇಶ್‌ಬಾಬು
ಬಂಗಾರಪೇಟೆ : ಮಲ್ಲೇಶ್ ಬಾಬು
ಕೋಲಾರ : ಸಿಎಂಆರ್ ಶ್ರೀನಾಥ್
ಖಾನಾಪುರ : ನಾಸೀರ್ ಬಿ ಸಾಬ ಭಗವಾನ
ಬೈಲಹೊಂಗಲ : ಶಂಕರ ಮಾಡಲಗಿ
ಬಾದಾಮಿ : ಹನುಮಂತಪ್ಪ ಮಾವಿನಮರದ
ಮುದ್ದೆಬಿಹಾಳ: ಚನ್ನಬಸಪ್ಪ ಎಸ್ ಸೋಲ್ಲಾಪುರ
ದೇವರಹಿಪ್ಪರಗಿ : ರಾಜುಗೌಡ ಪಾಟೀಲ್
ಬಸವನಬಾಗೇವಾಡಿ : ಪರಮಾನಂದ ಬಸಪ್ಪ ತನಿಖೆದಾರ
ಬಬಲೇಶ್ವರ : ಬಸವರಾಜ ಹೊನವಾಡ
ಇಂಡಿ : ಬಿ.ಡಿ. ಪಾಟೀಲ್
ಸಿಂಧಗಿ : ಶಿವಾನಂದ ಪಾಟೀಲ
ಅಫ್ಜಲ್‌ಪುರ : ಶಿವಕುಮಾರ್ ನಾಟೇಕರ್
ಸೇಡಂ : ಬಾಲರಾಜ್ ಗುತ್ತೇದಾರ್
ಚಿಂಚೋಳ್ಳಿ : ಸಂಜೀನ ಯಾಕಾಪುರ
ಆಳಂದ : ಮಹೇಶ್ವರಿ ವಾಲೆ
ಗುರುಮಿಠಕಲ್: ನಾಗನಗೌಡ ಕಂದನೂರು
ಹುಮ್ನಾಬಾದ್ : ಸಿ.ಎಂ. ಫಯಾಜ್
ಬೀದರ್ : ರಮೇಶ್ ಪಾಟೀಲ್
ಬಸವಕಲ್ಯಾಣ : ಎಸ್.ವೈ. ಖಾದ್ರಿ
ರಾಯಚೂರು (ಗ್ರಾ) : ನರಸಿಂಹ ನಾಯಕ್
ದೇವದುರ್ಗ : ಕರೆಮ್ಮಾ ಜಿ ನಾಯಕ್
ಲಿಂಗಸಗೂರು : ಸಿದ್ದು ಬಂಡಿ
ಕುಷ್ಟಗಿ : ತುಕಾರಾಮ್ ಸುರ್ವಿ
ಕನಕಗಿರಿ : ಅಶೋಕ ಉಮ್ಮಲಟ್ಟಿ
ಹಾವೇರಿ : ತುಕಾರಾಮ್ ಮಾಳಗಿ
ಹಿರೇಕೆರೂರು : ಜಯಾನಂದ ಜಾವಣ್ಣನವರ
ರಾಣೆಬೆನ್ನೂರು : ಮಂಜುನಾಥ್ ಗೌಡರ್

ಮಂಡ್ಯ ಬಂದ್ ಭಾಗಶಃ ಯಶಸ್ವಿ

ಬೆಂಗಳೂರು– ಮೈಸೂರು ಹೆದ್ದಾರಿ, ಆರ್.ಪಿ.ರಸ್ತೆ, ವಿ.ವಿ.ರಸ್ತೆ, ವಿನೋಬಾ ರಸ್ತೆ, ಆಸ್ಪತ್ರೆ ರಸ್ತೆ ಪೇಟೆ ಬೀದಿ, ಗುತ್ತಲು ರಸ್ತೆ ನೂರಡಿ ರಸ್ತೆ ಬನ್ನೂರು ರಸ್ತೆ ವಿವೇಕಾನಂದ ಜೋಡಿ ರಸ್ತೆಯ ಅಂಗಡಿ– ಮುಂಗಟ್ಟುಗಳು ಭಾಗಶಃ ಬಂದ್ ಆಗಿದ್ದವು. ಬೆಳಿಗ್ಗೆ 6 ರಿಂದ ಮಧ್ಯಾಹ್ನ 2ರವರೆಗೆ ಬಂದ್‌ಗೆ ವರ್ತಕರು ಸಂಪೂರ್ಣ ಬೆಂಬಲ ನೀಡಿದರು.

ನಗರದ ಎಲ್ಲಾ ಚಿತ್ರಮಂದಿರಗಳು ಬೆಳಗಿನ ಸಿನಿಮಾ ಪ್ರದರ್ಶನ ಸ್ಥಗಿತಗೊಳಿಸುವ ಮೂಲಕ ಬೆಂಬಲ ಸೂಚಿಸಿದರೆ, ನಂದಿನಿ ಪಾರ್ಲರ್‌ಗಳು ಸಹ ಬಂದ ಆಗಿದ್ದವು. ಕೆಲ ಆಟೋ, ಖಾಸಗಿ ಬಸ್‌ಗಳ ಚಾಲಕರು ಸಹ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕಾಲೇಜು ವಿದ್ಯಾರ್ಥಿಗಳು ಭಾಗಿ: ಇನ್ನೂ ಶಾಲೆಗಳು ಎಂದಿನಂತೆ ಕಾರ್ಯನಿರ್ವಹಿಸಿದರೆ; ಕಾಲೇಜು ವಿದ್ಯಾರ್ಥಿಗಳು ಮಾತ್ರ ಸ್ವಯಂ ಪ್ರೇರಿತವಾಗಿ ರಜೆ ಹಾಕಿ ಸಾವಿರಾರು ಸಂಖ್ಯೆಯಲ್ಲಿ ಇಂದು ನಡೆದ ರೈತ ಚಳುವಳಿಯಲ್ಲಿ ಭಾಗಿಯಾಗಿ ಗಮನ ಸೆಳೆದರು. ಇನ್ನುಳಿದಂತೆ ಸರ್ಕಾರಿ ಕಚೇರಿಗಳು ಎಂದಿನಂತೆ ಕಾರ್ಯನಿರ್ವಹಿಸಿದರೆ, ಜನ ಸಂಚಾರ ಹಾಗೂ ವಾಹನ ಸಂಚಾರ ಎಂದಿನಂತೆ ಇತ್ತು.

ಟ್ರಾಫಿಕ್ ಜಾಮ್, ಬದಲಿ ಸಂಚಾರ ವ್ಯವಸ್ಥೆ: ಮಂಡ್ಯ ನಗರದಲ್ಲಿ ಬೃಹತ್ ಪ್ರತಿಭಟನೆ ಹಿನ್ನೆಲೆಯಲ್ಲಿ ಬೆಂಗಳೂರು– ಮೈಸೂರು ಹೆದ್ದಾರಿ ಸೇರಿದಂತೆ ನಗರದ ಪ್ರಮುಖ ರಸ್ತೆಗಳಲ್ಲಿ ಕಿಲೋ ಮೀಟರ್‌ಗಟ್ಟಲೇ ವಾಹನಗಳು ಟ್ರಾಫಿಕ್‌ನಲ್ಲಿ ಸಿಲುಕಿದ್ದವು. ಬೆಂಗಳೂರಿನಿಂದ ಮೈಸೂರು ಕಡೆಗೆ ಸಂಚರಿಸುವ ವಾಹನಗಳನ್ನು ಮಂಡ್ಯ ನಗರ ಪ್ರವೇಶಿಸಲು ಬಿಡದೇ ಹೊಸ ರಸ್ತೆ ಮೂಲಕ ಸಂಚರಿಸಲು ಅನುವು ಮಾಡಿಕೊಟ್ಟಿದ್ದರೆ, ಮಂಡ್ಯ ನಗರದಲ್ಲಿ ವಿವೇಕಾನಂದ ಜೋಡಿ ರಸ್ತೆಯಿಂದ ಪಿಇಎಸ್ ಕಾಲೇಜು ರಸ್ತೆವರೆಗೆ ವಾಹನ ಸಂಚಾರ ನಿರ್ಬಂಧಗೊಳಿಸಲಾಗಿತ್ತು.

ಮದ್ದೂರು ಬಂದ್: ಮಂಡ್ಯ ನಗರದ ಪ್ರತಿಭಟನೆಯ ಭಾಗವಾಗಿ ರೈತ ಮುಖಂಡರು ಕರೆ ನೀಡಿದ್ದ ಮದ್ದೂರು ಹಾಗೂ ಕೆ.ಎಂ.ದೊಡ್ಡಿ ಬಂದ್ ಯಶಸ್ವಿಗೊಂಡಿತು. ಮದ್ದೂರು ಹಾಗೂ ಕೆ.ಎಂ.ದೊಡ್ಡಿ ಪಟ್ಟಣಗಳ ಅಂಗಡಿ– ಮುಂಗಟ್ಟುಗಳು ಬಂದ್ ಆಗಿದ್ದವು. ಸಂಚಾರ ಎಂದಿನಂತೆ ಇತ್ತು. ಇನ್ನು ರೈತ ಮುಖಂಡರು ವಿವಿಧ ಸಂಘಟನೆಗಳೊಂದಿಗೆ ಸೇರಿ ಬೃಹತ್ ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಮುಖಂಡರಾದ ಸುನಿತಾ ಪುಟ್ಟಣ್ಣಯ್ಯ, ಕೆಂಪೂಗೌಡ, ಮಧುಚಂದನ್, ತಗ್ಗಹಳ್ಳಿ ವೆಂಕಟೇಶ್, ವಿನಯ್‌ಕುಮಾರ್, ಕರವೇ ಜಯರಾಂ, ಕನ್ನಡ ಸೇನೆ ಮಂಜು, ನಾಗಣ್ಣಗೌಡ ಸೇರಿದಂತೆ ಸುಮಾರು ಮೂರು ಸಾವಿರ ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಭಾರತೀನಗರದಲ್ಲಿ ಬಂದ್: ರೈತರ ಬೆಳೆಗಳಿಗೆ ಬೆಂಬಲ ಬೆಲೆ ನೀಡುವಂತೆ ಒತ್ತಾಯಿಸಿ ರೈತರು ಮಂಡ್ಯದಲ್ಲಿ ನಡೆಸುತ್ತಿರುವ ಧರಣಿಗೆ ಬೆಂಬಲ ವ್ಯಕ್ತಪಡಿಸಿ ಪ್ರಗತಿಪರ ಸಂಘಟನೆಗಳು ಭಾರತೀನಗರದಲ್ಲಿ ಸೋಮವಾರ ಕರೆ ನೀಡಿದ್ದ ಬಂದ್ ಯಶಸ್ವಿ ಆಗಿದೆ.

ಸರ್ಕಾರಿ ಕಚೇರಿಗಳು, ಮೆಡಿಕಲ್, ಚಿತ್ರಮಂದಿರ, ಶಾಲಾಕಾಲೇಜುಗಳು, ತರಕಾರಿ ಅಂಗಡಿಗಳು ಎಂದಿನಂತೆ ಇದ್ದವು. ಮದ್ದೂರು–ಮಳವಳ್ಳಿ ಹೆದ್ದಾರಿ, ಹಲಗೂರು ರಸ್ತೆ, ಮಂಡ್ಯ ರಸ್ತೆಯಲ್ಲಿ ಬೈಕ್ ರ್‍ಯಾಲಿ ನಡೆಸಿ ಸರ್ಕಾರ ಕೂಡಲೇ ರೈತರು ಬೆಳೆದ ಬೆಳೆಗಳಿಗೆ ಬೆಂಬಲ ಬೆಲೆ ನೀಡುವಂತೆ ಆಗ್ರಹಿಸಿದರು. ಮಾದರಹಳ್ಳಿ ಗ್ರಾ.ಪಂ ಮಾಜಿ ಅಧ್ಯಕ್ಷ ಕೃಷ್ಣ, ಗ್ರಾ.ಪಂ ಮಾಜಿ ಅಧ್ಯಕ್ಷ ಕ್ಯಾತಘಟ್ಟ ರವಿಕುಮಾರ್, ಜೆಡಿಎಸ್ ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ರೈತಸಂಘದ ಮುಖಂಡ ಅಣ್ಣೂರು ಮಹೇಂದ್ರ, ತೊರೆಚಾಕನಹಳ್ಳಿ ಶಂಕರೇಗೌಡ, ಬಿ.ಎಸ್.ಬೋರೇಗೌಡ, ಮುಟ್ಟನಹಳ್ಳಿ ಶಿವಲಿಂಗೇಗೌಡ, ವರ್ತಕ ಸಂಘದ ಅಧ್ಯಕ್ಷ ಕೆಂಪಣ್ಣ, ಅಣ್ಣೂರು ಆರ್.ಸಿದ್ದಪ್ಪ, ಚಂದ್ರಶೇಖರ್, ಕ್ಯಾತಘಟ್ಟದ ಗಿರೀಶ್, ತಿಪ್ಪೂರು ಕೃಷ್ಣ, ರಘುವೆಂಕಟೇಗೌಡ, ಕರಡಕೆರೆ ಯೋಗೇಶ್, ವೈ.ಬಿ.ಶ್ರೀಕಂಠಸ್ವಾಮಿ, ತೊರೆಬೊಮ್ಮನಹಳ್ಳಿ ವೆಂಕಟೇಶ್, ಚಿಕ್ಕರಸಿನಕೆರೆ ಪ್ರಸಾದ್, ಅಣ್ಣೂರು ಪ್ರಸನ್ನ ಸೇರಿ ಹಲವರು ಇದ್ದರು.

ಶೇ.20ರಷ್ಟು ರಿಯಾಯಿತಿ ದರದಲ್ಲಿ ಮಾರಾಟ

ಉಳಿದ ಹಾಲನ್ನು ಸಿಹಿ ಹಾಗೂ ಇತರೆ ಉಪಉತ್ಪನ್ನಗಳ ತಯಾರಿಕೆಗೆ ಬಳಸಲಾಗುತ್ತಿದೆ. ಕೆಎಂಎಫ್ ಹಾಗೂ ಮೈಮುಲ್ ಜನರ ವಿಶ್ವಾಸ ಗಳಿಸಿದ ಸಂಸ್ಥೆಯಾಗಿರುವುದರಿಂದ ಉತ್ತಮ ವಹಿವಾಟು ನಡೆಯುತ್ತಿದೆ. ಇದರಿಂದಾಗಿ ಒಂದೂವರೆ ವರ್ಷದ ಅವಧಿಯಲ್ಲಿ ರೈತರು ಹಾಕುವ ಹಾಲಿಗೆ ಲೀಟರ್‌ಗೆ 7 ರೂ. ಹೆಚ್ಚಳ ಮಾಡಲಾಗಿದೆ ಎಂದರು.


ಈ ಸಂದರ್ಭದಲ್ಲಿ ಮೈಮುಲ್ ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆ.ಉಮಾಶಂಕರ್, ಕೆ.ಜಿ.ಮಹೇಶ್, ಪ್ರಕಾಶ್, ಕೆ.ಈರೇಗೌಡ, ಎಸ್.ಸಿ.ಅಶೋಕ್, ಕೆ.ಎಸ್.ಶಿವಕುಮಾರ್, ದಾಕ್ಷಾಯಿಣಿ, ಲೀಲಾ, ಬಿ.ನೀಲಾಂಬಿಕೆ, ಮೈಮುಲ್ ಪ್ರದಾನ ವ್ಯವಸ್ಥಾಪಕ ಹೆಚ್.ಆರ್.ರಘು, ವ್ಯವಸ್ಥಾಪಕರಾದ ಡಾ.ಸಣ್ಣತಮ್ಮೇಗೌಡ, ಕೆ.ಎಸ್.ಜಗದೀಶ್, ಎನ್.ಸಿ.ಅಶೋಕ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಮತ್ತೆ 11 ಮಂದಿ ಸೇರ್ಪಡೆ

ದರ್ಶನಾಪುರ, ಡಾ.ಶರಣ ಪ್ರಕಾಶ್ ಪಾಟೀಲ್–ಪ್ರಚಾರ ಸಮಿತಿಗೆ ಹೊಸದಾಗಿ ಸೇರಿದ ನಾಯಕರು. ಕಾಂಗ್ರೆಸ್ ಟಿಕೆಟ್ ಹಂಚಿಕೆಗೆ ಈ ಸಮಿತಿ ರಚನೆ ಮಾಡಲಾಗಿದ್ದು, ಭಾನುವಾರ ಇದರ ಮೊದಲ ಸಭೆ ಬೆಳಗಾವಿಯಲ್ಲಿ ನಡೆದಿದೆ. ಇದು ಕಾಂಗ್ರೆಸ್ ಚುನಾವಣಾ ಚಟುವಟಿಕೆಗಳ ತೀರ್ಮಾನ ಮಾಡಲಿದೆ. ಟಿಕೆಟ್ ಹಂಚಿಕೆ ವಿಚಾರದಲ್ಲಿ ಅರ್ಜಿಗಳ ಪರಿಶೀಲನೆ ನಡೆಸಲಿರುವ ಸಮಿತಿ, ಕ್ಷೇತ್ರಕ್ಕೆ ಕನಿಷ್ಠ 1 ರಿಂದ ಗರಿಷ್ಠ 3 ಮಂದಿ ಹೆಸರನ್ನು ಶಿಫಾರಸು ಮಾಡಲಿದೆ. ದೆಹಲಿಯಲ್ಲಿ ಸಭೆ ನಡೆದ ಬಳಿಕ ಸಮಿತಿ ರಚನೆಯಾಗಿದೆ.

ಜ.6, 7, 8ರಂದು ಮೈಸೂರಲ್ಲಿ ಬಿಜೆಪಿ ರಾಷ್ಟ್ರೀಯ ಎಸ್‌ಸಿ ಮೋರ್ಚಾ ಕಾರ್ಯಕಾರಿಣಿ

ಮೈಸೂರು ಪ್ರಾಂತ್ಯದ ಎಸ್‌ಸಿ ಸಮುದಾಯದ ಬೃಹತ್ ಸಮಾವೇಶಕ್ಕೂ ಸಿದ್ಧತೆ



ಮೈಸೂರು,ಡಿ.19(ಪಿಎಂ)– ಮುಂಬರುವ 2023ರ ಜ.6, 7 ಮತ್ತು 8ರಂದು ಮೈಸೂರಿನಲ್ಲಿ ಬಿಜೆಪಿ ರಾಷ್ಟ್ರೀಯ ಎಸ್‌ಸಿ ಮೋರ್ಚಾದ ಕಾರ್ಯಕಾರಿಣಿ ಹಾಗೂ ಇದಾದ ಬಳಿಕ ಮೈಸೂರು ಪ್ರಾಂತ್ಯದ ಎಸ್‌ಸಿ (ಪರಿಶಿಷ್ಟ ಜಾತಿ) ಸಮುದಾಯದ ಬೃಹತ್ ಸಮಾವೇಶ ನಡೆಸಲು ಬಿಜೆಪಿ ಸಿದ್ಧತೆ ನಡೆಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ಎಸ್‌ಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಾಲ್‌ಸಿಂಗ್ ಆರ್ಯ, ಮೈಸೂರಿನಲ್ಲಿ ರಾಷ್ಟ್ರೀಯ ಎಸ್‌ಸಿ ಮೋರ್ಚಾ ಕಾರ್ಯಕಾರಿಣಿ ಆಯೋಜನೆ ಸಂಬಂಧ ಎಲ್ಲಾ ವ್ಯವಸ್ಥೆ ಮಾಡಲಾಗುತ್ತಿದ್ದು, ಈ ಸಂಬಂಧ ಸ್ಥಳೀಯ ಮುಖಂಡರೊಂದಿಗೆ ಚರ್ಚಿಸಲು ಇಂದು ಮೈಸೂರಿಗೆ ಭೇಟಿ ನೀಡಿದ್ದೇನೆ ಎಂದು ತಿಳಿಸಿದರು.

ಈ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ರಾಷ್ಟ್ರಾದ್ಯಂತ ಇರುವ ಎಸ್‌ಸಿ ಮೋರ್ಚಾದ ಪದಾಧಿಕಾರಿಗಳು, ವಿಶೇಷ ಆಹ್ವಾನಿತರು ಪಾಲ್ಗೊಳ್ಳಲಿದ್ದಾರೆ. ಮೂರನೇ ದಿನ ಜ.8ರಂದು ಮಧ್ಯಾಹ್ನ 2ಕ್ಕೆ ಮೈಸೂರು ಪ್ರಾಂತ್ಯದ ಎಸ್‌ಸಿ ಸಮುದಾಯದ ಬೃಹತ್ ಸಮಾವೇಶ ಆಯೋಜಿಸಲು ತೀರ್ಮಾನಿಸಲಾಗಿದೆ. ಈ ಸಮಾವೇಶದಲ್ಲಿ ಲಕ್ಷಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಕಾರ್ಯಕಾರಿಣಿಯಲ್ಲಿ ಎಸ್‌ಸಿ ಸಮುದಾಯ ಸಂಬಂಧ ಕೇಂದ್ರದ ನೀತಿ ಕುರಿತಂತೆ ಪ್ರಸ್ತಾವನೆ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು. ಅಲ್ಲದೆ, ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಸಂಬಂಧ ರಾಜ್ಯ ಸರ್ಕಾರಕ್ಕೂ ಧನ್ಯವಾದ ಅರ್ಪಿಸಲಾಗುವುದು. ಕಾರ್ಯಕಾರಿಣಿ ಮತ್ತು ಸಮಾವೇಶದ ಸ್ಥಳ ಇನ್ನೂ ನಿಗದಿಯಾಗಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕರ್ನಾಟಕದಲ್ಲಿ ಕಾಂಗ್ರೆಸ್ 45 ವರ್ಷ, ಜೆಡಿಎಸ್ 12 ವರ್ಷ ಆಡಳಿತ ನಡೆಸಿವೆ. ಆದರೆ ಇವು ಎಸ್‌ಸಿ–ಎಸ್‌ಟಿ ಮೀಸಲಾತಿ ಹೆಚ್ಚಳದ ಬಗ್ಗೆ ನಿರ್ಧಾರ ಕೈಗೊಳ್ಳಲಿಲ್ಲ. ಕೇವಲ 8 ವರ್ಷಗಳ ಆಡಳಿತದಲ್ಲಿ ಬಿಜೆಪಿ ರಾಜ್ಯ ಸರ್ಕಾರ ಈ ಸಮುದಾಯಗಳ ಮೀಸಲಾತಿ ಹೆಚ್ಚಳಕ್ಕೆ ನಿರ್ಣಯ ಮಾಡಿದೆ. ರಾಜ್ಯ ಬಿಜೆಪಿ ಸರ್ಕಾರವು ಡಾ.ಅಂಬೇಡ್ಕರ್ ಮತ್ತು ಸಂವಿಧಾನದ ಆಶಯದಂತೆ ಆಡಳಿತ ನಡೆಸುತ್ತಿದೆ ಎಂದರು.

ದೇಶದಲ್ಲಿ ಸುದೀರ್ಘ ಆಡಳಿತ ನಡೆಸಿದ ಕಾಂಗ್ರೆಸ್, ಡಾ.ಅಂಬೇಡ್ಕರ್ ಅವರಿಗೆ ಭಾರತ ರತ್ನ ಪುರಸ್ಕಾರ ನೀಡಬೇಕೆಂದು ಚಿಂತಿಸಲೇ ಇಲ್ಲ. ಅಂಬೇಡ್ಕರ್ ಅವರಿದ್ದ ಸ್ಥಳಗಳನ್ನು ರಾಷ್ಟ್ರೀಯ ಸ್ಮಾರಕ ಮಾಡಲಿಲ್ಲ. ಸಂಸತ್‌ನಲ್ಲಿಯೂ ಅಂಬೇಡ್ಕರ್ ಭಾವಚಿತ್ರ ಸಹ ಇರಿಸಲಿಲ್ಲ. ಈ ಬಗ್ಗೆ ದಲಿತ ಮುಖಂಡ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ಪಕ್ಷದಲ್ಲಿದ್ದೂ ಧ್ವನಿ ಎತ್ತಲಿಲ್ಲ ಎಂದು ಟೀಕಾಪ್ರಹಾರ ನಡೆಸಿದರು.

ಕಾಂಗ್ರೆಸ್‌ಗೆ ದಲಿತರು ಓಟ್ ಬ್ಯಾಂಕ್ ಅಷ್ಟೇ: ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ದಲಿತರ ಮೀಸಲು ಹೆಚ್ಚಿಸಿದೆ ಆದರೆ ಅಧಿಕಾರ ಹಂಚಿಕೆ ಸಂದರ್ಭದಲ್ಲಿ ದಲಿತರನ್ನು ಬಿಜೆಪಿ ಪರಿಗಣಿಸುವುದಿಲ್ಲವೆಂಬ ಕಾಂಗ್ರೆಸ್ ನಾಯಕರ ಆರೋಪ ಸಂಬಂಧ ಪ್ರತಿಕ್ರಿಯಿಸಿದ ವಿಧಾನಪರಿಷತ್ ಸದಸ್ಯ ಮತ್ತು ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯಾಧ್ಯಕ್ಷ ಛಲವಾದಿ ನಾರಾಯಣ ಸ್ವಾಮಿ, ದೇಶದಲ್ಲಿ ಕಾಂಗ್ರೆಸ್ ಬಹುಕಾಲ ಆಡಳಿತ ನಡೆಸಿದ ಪಕ್ಷ. ಇಡೀ ದೇಶದಲ್ಲಿ ದಲಿತರು ಎಂದರೆ ಕಾಂಗ್ರೆಸ್‌ಗೆ ಕೇವಲ ಓಟ್ ಬ್ಯಾಂಕ್ ಅಷ್ಟೇ. ಅದು ಬಿಟ್ಟರೆ ಸಮುದಾಯದ ಉದ್ಧಾರ ಅವರಿಗೆ ಬೇಕಿಲ್ಲ ಎಂದು ದೂರಿದರು.

ಕಳೆದ 65–70 ವರ್ಷಗಳಿಂದ ರಾಜ್ಯದಲ್ಲಿ ದಲಿತರನ್ನು ಮುಖ್ಯಮಂತ್ರಿ ಮಾಡುತ್ತೇವೆ ಎನ್ನುತ್ತಲೇ ಕಾಂಗ್ರೆಸ್‌ನವರು ದಲಿತರಿಂದ ಓಟು ಹಾಕಿಸಿಕೊಂಡರು. ಆದರೆ ಯಾರನ್ನೂ ಮುಖ್ಯಮಂತ್ರಿ ಮಾಡಲಿಲ್ಲ. ಮಲ್ಲಿಕಾರ್ಜುನ ಖರ್ಗೆ, ಬಸವಲಿಂಗಪ್ಪ, ಎನ್.ರಾಚಯ್ಯ, ಟಿ.ಎನ್.ನರಸಿಂಹ ಮೂರ್ತಿ, ಕೆ.ಹೆಚ್. ಮುನಿಯಪ್ಪ, ಶ್ರೀನಿವಾಸಪ್ರಸಾದ್, ಡಾ.ಜಿ. ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡಿದರೆ ಎಂದು ಪ್ರಶ್ನಿಸಿದರಲ್ಲದೆ, ಡಾ.ಜಿ.ಪರಮೇಶ್ವರ್ ಅವರನ್ನು ಗೆದ್ದರೆ ಮುಖ್ಯಮಂತ್ರಿ ಮಾಡಬೇಕಾಗುತ್ತದೆ ಎಂದು ಅವರ ಕ್ಷೇತ್ರದಲ್ಲೇ ಅವರ ಕತ್ತುಹಿಸುಕಿದರು ಎಂದು ಟೀಕಿಸಿದರು.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಕೇವಲ ಏಳೆಂಟು ವರ್ಷಗಳಲ್ಲಿ ಎರಡನೇ ಅವಧಿಯಲ್ಲಿ ಗೋವಿಂದ ಕಾರಜೋಳ ಅವರನ್ನು ಉಪಮುಖ್ಯಮಂತ್ರಿ ಮಾಡಿತು. ಹಾಗಾಗಿ ದಲಿತ ವಿರೋಧಿ ಕಾಂಗ್ರೆಸ್ ಹೊರತು, ಬಿಜೆಪಿಯಲ್ಲ. ಅಂಬೇಡ್ಕರ್ ಅವರ ಆಶಯದಂತೆ ಬಿಜೆಪಿ ಮುನ್ನಡೆಯುತ್ತಿದೆ ಎಂದರು.

ಮೀಸಲಾತಿ ಪ್ರಮಾಣ ಶೇ.50ಕ್ಕಿಂತ ಮೀರುವಂತಿಲ್ಲ ಎಂದು ಸುಪ್ರಿಂಕೋರ್ಟ್ ಆದೇಶವಿರುವ ಹಿನ್ನೆಲೆಯಲ್ಲಿ ಎಸ್‌ಸಿ–ಎಸ್‌ಟಿ ಹೆಚ್ಚಳ ಅನುಷ್ಠಾನದ ಬಗ್ಗೆ ಪ್ರತಿಕ್ರಿಯಿಸಿ, ಅದೇ ಸುಪ್ರಿಂಕೋರ್ಟ್ ಆರ್ಥಿಕವಾಗಿ ಹಿಂದುಳಿದ ಮೇಲ್ವರ್ಗದ ಶೇ.10ರಷ್ಟು ಮೀಸಲಾತಿಗೆ ಸಮ್ಮತಿಸಿದೆ. ಹಾಗಾಗಿ ಹಲವು ರಾಜ್ಯಗಳಲ್ಲಿ ಮೀಸಲಾತಿ ಪ್ರಮಾಣ ಶೇ.60ರಷ್ಟಾಗಿದೆ. ಹಾಗಾಗಿ ಯಾವುದೇ ಸಮಸ್ಯೆ ಇಲ್ಲ ಎಂದು ಹೇಳಿದರು. ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಮಾಜಿ ಶಾಸಕ ನಂಜುಂಡಸ್ವಾಮಿ, ಮುಖಂಡ ಕೆ.ವಿ.ಕೃಷ್ಣಮೂರ್ತಿ ಗೋಷ್ಠಿಯಲ್ಲಿದ್ದರು.

ವಂಚನೆ ಆರೋಪದಡಿ ಎಫ್‌ಐಆರ್ ದಾಖಲಾದ ಹಿನ್ನೆಲೆ

ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ ರಾಜೀನಾಮೆಗೆ ಒತ್ತಾಯ

ಸಂಘವೇ ಅವರನ್ನು ವಜಾಗೊಳಿಸಲು ಪರಾಜಿತ ಅಭ್ಯರ್ಥಿಗಳ ಚಾವಡಿ ಆಗ್ರಹ



ಮೈಸೂರು,ಡಿ.19(ಪಿಎಂ)–ರಾಜ್ಯ ಒಕ್ಕಲಿಗರ ಸಂಘದ ಅಧೀನದ ಕಿಮ್ಸ್ ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಡಿಸುವುದಾಗಿ 35 ಲಕ್ಷ ರೂ. ಪಡೆದು ವಂಚಿಸಿರುವ ಆರೋಪದಡಿ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ ವಿರುದ್ಧ ಎಫ್‌ಐಆರ್ ದಾಖಲಾಗಿರುವ ಹಿನ್ನೆಲೆಯಲ್ಲಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಇಲ್ಲವೇ ಸಂಘವೇ ಅವರನ್ನು ವಜಾಗೊಳಿಸಬೇಕೆಂದು ಸಂಘದ ಪರಾಜಿತ ಅಭ್ಯರ್ಥಿಗಳ ಚಾವಡಿ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಚಾವಡಿಯ ಬೀಡನಹಳ್ಳಿ ಸತೀಶ್‌ಗೌಡ, ಮೈಸೂರು–ಚಾಮರಾಜನಗರ ಭಾಗದಿಂದ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸ್ಥಾನಕ್ಕೆ ಎಂ.ಬಿ.ಮಂಜೇಗೌಡ ಮೂರನೇ ಸ್ಥಾನ ಪಡೆದು ಆಯ್ಕೆಯಾದರು. ಆದರೆ ಅವರ ವಿರುದ್ಧ ಗಂಭೀರ ಸ್ವರೂಪದ ಆರೋಪದಡಿ ಎಫ್‌ಐಆರ್ ದಾಖಲಾದ ಹಿನ್ನೆಲೆಯಲ್ಲಿ ಅವರು ರಾಜೀನಾಮೆ ನೀಡಬೇಕು. ಇಲ್ಲವೇ ಸಂಘವೇ ಅವರನ್ನು ನಿರ್ದೇಶಕ ಸ್ಥಾನದಿಂದ ವಜಾಗೊಳಿಸಬೇಕು. ಈ ಸಂಬಂಧ ಸಂಘದ ಅಧ್ಯಕ್ಷರು ಹಾಗೂ ಕಾರ್ಯಕಾರಿ ಮಂಡಳಿಗೆ ಪತ್ರ ಬರೆದಿದ್ದೇವೆ ಎಂದು ತಿಳಿಸಿದರು.

ರಾಜ್ಯ ಒಕ್ಕಲಿಗರ ಸಂಘ ಸೂಪರ್‌ಸೀಡ್ ಆಗಿದ್ದ ಕಾರಣ ಮೂರು ವರ್ಷಗಳ ಬಳಿಕ ಇದೇ ಡಿಸೆಂಬರ್‌ನಲ್ಲಿ ಚುನಾವಣೆ ನಡೆಯಿತು. ಬಳಿಕ ಇದೇ ನ.23ರಂದು ಮಂಜೇಗೌಡ ವಿರುದ್ಧ ಬೆಂಗಳೂರಿನ ಹೈ ಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ವಂಚನೆ ಆರೋಪದಡಿ ಎಫ್‌ಐಆರ್ ದಾಖಲಾಗಿದೆ. ಆ ಮೂಲಕ ಸಂಘದ ಘನತೆಗೆ ಅವರು ಧಕ್ಕೆ ತಂದಿದ್ದಾರೆ ಎಂದು ದೂರಿದರು.

ಈ ನಡುವೆ ಮಂಜೇಗೌಡ ತಾವು ಪಡೆದಿದ್ದ ಹಣವನ್ನು ಹಿಂದಿರುಗಿಸಿ ಸಂಧಾನ ಮಾಡಿಕೊಂಡಿದ್ದಾರೆ ಎನ್ನಲಾಗುತ್ತಿದೆ. ಆದರೆ ಇವರಿಂದ ಸಂಘದ ಘನತೆ–ಗೌರವ ಹಾಳಾಗಿದೆ. ತಮ್ಮ ವಿರುದ್ಧದ ಆರೋಪ ಸುಳ್ಳು ಎನ್ನುವುದಾದರೆ ಇವರು ಏಕೆ ಮಾನನಷ್ಟ ಮೊಕದ್ದಮೆ ದಾಖಲಿಸಲಿಲ್ಲ ಎಂದು ಪ್ರಶ್ನಿಸಿದರಲ್ಲದೆ, ಇವರು ಸಂಘದ ನಿರ್ದೇಶಕ ಸ್ಥಾನ ತ್ಯಜಿಸದಿದ್ದರೆ ಮೈಸೂರು–ಚಾಮರಾಜನಗರ ಜಿಲ್ಲೆಗಳಲ್ಲಿ ಅವರ ವಿರುದ್ಧ ಚಳವಳಿ ರೂಪಿಸಲಾಗುವುದು ಎಂದು ಹೇಳಿದರು.

ಚುನಾವಣೆ ಪೂರ್ವದಲ್ಲಿ ಭ್ರಷ್ಟಾಚಾರದಲ್ಲಿ ತೊಡಗುವುದಿಲ್ಲವೆಂದು ಎಲ್ಲಾ ಅಭ್ಯರ್ಥಿಗಳಿಂದ ಪ್ರಮಾಣ ಮಾಡಿಸಿದ್ದ ನೇಗಿಲಯೋಗಿ ಸಂಸ್ಥೆಯ ರವಿಕುಮಾರ್, ಈಗ ಈ ವಿಚಾರದಲ್ಲಿ ಉಡಾಫೆಯಾಗಿ ಮಾತನಾಡುತ್ತಿದ್ದಾರೆ ಎಂದು ದೂರಿದರು. ಪರಾಜಿತ ಅಭ್ಯರ್ಥಿಗಳಾದ ರಾಜು, ಸುಮಿತ್ರ ರಮೇಶ್, ಮುಖಂಡರಾದ ಕುಮಾರ್‌ಗೌಡ, ಅಭಿಷೇಕ್‌ಗೌಡ ಗೋಷ್ಠಿಯಲ್ಲಿದ್ದರು.

ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಜನ್ಮದಿನ ಪ್ರಯುಕ್ತ

ಡಿ.25ರಂದು ಪ್ರಬಂಧ, ರಂಗೋಲಿ ಸ್ಪರ್ಧೆ



ಮೈಸೂರು,ಡಿ.19(ಪಿಎಂ)– ಮೈಸೂರು ನಗರ–ಜಿಲ್ಲಾ ಬಿಜೆಪಿ ಯುವ ಮೋರ್ಚಾ ವತಿಯಿಂದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ (ಡಿ.25) ಪ್ರಯುಕ್ತ ಡಿ.25ರಂದು ಪ್ರಬಂಧ ಸ್ಪರ್ಧೆ ಮತ್ತು ರಂಗೋಲಿ ಬಿಡಿಸುವ ಸ್ಪರ್ಧೆ ಆಯೋಜಿಸಲಾಗಿದೆ ಎಂದು ನಗರ–ಜಿಲ್ಲಾ ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಕಾರ್ತಿಕ್ ಮರಿಯಪ್ಪ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 9.30ಕ್ಕೆ ಕೆಸರೆಯ ಕುರಿಮಂಡಿ 3ನೇ ಹಂತದ ಕಲ್ಪವೃಕ್ಷನಗರದ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ಪಾರ್ಕ್‌ನಲ್ಲಿ ಸ್ಪರ್ಧೆ ನಡೆಯಲಿದೆ. 13 ವರ್ಷ ಮೇಲ್ಪಟ್ಟವರು ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ರಂಗೋಲಿ ಸ್ಪರ್ಧೆಗೆ ಯಾವುದೇ ವಯಸ್ಸಿನ ಮಿತಿ ಇಲ್ಲ ಎಂದರು.

'ಭಾರತ ಕಂಡ ಹೆಮ್ಮೆಯ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ', 'ರಾಜಕೀಯ ರಂಗದ ಅಜಾತಶತ್ರು ಅಟಲ್ ಬಿಹಾರಿ ವಾಜಪೇಯಿ', 'ಅಭಿವೃದ್ಧಿ ಭಾರತದಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರ ಪಾತ್ರ' ಮತ್ತು 'ಭವ್ಯ ಭಾರತದ ನಿರ್ಮಾಣದಲ್ಲಿ ಅಟಲ್ ಬಿಹಾರಿ ವಾಜಪೇಯಿ ಅವರ ಪಾತ್ರ' ವಿಷಯ ಕುರಿತಂತೆ ಪ್ರಬಂಧ ರಚಿಸಬಹುದು. ದೇಶಭಕ್ತಿ ಹಾಗೂ ಅಟಲ್ ಬಿಹಾರಿ ವಾಜಪೇಯಿ ಅವರನ್ನು ಪ್ರತಿಬಿಂಬಿಸುವಂತೆ ರಂಗೋಲಿ ಬಿಡಿಸಬಹುದು ಎಂದು ಹೇಳಿದರು.

ಎರಡೂ ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಗಳಿಸುವವರಿಗೆ ಕ್ರಮವಾಗಿ 4 ಸಾವಿರ ರೂ., 2 ಸಾವಿರ ರೂ. ಮತ್ತು 1 ಸಾವಿರ ರೂ. ನಗದು ಬಹುಮಾನ ನೀಡಲಾಗುವುದು. ಸ್ಪರ್ಧೆಗೆ ನೋಂದಣಿ ಶುಲ್ಕವಿಲ್ಲ. ನೋಂದಾಯಿಸಿಕೊಳ್ಳಲು ಮೊ.ಸಂ. 99868 58371 ಅನ್ನು ಸಂಪರ್ಕಿಸಬಹುದು ಎಂದರು. ಮೋರ್ಚಾದ ಪದಾಧಿಕಾರಿಗಳಾದ ರೋಹಿತ್, ಪುನೀತ್, ಧನರಾಜ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ನಾಟಕೋತ್ಸವಕ್ಕೆ ಚಾಲನೆ



ಮೈಸೂರು, ಡಿ.19(ಎಂಕೆ)– ನಗರದ ಕಲಾಮಂದಿರದ ಕಿರುರಂಗಮಂದಿರದಲ್ಲಿ ನಾದರಂಗ ಆಯೋಜಿಸಿರುವ 'ನಾಟಕೋತ್ಸವ'ಕ್ಕೆ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಸೋಮವಾರ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಸುಗಮ ಸಂಗೀತ ಕಾರ್ಯಕ್ರಮಗಳ ಆಯೋಜನೆ ಮೂಲಕ ಕಲಾಸೇವೆ ಆರಂಭಿಸಿದ ನಾದರಂಗ, ನಾಟಕೋತ್ಸವಗಳನ್ನು ಆಯೋಜನೆ ಮಾಡುತ್ತಾ ಬಂದಿದೆ. ಪ್ರಮುಖವಾಗಿ ಹಳೆಯ ಸುಪ್ರಸಿದ್ಧ ನಾಟಕಗಳ ಪ್ರದರ್ಶನ ಏರ್ಪಡಿಸುತ್ತಾ ಬಂದಿರುವ ಈ ಸಂಸ್ಥೆ ಮುಂದಿನ ದಿನಗಳಲ್ಲಿ ಆಧುನಿಕ ನಾಟಕಗಳ ಪ್ರದರ್ಶನವನ್ನು ಏರ್ಪಡಿಸಿದರೆ ಹೆಚ್ಚೆಚ್ಚು ಕಲಾಭಿಮಾನಿಗಳನ್ನು ಪ್ರೋತ್ಸಾಹಿಸಿದಂತಾಗುತ್ತದೆ. ಆದ್ದರಿಂದ ಹಳೆಯ ನಾಟಕಗಳ ಜೊತೆಗೆ ಆಧುನಿಕ ನಾಟಕಗಳನ್ನು ಜೋಡಿಸಬೇಕು ಎಂದು ಸಲಹೆ ನೀಡಿದರು. ರಂಗಕರ್ಮಿ ಪ್ರೊ.ಸಿ.ವಿ.ಶ್ರೀಧರ್‌ಮೂರ್ತಿ, ನಾದರಂಗದ ಕಾರ್ಯದರ್ಶಿ ಡಿ.ನಾಗೇಂದ್ರಕುಮಾರ್, ಕೃಷ್ಣಮೂರ್ತಿ, ನಾಗರತ್ನ ಮತ್ತಿತರರಿದ್ದರು.

ಭವಿಷ್ಯದ ನಮ್ಮ ಆಸ್ತಿಯಾದ ಮಕ್ಕಳ ಆರೋಗ್ಯ ಕಾಪಾಡಿಕೊಳ್ಳಿ

ಶಾಸಕ ಜಿ.ಟಿ.ದೇವೇಗೌಡರ ಸಲಹೆ



ಮೈಸೂರು, ಡಿ.19(ಎಂಕೆ)– ಭವಿಷ್ಯದಲ್ಲಿ ನಮಗೆ ಆಸ್ತಿಯಾಗುವ ಮಕ್ಕಳ ಆರೋಗ್ಯ ಕಾಪಾಡುವಲ್ಲಿ ಪೋಷಕರು, ಶಿಕ್ಷಕರು ಪ್ರಮುಖ ಪಾತ್ರವಹಿಸಬೇಕು. ಮಲ್ಲಿಗೆ ಮೊಗ್ಗು ಅರಳಿ ಸುವಾಸನೆ ಬೀರುವಂತೆ ಮಕ್ಕಳಲ್ಲಿನ ಪ್ರತಿಭೆ ಹೊರತಂದರೆ ಅವರು ದೇಶಕ್ಕೆ ಕೊಡುಗೆ ನೀಡುವ ಮಹಾನ್ ವ್ಯಕ್ತಿಗಳಾಗುತ್ತಾರೆ ಎಂದು ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯಿಸಿದರು.

ಮೈಸೂರಿನ ಲಿಂಗಾಂಬುಧಿ ಪಾಳ್ಯದಲ್ಲಿರುವ ಅರಿವು ವಿದ್ಯಾಸಂಸ್ಥೆ ಆವರಣದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬಾಲ ಪ್ರತಿಭೆಗಳನ್ನು ಪ್ರೋತ್ಸಾಹಿಸುವ 'ಚಿಗುರು' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಮಕ್ಕಳ ಆರೋಗ್ಯ ಬಹಳ ಮುಖ್ಯ. ಈಗಾಗಲೇ ಕೊರೊನಾ ಸಂಕಷ್ಟವನ್ನು ಅನುಭವಿಸಿದ್ದೇವೆ. ಕಣ್ಣ ಮುಂದೆ ಆರೋಗ್ಯವಾಗಿ ಓಡಾಡಿಕೊಂಡಿದ್ದವರನ್ನು ಕಳೆದುಕೊಂಡಿದ್ದೇವೆ. ನಂತರ ಎದುರಾದ ಭಾರೀ ಮಳೆಯಿಂದಾಗಿ ಸಾಕಷ್ಟು ಕಷ್ಟಗಳು ಬಂದಿವೆ. ಚಾಮುಂಡೇಶ್ವರಿ ಕ್ಷೇತ್ರದ ಸುತ್ತಲೂ ಇರುವ ಸೇತುವೆಗಳು, ಕೆರೆಗಳು, ಮನೆಗಳು ಕುಸಿದು ಅಧ್ವಾನವಾಗಿರುವುದನ್ನು ಕಂಡಿದ್ದೇವೆ. ಆದ್ದರಿಂದ ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ನೀಡುವಂತೆ ಸಲಹೆ ನೀಡಿದರು.

ಮುಂದೆ ಮಕ್ಕಳೇ ನಮಗೆ ಆಸ್ತಿಯಾಗುತ್ತಾರೆ. ಹಲವು ಮಂದಿ ರೈತರು ತಮ್ಮ ಮಕ್ಕಳ ಮದುವೆಗಾಗಿ ತಮಗಿದ್ದ ಅಲ್ಪ–ಸ್ವಲ್ಪ ಭೂಮಿಯನ್ನು ಮಾರಿಕೊಂಡಿದ್ದಾರೆ. ಆಸ್ತಿ ಎಂಬುದು ಬಹುತೇಕರಲ್ಲಿ ಉಳಿದಿಲ್ಲ. ಆದ್ದರಿಂದ ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಬೇಕಾಗಿದೆ. ಶಿಕ್ಷಣದ ಜೊತೆ ಜೊತೆಗೆ ನಮ್ಮ ಕಲೆ–ಸಾಹಿತ್ಯ, ಸಂಸ್ಕೃತಿಯ ಪಾಠವನ್ನು ಕಲಿಸಬೇಕಾಗಿದೆ. ಮುಂದೆ ಮಕ್ಕಳು ದೊಡ್ಡ ದೊಡ್ಡ ಅಧಿಕಾರಿಗಳಾಗಬೇಕು. ಅವರಿಂದಲೇ ನಾವು ಸಾಮಾಜಿಕ ಸಮಾನತೆಯ ನ್ಯಾಯ ಕಾಣಬೇಕು. ಈ ನಿಟ್ಟಿನಲ್ಲಿ ಅರಳುತ್ತಿರುವ ಮಕ್ಕಳ ಪ್ರತಿಭೆಯನ್ನು ಗುರ್ತಿಸಿ, ಪ್ರೋತ್ಸಾಹಿಸುವುದು ಪೋಷಕರ ಮತ್ತು ಶಿಕ್ಷಕರ ಮುಖ್ಯ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಇದೇ ವೇಳೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಣೆ ಮಾಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಮುಡಾ ಇಂಜಿನಿಯರ್ ಶ್ರೀನಿವಾಸ್, ಶ್ರೀರಾಂಪುರ ಪಪಂ ಸಿಇಓ ಶ್ರೀಧರ್, ಅರಿವು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಮ್ಯಾನೇಜಿಂಗ್ ಟ್ರಸ್ಟಿ ಎಂ.ಸಿ.ಮನೋಹರ್, ಕಾರ್ಯದರ್ಶಿ ಸಿ.ವಿ.ಜನಾರ್ಧನ್, ಅರಿವು ವಿದ್ಯಾ ಸಂಸ್ಥೆ ಮುಖ್ಯ ಶಿಕ್ಷಕಿ ಡಾ.ಎಂ.ಜಿ.ಚೇತನ ಮತ್ತಿತರರು ಉಪಸ್ಥಿತರಿದ್ದರು.

ಹಸಿರು ನಮ್ಮ ಉಸಿರು

ಆಲನಹಳ್ಳಿ ಕುಡಿಯುವ ನೀರಿನ ಬಿಲ್ ಸಮಸ್ಯೆ ಜ.15ರೊಳಗೆ ಪರಿಹಾರ

ಶಾಸಕ ಜಿ.ಟಿ.ದೇವೇಗೌಡರಿಂದ ಭರವಸೆ

ಮೈಸೂರು, ಡಿ.19(ಎಂಕೆ)– ಆಲನಹಳ್ಳಿ ಗ್ರಾಮಸ್ಥರ ಕುಡಿಯುವ ನೀರಿನ ಬಿಲ್ ಸಮಸ್ಯೆಯನ್ನು 2023ರ ಜ.15ರೊಳಗೆ ಪರಿಹರಿಸಲಾಗುವುದು ಎಂದು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಭರವಸೆ ನೀಡಿದರು.

ಮೈಸೂರಿನ ಆಲನಹಳ್ಳಿ ಮುಖ್ಯರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ ಸೋಮವಾರ ಗುದ್ದಲಿ ಪೂಜೆ ನೆರವೇರಿಸಿದ ಬಳಿಕ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಗ್ರಾಮಸ್ಥರೊಂದಿಗೆ ಸಭೆ ನಡೆಸಿದ ಶಾಸಕರು, ಆಲನಹಳ್ಳಿ ಗ್ರಾಮದಲ್ಲಿ ಹಲವು ಮನೆಗಳಿಗೆ ಕನಿಷ್ಠ 30 ಸಾವಿರದಿಂದ 1 ಲಕ್ಷ ರೂ.ವರೆಗೆ ಕುಡಿಯುವ ನೀರಿನ ಬಿಲ್ ನೀಡಿರುವ ಕುರಿತು ಪಾಲಿಕೆ ಆಯುಕ್ತರೊಂದಿಗೆ ಚರ್ಚಿಸಿ ಸಮಸ್ಯೆ ಪರಿಹರಿಸಲಾಗುವುದು. ಸಮಸ್ಯೆ ಬಗೆಹರಿದ ನಂತರ ಗ್ರಾಮಸ್ಥರು ಸೂಕ್ತ ಸಮಯದಲ್ಲಿ ಬಿಲ್ ಪಾವತಿಸುವ ಮೂಲಕ ಕುಡಿಯುವ ನೀರಿನ ಸೌಲಭ್ಯವನ್ನು ಸದುಪಯೋಗ ಪಡೆದುಕೊಳ್ಳಬೇಕು ಸಲಹೆ ನೀಡಿದರು.

ಕೊರೊನಾದಿಂದಾಗಿ ಸುಮಾರು ಎರಡೂವರೆ ವರ್ಷ ನಾವು ನಿಮ್ಮನ್ನು, ನೀವು ನನ್ನನ್ನು ಭೇಟಿ ಮಾಡುವಂತೆ ಇರಲಿಲ್ಲ. ಸರ್ಕಾರದಿಂದಲೂ ಹಣ ಬಿಡುಗಡೆಯಾಗುತ್ತಿರಲಿಲ್ಲ. ಆಲನಹಳ್ಳಿ ಅಭಿವೃದ್ಧಿ ನನ್ನ ತಲೆಯಲ್ಲಿತ್ತು ಮೂರು ವರ್ಷದ ಪ್ರಯತ್ನದಿಂದಾಗಿ ಆಲನಹಳ್ಳಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ 2 ಕೋಟಿ ರೂ. ಅನುದಾನ ಬಿಡುಗಡೆಯಾಗಿದೆ. ಬಿಡುಗಡೆಯಾಗಿರುವ ಅನುದಾನವನ್ನು ಸದುಪಯೋಗ ಪಡಿಸಿಕೊಳ್ಳಿ, ಚುನಾವಣೆಯ ನಂತರ ಬಾಕಿ ಉಳಿದ ಅಭಿವೃದ್ಧಿ ಕಾರ್ಯಗಳಿಗೂ ಸ್ಪಂದಿಸಲಾಗುವುದು ಎಂದು ತಿಳಿಸಿದರು.

ಮೈಸೂರು ನಗರದ ಹೊರಗೆ ನಾಲ್ಕು ದಿಕ್ಕುಗಳಿಗೂ ಇರುವ ಚಾಮುಂಡೇಶ್ವರಿ ಕ್ಷೇತ್ರವನ್ನು ಅಭಿವೃದ್ಧಿ ಮಾಡಲು ನಾಲ್ಕು ಮಂದಿ ಎಂಎಲ್‌ಎಗಳು ಬೇಕಾಗುತ್ತದೆ. ರಾಮದಾಸ್, ನಾಗೇಂದ್ರ ಮತ್ತು ತನ್ವೀರ್‌ಸೇಠ್ ಅವರ ಕ್ಷೇತ್ರಗಳಂತೆ ನನ್ನ ಕ್ಷೇತ್ರ ನಗರದೊಳಗೆ ಇಲ್ಲ. ರಿಯಲ್ ಎಸ್ಟೇಟ್‌ಗಳಿಂದಾಗಿ ಸೈಟ್ ಸಿಕ್ಕಿತೆಂದು ಮನೆ ಕಟ್ಟಿಕೊಳ್ಳುತ್ತೀರಿ. ನಂತರ ನೀರು, ರಸ್ತೆ ಬೇಕು ಎನ್ನುತ್ತೀರಿ. ನನ್ನಿಂದಾದಷ್ಟು ಕ್ಷೇತ್ರ ಅಭಿವೃದ್ಧಿ ಕೆಲಸ ಮಾಡುತ್ತಿದ್ದೇನೆ. ಬೆಳಗಾವಿ ಅಧಿವೇಶನ ಇದ್ದರೂ ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೇನೆ ಎಂದು ಮನವರಿಕೆ ಮಾಡಿದರು.

ಇದೇ ವೇಳೆ ಪಾಲಿಕೆಯಿಂದ ಸರಿಯಾಗಿ ಕುಡಿಯುವ ನೀರು ಪೂರೈಸದಿದ್ದರೂ 1 ಲಕ್ಷ ರೂ. ವರೆಗೆ ಬಿಲ್ ನೀಡಿದ್ದಾರೆ. ಇದಕ್ಕೆ ಶಾಶ್ವತ ಪರಿಹಾರ ಮಾಡಿಕೊಡಬೇಕು ಎಂಬ ಗ್ರಾಮಸ್ಥರ ಮನವಿಗೆ ಸ್ಪಂದಿಸಿದ ಜಿಟಿಡಿ, ಸ್ಥಳದಲ್ಲೇ ಪಾಲಿಕೆ ಆಯುಕ್ತರಿಗೆ ಕರೆ ಮಾಡಿ ವಿಷಯ ತಿಳಿಸಿದರಲ್ಲದೆ ಸಮಸ್ಯೆ ಪರಿಹರಿಸುವುದಾಗಿ ಭರವಸೆ ನೀಡಿದರು.

ಆಲನಹಳ್ಳಿ ಗ್ರಾಮದ ಛೇರ್ಮನ್ ಮಾದಪ್ಪ ಗ್ರಾಪಂ ಮಾಜಿ ಸದಸ್ಯೆ ಹೇಮಾ, ಗ್ರಾಮಸ್ಥರಾದ ಶಿವನಂಜಣ್ಣ, ಮಯೂರ, ಚಂದ್ರು ಬಸವರಾಜು, ಮಹೇಶ್, ಮಂಜುಳ, ಭಾಗ್ಯ, ವಿನೋದ, ಶಿವಮಣಿ ಮತ್ತಿತರರಿದ್ದರು.



ಮೈಸೂರಿನ ಆಲನಹಳ್ಳಿಯಲ್ಲಿ 2 ಕೋಟಿ ರೂ.ವೆಚ್ಚದ ಮುಖ್ಯರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡ ಸೋಮವಾರ ಗುದ್ದಲಿ ಪೂಜೆ ನೆರವೇರಿಸಿದರು. ಈ ವೇಳೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಇಂದು ವಿಧಾನಸಭೆಯಲ್ಲಿ SC, ST ಮೀಸಲಾತಿ ಹೆಚ್ಚಳ ವಿಧೇಯಕ ಮಂಡನೆ

ಬೆಳಗಾವಿ: ಬೆಳಗಾವಿಯ ಸುವರ್ಣಸೌಧದಲ್ಲಿ ಚಳಿಗಾಲದ ಅಧಿವೇಶನ ಸೋಮವಾರ ಆರಂಭವಾಗಿದ್ದು, ಮೊದಲ ದಿನ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸಲಾಯಿತು. ನಾಳೆ(ಡಿಸೆಂಬರ್ 20) 2ನೇ ದಿನದ ಅಧಿವೇಶನದಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯದ ಮೀಸಲಾತಿ ಹೆಚ್ಚಳ ವಿಧೇಯಕ ಹಾಗೂ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವಿಧೇಯಕ ಸೇರಿ ಒಟ್ಟು 4 ಮಸೂದೆ ಮಂಡನೆಯಾಗಲಿವೆ.

ಚುನಾವಣೆ ಹೊಸ್ತಿಲಲ್ಲಿ ಆಡಳಿತಾರೂಢ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವೋಟ್ ಬ್ಯಾಂಕ್‌ಗೆ ಕೈ ಹಾಕಿದೆ. ಈ ಹಿನ್ನೆಲೆಯಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯದ ಮೀಸಲಾತಿ ಹೆಚ್ಚಳ ವಿಧೇಯಕ ಮಂಡನೆಗೆ ಮುಂದಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮೀಸಲಾತಿ ಪ್ರಮಾಣವನ್ನು ಶೇ 6ರಷ್ಟು ಹೆಚ್ಚಿಸುವ ನಿರ್ಧಾರವನ್ನು ಸುಗ್ರೀವಾಜ್ಞೆ ಮೂಲಕ ಜಾರಿಗೆ ತರಲು ಈ ಹಿಂದಿನ ಸಚಿವ ಸಂಪುಟದಲ್ಲಿ ಒಪ್ಪಿಗೆ ನೀಡಲಾಗಿತ್ತು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ನೇತೃತ್ವದ ಆಯೋಗ ಮತ್ತು ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ನೇತೃತ್ವದ ಸಮಿತಿಯು ಸಲ್ಲಿಸಿರುವ ವರದಿಯ ಶಿಫಾರಸು ಆಧರಿಸಿ ಪರಿಶಿಷ್ಟ ಜಾತಿಯ ಮೀಸಲಾತಿ ಶೇ.15 ರಿಂದ 17ಕ್ಕೆ ಮತ್ತು ಪರಿಶಿಷ್ಟ ಪಂಡಗಳ ಮೀಸಲಾತಿ ಶೇ.3ರಿಂದ ಶೇ.7ಕ್ಕೆ ಹೆಚ್ಚಿಸಲು ಈ ಹಿಂದಿನ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಇದಕ್ಕೂ ಮುನ್ನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸರ್ವಪಕ್ಷಗಳ ಸಭೆ ಕರೆದು ಸರ್ವಾನುಮತದಿಂದ ನಿರ್ಧಾರವನ್ನು ಪ್ರಕಟಿಸಿದ್ದರು.

ನಾಗಮೋಹನ್ ದಾಸ್ ಹೇಳಿದಂತೆ ಹೆಜ್ಜೆ ಇಟ್ಟ ಸರ್ಕಾರ: ಕೇವಲ ಸರ್ಕಾರಿ ಆದೇಶದ ಮೂಲಕ ಮೀಸಲಾತಿ ಹೆಚ್ಚಿಸಿದರೆ ನ್ಯಾಯಾಲಯದಲ್ಲಿ ಹಿನ್ನಡೆಯಾಗಬಹುದು. ಇದಕ್ಕಾಗಿ ಮಸೂದೆಯೊಂದನ್ನು ರೂಪಿಸಿ, ಸಂಪುಟ ಸಭೆಯಲ್ಲಿ ಒಪ್ಪಿಗೆ ಪಡೆಯಬೇಕು. ಬಳಿಕ ಸುಗ್ರೀವಾಜ್ಞೆ ಮೂಲಕ ಅದನ್ನು ಜಾರಿಗೊಳಿಸಬೇಕು. ಆರು ತಿಂಗಳೊಳಗೆ ತಿದ್ದುಪಡಿ ಮಸೂದೆಗೆ ವಿಧಾನಮಂಡಲದ ಒಪ್ಪಿಗೆ ಪಡೆಯಬೇಕು. ನಂತರ ಸಂವಿಧಾನದ ಒಂಭತ್ತನೇ ಪರಿಚ್ಛೇದಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು ಎಂಬ ಸಲಹೆಯನ್ನು ನಾಗಮೋಹನ್ ದಾಸ್ ಅವರು ವರದಿ ನೀಡಿದ್ದರು. ಅದರ ಅನ್ವಯ ನಾಳಿನ ಅಧಿವೇಶನದಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯದ ಮೀಸಲಾತಿ ಹೆಚ್ಚಳ ವಿಧೇಯಕ ಮಂಡನೆ ಮಾಡಲಾಗುತ್ತಿದೆ.

ಶ್ರವಣೂರಲ್ಲಿ ರಾಯಣ್ಣ ಚೌಕಿ ಪುನರ್ ಸ್ಥಾಪನೆಗೆ 15 ದಿನ ಗಡುವು

ಮೈಸೂರು/ಹಾಸನ: ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಶ್ರವಣೂರು ಗ್ರಾಮದಲ್ಲಿ ತೆರವುಗೊಳಿರುವ ಸಂಗೊಳ್ಳಿ ರಾಯಣ್ಣ ಚೌಕಿಯನ್ನು ಪುನರ್ ಸ್ಥಾಪಿಸಿ ಸರ್ಕಾರದಿಂದಲೇ ಮರು ನಾಮಕರಣ ಮಾಡಬೇಕು. ಇನ್ನು 15 ದಿನಗಳಲ್ಲಿ ಕ್ರಮ ಕೈಗೊಳ್ಳದೇ ಇದ್ದರೆ, ಉಗ್ರ ಹೋರಾಟ ಎದುರಿಸಬೇಕಾಗುತ್ತದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘ ಎಚ್ಚರಿಕೆ ನೀಡಿದೆ.



ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಶ್ರವಣೂರು ಗ್ರಾಮದಲ್ಲಿ ಕೆಲ ದಿನಗಳ ಹಿಂದೆಯಷ್ಟೇ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಚೌಕಿ ನಿರ್ಮಾಣ ಮಾಡಲಾಗಿತ್ತು ಅದನ್ನು ಪೊಲೀಸರು ತೆರವುಗೊಳಿಸಿದ್ದಾರೆ. ಸರ್ಕಾರ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಕ್ರಮ ಕೈಗೊಳ್ಳಬೇಕು. ಜೊತೆಗೆ ಮುಂದಿನ ದಿನಗಳಲ್ಲಿ ಒಂದು ಪ್ರತಿಮೆಯನ್ನೂ ಸ್ಥಾಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಹಿಂದೆ ನಾನು ಶ್ರವಣೂರಿಗೆ ಭೇಟಿ ಕೊಟ್ಟಾಗ ವೃತ್ತ ತೆರವುಗೊಳಿಸದಂತೆ ಎಚ್ಚರಿಸಿದ್ದೆ. ಆದರೂ ತೆರವು ಮಾಡಿರುವುದು ನೋವು ತಂದಿದೆ. ಇಂತಹದ್ದನ್ನು ಕರ್ನಾಟಕ ಪ್ರದೇಶ ಕುರುಬರ ಸಂಘ ಸಹಿಸಲ್ಲ. ಹಾಸನ ಜಿಲ್ಲೆಯ ಕುರುಬ ಸಮುದಾಯದ ಮುಖಂಡರು ಕೂಡಲೇ ಹೆಸರು ನಾಮಕರಣ ಮಾಡುವ ಜೊತೆಗೆ ಪ್ರತಿಮೆ ಸ್ಥಾಪಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಎಚ್ಚರಿಸಬೇಕು. ಈ ವಿಚಾರದಲ್ಲಿ ಯಾವುದೇ ರಾಜಕೀಯ ಹಸ್ತಕ್ಷೇಪ ಸಲ್ಲದು. ಏಕೆಂದರೆ ರಾಯಣ್ಣ ದೇಶಕ್ಕೆ ಸಲ್ಲುವ ವ್ಯಕ್ತಿ, ಅವರಿಗೆ ಕಳಂಕ ಆಗಬಾರದು. ಹಾಗಾಗಿ ಜಾತ್ಯತೀತ ಶಕ್ತಿಗಳು ಒಂದಾಗಿ, ಎಲ್ಲ ಸಮುದಾಯದ ಮುಖಂಡರು ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಸಕ್ರಿಯರಾಗಬೇಕು ಎಂದು ಕರೆ ನೀಡಿದ್ದಾರೆ.

ರಾಯಣ್ಣ ಚೌಕಿ ತೆರವಿಗೆ ಖಂಡನೆ

ಮೈಸೂರು, ಡಿ.19– ಹಾಸನಜಿಲ್ಲೆ, ಹೊಳೆನರಸೀಪುರ ತಾಲೂಕು ಶ್ರವಣೂರು ಗ್ರಾಮದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಚೌಕಿಯನ್ನು ತೆರವುಗೊಳಿಸಿರುವುದನ್ನು ಖಂಡಿಸಿ, ಅಹಿಂದ ಕರ್ನಾಟಕದ ವತಿಯಿಂದ ಪ್ರತಿಭಟನೆ ನಡೆಸಿ, ಸಂಗೊಳ್ಳಿ ರಾಯಣ್ಣ ಚೌಕಿಯನ್ನು ಅದೇ ಸ್ಥಳದಲ್ಲಿ ಪುನರ್ ಸ್ಥಾಪಿಸುವಂತೆ ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಅಹಿಂದ ಕರ್ನಾಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಮಹದೇವಸ್ವಾಮಿ, ಮೈಸೂರು ನಗರ ಅಧ್ಯಕ್ಷ ವಿನಯ್ ರಾಜಣ್ಣ, ಕಾರ್ಯದರ್ಶಿ ಮಂಜುನಾಥ್, ಗೃಹನಿರ್ಮಾಣ ಸಹಕಾರ ಸಂಘದ ನಿರ್ದೇಶಕ ಧ್ರುವಕುಮಾರ್ ಹಾಗೂ ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಹೆಚ್.ವಿ.ಗಣೇಶ್ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷರಲ್ಲ: ಸ್ಪಷ್ಟನೆ

ಮೈಸೂರು, ಡಿ.19– ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಜಿಲ್ಲಾಧ್ಯಕ್ಷರೆಂದು ಹೆಚ್.ವಿ.ಗಣೇಶ್ ಹೇಳಿಕೊಂಡಿರುವುದು ಸತ್ಯಕ್ಕೆ ದೂರ ಎಂದು ಸಂಘದ ಪ್ರಕಟಣೆ ತಿಳಿಸಿದೆ. ಗಣೇಶ್ ಹಾಲಿ ಜಿಲ್ಲಾಧ್ಯಕ್ಷರು ಎಂಬುದಕ್ಕೆ ಯಾವುದೇ ಆಧಾರವಿಲ್ಲ ಎಂದು ತಿಳಿಸಿರುವ ಪ್ರಕಟಣೆಯು, ಕೇಂದ್ರ ಸಂಘದ ಹಿಂದಿನ ಅಧ್ಯಕ್ಷರಾದ ಸಂಪತ್ ಎಂಬುವರು ಹೆಚ್.ವಿ.ಗಣೇಶ್ ಅವರನ್ನು ಜಿಲ್ಲಾಧ್ಯಕ್ಷ ಸ್ಥಾನದಿಂದ ವಜಾಗೊಳಿಸಿದ್ದಾರೆ ಎಂದು ಸ್ಪಷ್ಟಪಡಿಸಲಾಗಿದೆ.

ನೇಮಕ



ಎಂ.ಗಣೇಶ್



ರವಿ

ಮೈಸೂರು, ಡಿ.19– ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಉಪಾಧ್ಯಕ್ಷರನ್ನಾಗಿ ಹೆಬ್ಬಾಳ್ ಕಾಲೋನಿ ನಿವಾಸಿ ಎಂ.ಗಣೇಶ್ ಹಾಗೂ ಕೈಲಾಸಪುರಂನ ರವಿ ಅವರನ್ನು ನೇಮಕ ಮಾಡಿ ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ ಅವರು ಆದೇಶಿಸಿದ್ದಾರೆ ಎಂದು ಜಿಲ್ಲಾ ಸಮಿತಿ ಅಧ್ಯಕ್ಷ ಕೆ.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲಕಾರ್ಮಿಕರ ಗುರುತಿಸಿ ಪುನರ್ವಸತಿ ಕಲ್ಪಿಸಿ

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ

ಮೈಸೂರು,ಡಿ.19– ಕಿರಾಣಿ ಅಂಗಡಿಗಳು, ಕಾರ್ಖಾನೆಗಳು ಗ್ಯಾರೇಜ್‌ಗಳು ಮುಂತಾದ ಕಡೆ ಬಾಲಕಾರ್ಮಿಕರು ದುಡಿಯುತ್ತಿರುತ್ತಾರೆ. ಅಂತಹವರನ್ನು ಗುರುತಿಸಿ, ಮಾಲೀಕರ ಮೇಲೆ ಪ್ರಕರಣ ದಾಖಲಿಸಿ ಬಾಲಕಾರ್ಮಿಕತೆಯಿಂದ ಮುಕ್ತಗೊಳಿಸಿ ಶಾಲೆಗಳಿಗೆ ಸೇರಿಸುವುದರೊಂದಿಗೆ ಪುನರ್ವಸತಿ ಕಲ್ಪಿಸಿ, ಸಮಾಜದ ಮುಖ್ಯವಾಹಿನಿಗೆ ತರುವಂತೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚಿಸಿದರು.



ಇಂದು ತಮ್ಮ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾಮಟ್ಟದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು 14 ವರ್ಷದೊಳಗಿನ ಮಕ್ಕಳನ್ನು ಕೆಲಸದಲ್ಲಿ ನೇಮಿಸಿಕೊಳ್ಳುವುದು ಸಂಪೂರ್ಣ ನಿಷೇಧಿಸಿದ್ದು, 15 ರಿಂದ 18 ವರ್ಷದೊಳಗಿನ ಕಿಶೋರ ಕಾರ್ಮಿಕರನ್ನು ಅಪಾಯಕಾರಿ ಮತ್ತು ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ ದುಡಿಯುವುದು ನಿಷೇಧಿಸಲಾಗಿದೆ. ಅಧಿಕಾರಿಗಳು ಬಾಲಕಾರ್ಮಿಕರು ಕೆಲಸ ನಿರ್ವಹಿಸುವ ಸ್ಥಳಗಳಿಗೆ ಹಠಾತ್ ದಾಳಿ ಮಾಡಿ ಕೆಲಸಕ್ಕೆ ನೇಮಿಸಿಕೊಂಡಿರುವವರ ವಿರುದ್ಧ ಕಾನೂನಿನ ಕ್ರಮ ಜರುಗಿಸಿ. ಬಾಲಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಬೇಕು. ಉದ್ದಿಮೆಗಳಲ್ಲಿ ಕೆಲಸ ಮಾಡುತ್ತಿರುವ ಮಕ್ಕಳನ್ನು ಬಿಡುಗಡೆಗೊಳಿಸಿ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಿ ಎಂದು ಸೂಚಿಸಿದರು.

ಗ್ರಾಮ ಪಂಚಾಯಿತಿ, ಪುರಸಭೆ, ನಗರಸಭೆ, ಮಹಾನಗರ ಪಾಲಿಕೆ ವ್ಯಾಪ್ತಿಯ ಅಂಗಡಿಗಳ ಮಾಲೀಕರು, ಉದ್ದಿಮೆದಾರರು ತಾವು ಯಾವುದೇ ಬಾಲಕಾರ್ಮಿಕರನ್ನು ನೇಮಿಸಿಕೊಂಡಿಲ್ಲ ಎಂದು ಮುಚ್ಚಳಿಕೆ ನೀಡಬೇಕು. ನಂತರ ಅವರ ಪರವಾನಗಿಯನ್ನು ನವೀಕರಣ ಮಾಡಬೇಕು. ಗ್ರಾಮ ಪಂಚಾಯಿತಿ, ಪುರಸಭೆ, ನಗರಸಭೆ ವ್ಯಾಪ್ತಿಯಲ್ಲಿ ಕಾರ್ಯಪಡೆಗಳನ್ನು ರಚಿಸಿಕೊಂಡು ದಾಳಿ ನಡೆಸಿ ಬಾಲಕಾರ್ಮಿಕ ಪದ್ಧತಿಯಿಂದ ಮಕ್ಕಳನ್ನು ಮುಕ್ತಗೊಳಿಸಬೇಕು. ಈ ಸಂದರ್ಭದಲ್ಲಿ ಪೊಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ಒದಗಿಸಬೇಕು ಎಂದು ಸೂಚಿಸಿದರು.

ಪ್ರತಿ ಮೂರು ತಿಂಗಳಿಗೊಮ್ಮೆ ಕಡ್ಡಾಯವಾಗಿ ಟಾಸ್ಕ್ ಫೋರ್ಸ್ ಸಮಿತಿ ಸಭೆಯನ್ನು ನಡೆಸಬೇಕು. ಸೆಕ್ಷನ್ 17 ರಡಿ ನೇಮಕಗೊಂಡಿರುವ ಇತರೆ ಇಲಾಖೆಯ ಅಧಿಕಾರಿಗಳು ತಮ್ಮ ಹಂತದಲ್ಲಿ ಬಾಲಕಾರ್ಮಿಕ ಪದ್ಧತಿ ನಿಷೇಧ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಬೇಕು. ಎಲ್ಲಾ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಿದರೆ ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸಾಧ್ಯವಾಗುತ್ತದೆ ಎಂದರು. ಸಭೆಯಲ್ಲಿ ಉಪವಿಭಾಗಾಧಿಕಾರಿಗಳಾದ ಕಮಲಾಬಾಯಿ, ಸಹಾಯಕ ಕಾರ್ಮಿಕ ಆಯುಕ್ತರಾದ ನಜಿಂಯಾ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ

ಕನ್ನಡ ಜ್ಯೋತಿಗೆ ಮೈಸೂರಲ್ಲಿ ಅದ್ಧೂರಿ ಸ್ವಾಗತ

● ವಿವಿಧ ಕಲಾತಂಡಗಳ ಮೆರಗು ● ಪ್ರಮುಖ ಮಾರ್ಗದಲ್ಲಿ ಸಾಗಿದ ರಥ ● ಇಂದು ಹಾಸನದತ್ತ ಸಾಗಲಿದೆ





ಮೈಸೂರು, ಡಿ.19(ಎಸ್‌ಬಿಡಿ)– ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ರಾಜ್ಯ ಸಂಚಾರದಲ್ಲಿರುವ 'ಕನ್ನಡ ಜ್ಯೋತಿ ರಥ' ಸೋಮವಾರ ಮೈಸೂರು ತಲುಪಿತು.

ರಾಮನಗರದಿಂದ ಮಂಡ್ಯ ಮೂಲಕ ಮೈಸೂರಿಗೆ ಆಗಮಿಸಿದ 'ಕನ್ನಡ ಜ್ಯೋತಿ ರಥ'ವನ್ನು ನಗರದ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ಅದ್ಧೂರಿಯಾಗಿ ಸ್ವಾಗತಿಸಲಾಯಿತು. ಮೇಯರ್ ಶಿವಕುಮಾರ್, ಉಪಮೇಯರ್ ರೂಪಾ, ಶಾಸಕ ಎಲ್.ನಾಗೇಂದ್ರ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ತಹಶೀಲ್ದಾರ್ ಗಿರೀಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್, ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಕನ್ನಡ ಚಳವಳಿಗಾರ ಮೂಗೂರು ನಂಜುಂಡಸ್ವಾಮಿ ಸೇರಿದಂತೆ ಅನೇಕ ಗಣ್ಯರು ಕನ್ನಡ ಜ್ಯೋತಿ ಹೊತ್ತು ಬಂದ ರಥಕ್ಕೆ ಪೂಜೆ ಸಲ್ಲಿಸಿದರು.

ಅತ್ಯಾಕರ್ಷಕ ಮಂಟಪದಲ್ಲಿ ಪ್ರತಿಷ್ಠಾಪಿಸಿರುವ ಶ್ರೀ ಭುವನೇಶ್ವರಿ ತಾಯಿ ಮೂರ್ತಿಗೆ ಇದೇ ವೇಳೆ ಗಣ್ಯರು ಮಾಲಾರ್ಪಣೆ ಮಾಡಿ ಪುಷ್ಪಾರ್ಚನೆ ಸಲ್ಲಿಸಿದರು. ವೀರಗಾಸೆ, ಕಂಸಾಳೆ, ಡೊಳ್ಳು ಕುಣಿತ ಕಲಾತಂಡಗಳ ಮೆರಗು ನೀಡಿದವು. ಕನ್ನಡ ರಥ ಸ್ವಾಗತಿಸಲು ಒಂದು ಗಂಟೆ ಮುನ್ನವೇ ನೆರೆದಿದ್ದ ವಿವಿಧ ಶಾಲೆಗಳ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಡೊಳ್ಳು–ಕಂಸಾಳೆ ಸದ್ದಿಗೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ಗಣ್ಯರು, ಮಕ್ಕಳು ಹಾಗೂ ಸಾರ್ವಜನಿಕರು ಕನ್ನಡ ಜ್ಯೋತಿ ರಥದ ಬಳಿ ನಿಂತು ಫೋಟೋ ತೆಗೆಸಿಕೊಂಡರಲ್ಲದೆ ಕನ್ನಡಾಂಬೆಗೆ ಜೈಕಾರ ಹಾಕಿದರು.

'ಕನ್ನಡ ಜ್ಯೋತಿ ರಥ' ಸಂಚಾರದ ಜವಾಬ್ದಾರಿ ಹೊತ್ತಿರುವ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯ ನಬಿಸಾಬ್ ಕುಷ್ಟಗಿ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ 2023ರ ಜನವರಿ 6ರಿಂದ 8ರವರೆಗೆ ಜರುಗಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಮನವಿ ಮಾಡಿದರು. ನಂತರ 'ಕನ್ನಡ ಜ್ಯೋತಿ ರಥ' ಕೆ.ಆರ್.ವೃತ್ತ, ದೇವರಾಜ ಅರಸು ರಸ್ತೆ, ಜಿಲ್ಲಾಧಿಕಾರಿಗಳ ಕಚೇರಿ ಮಾರ್ಗವಾಗಿ ಜಲದರ್ಶಿನಿ ಅತಿಥಿಗೃಹದವರೆಗೆ ಸಂಚರಿಸಿತು. ಮಂಗಳವಾರ ಬೆಳಗ್ಗೆ ಹಾಸನ ಜಿಲ್ಲೆಗೆ ರಥ ಸಾಗಲಿದೆ.

ಎಲ್ಲೆಡೆ ಭವ್ಯ ಸ್ವಾಗತ: ಸಾಹಿತ್ಯ ಸಮ್ಮೇಳನ ಹಿನ್ನೆಲೆಯಲ್ಲಿ ಮೊದಲ ಬಾರಿ 'ಕನ್ನಡ ಜ್ಯೋತಿ ರಥ' ಸಂಚಾರ ಆಯೋಜಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆ ಸಿದ್ದಾಪುರ ಭುವನಗಿರಿಯ ಭುವನೇಶ್ವರಿ ದೇವಾಲಯದ ಬಳಿಯಿಂದ ಡಿ.1ರಿಂದ ರಥ ಸಂಚಾರ ಆರಂಭವಾಗಿದ್ದು, ಶಿರಸಿ, ಧಾರವಾಡ, ಬೆಳಗಾವಿ, ಬಾಗಲಕೋಟೆ, ವಿಜಯಪುರ, ಕಲಬುರ್ಗಿ, ಯಾದಗಿರಿ, ಕೊಪ್ಪಳ, ಹೊಸಪೇಟೆ, ಬಳ್ಳಾರಿ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಯಲಹಂಕ, ಬೆಂಗಳೂರು, ರಾಮನಗರ, ಮಂಡ್ಯ ಮೂಲಕ 2,500ಕ್ಕೂ ಹೆಚ್ಚು ಕಿ.ಮೀ. ಕ್ರಮಿಸಿ ಮೈಸೂರು ತಲುಪಿದೆ. ಎಲ್ಲಾ ಜಿಲ್ಲೆಗಳಲ್ಲೂ ಅಭೂತಪೂರ್ವ ಸ್ವಾಗತ ಸಿಕ್ಕಿದೆ. ವಿವಿಧ ಜಿಲ್ಲೆಗಳ ಪ್ರಯಾಣ, ಆತಿಥ್ಯದಿಂದ ನಮಗೂ ಖುಷಿಯಾಗಿದೆ ಎಂದು ರಥದ ಚಾಲಕರಾದ ಆರೇರ್, ಎಂ.ಸಿ. ದೊಡ್ಡಮನಿ, ಮೆಕ್ಯಾನಿಕ್ ವೀರೇಶ್ ಹಾಗೂ 10 ಮಂದಿ ಸಹಾಯಕ ಕಲಾವಿದರು ಅಭಿಪ್ರಾಯಪಟ್ಟರು.

ಈ ಜ್ಯೋತಿಯಿಂದಲೇ ನುಡಿಜಾತ್ರೆಗೆ ಚಾಲನೆ

ಕೆಎಸ್‌ಆರ್‌ಟಿಸಿ ವತಿಯಿಂದ ನೀಡಿರುವ ಬಸ್ ಅನ್ನು ಕನ್ನಡ ಜ್ಯೋತಿ ರಥ ನಿರ್ಮಿಸಲಾಗಿದೆ. ಛಾಸಿ ಮೇಲೆ ಆಕರ್ಷಕ ವೇದಿಕೆ, ಅದರ ಮೇಲೆ ಎರಡು ಸುಂದರ ಮಂಟಪಗಳ ನಿರ್ಮಿಸಿ ತಾಯಿ ಭುವನೇಶ್ವರಿ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಹಿಂಭಾಗದ ಮಂಟಪದಲ್ಲಿರುವ ಮೂರ್ತಿಯೆದುರು ಬೆಳಗುವ ಜ್ಯೋತಿ ಇಡಲಾಗಿದ್ದು, ಅದು ಆರದಂತೆ ಎಚ್ಚರಿಕೆ ವಹಿಸಲಾಗಿದೆ. ಕಲಾವಿದರಾದ ಷಹಜಾನ್ ಮುದಕವಿ ಹಾಗೂ ಪಕಿರೇಶ್ ಗುಳಗೇರಿ ನೇತೃತ್ವದಲ್ಲಿ 20 ಸಹಾಯಕರು ಸತತ 40 ದಿನ ಶ್ರಮಿಸಿ ಈ ಭವ್ಯ ರಥವನ್ನು ವಿನ್ಯಾಸ ಮಾಡಿದ್ದಾರೆ. ರಥ ಚಾಲನೆಗೆ ಕೆಎಸ್‌ಆರ್‌ಟಿಸಿ ಹಾವೇರಿ ವಿಭಾಗದ ಇಬ್ಬರು ನುರಿತ ಚಾಲಕರು ಹಾಗೂ ಮುಂಜಾಗ್ರತಾ ಕ್ರಮವಾಗಿ ಓರ್ವ ಮೆಕ್ಯಾನಿಕ್ ನಿಯೋಜಿಸಲಾಗಿದೆ. ಏನಾದರೂ ರಥದಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಾದರೆ ಸರಿಪಡಿಸಲೆಂದು 10 ಮಂದಿ ಸಹಾಯಕರು ಜೊತೆಯಲ್ಲಿದ್ದಾರೆ. ಡಿ.1ರಂದು ಭುವನಗಿರಿಯಿಂದ ಆರಂಭಗೊಂಡು ರಾಜ್ಯದೆಲ್ಲೆಡೆ ಸಂಚರಿಸಿದ ಬಳಿಕ ಮುಂದಿನ ಜನವರಿ 5ಕ್ಕೆ ಹಾವೇರಿ ತಲುಪಲಿದೆ. ಹೀಗೆ ವಿವಿಧ ಜಿಲ್ಲೆಗಳಿಗೆ ದರ್ಶನ ನೀಡಿದ ಜ್ಯೋತಿಯಿಂದಲೇ ಜ.6ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು 'ನುಡಿಜಾತ್ರೆ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ. ಮುಖ್ಯಮಂತ್ರಿಗಳ ತವರಿನಲ್ಲಿ ಜರುಗುವ ಮೂರು ದಿನಗಳ ಸಾಹಿತ್ಯ ಸಮ್ಮೇಳನಕ್ಕೆ 'ಕನ್ನಡ ಜ್ಯೋತಿ ರಥ' ವಿಶೇಷ ಸ್ವಾಗತ ನೀಡುತ್ತಿದೆ.

ಚಾಮರಾಜ ಕ್ಷೇತ್ರದಲ್ಲಿ 1.50 ಕೋಟಿ ವೆಚ್ಚದ ನಾನಾ

ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಚಾಲನೆ




ಮೈಸೂರು,ಡಿ.19(ಪಿಎಂ)– ಚಾಮರಾಜ ಕ್ಷೇತ್ರದ ವಿವಿಧ ವಾರ್ಡ್‌ಗಳಲ್ಲಿ ಒಟ್ಟು 1.50 ಕೋಟಿ ರೂ. ವೆಚ್ಚದ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಸೋಮವಾರ ಚಾಲನೆ ನೀಡಿದರು. ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ, ಮುಜರಾಯಿ ಇಲಾಖೆ ವಿಶೇಷ ಅನುದಾನದಲ್ಲಿ ವಿವಿಧ ದೇವಾಲಯಗಳ ಜೀರ್ಣೋದ್ಧಾರ ಕಾಮಗಾರಿಗಳಿಗೆ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು.

10 ಲಕ್ಷ ರೂ. ವೆಚ್ಚದಲ್ಲಿ ಲೋಕನಾಯಕನಗರದ ಈಶ್ವರ ದೇವಸ್ಥಾನದ ಅಭಿವೃದ್ಧಿ, 10 ಲಕ್ಷ ರೂ. ವೆಚ್ಚದಲ್ಲಿ ಬಸವನಗುಡಿ ಬಸವೇಶ್ವರ ದೇವಸ್ಥಾನದ ಮುಂದುವರೆದ ಅಭಿವೃದ್ಧಿ, 5 ಲಕ್ಷ ರೂ. ವೆಚ್ಚದಲ್ಲಿ ಹೆಬ್ಬಾಳ್ ಕಾಲೋನಿಯ ಪಟ್ಟಲದಮ್ಮ ದೇವಸ್ಥಾನದ ಅಭಿವೃದ್ಧಿ, 5 ಲಕ್ಷರೂ ವೆಚ್ಚದಲ್ಲಿ ಇಲ್ಲಿನ ದೊಡ್ಡತಾಯಮ್ಮ ದೇವಸ್ಥಾನದ ಅಭಿವೃದ್ಧಿ ಸೇರಿದಂತೆ ಒಟ್ಟು 30 ಲಕ್ಷ ರೂ. ವೆಚ್ಚದ ಕಾಮಗಾರಿಗಳಿಗೆ ಶಾಸಕರು ಚಾಲನೆ ನೀಡಿದರು.

ಬಳಿಕ 65 ಲಕ್ಷ ರೂ. ವೆಚ್ಚದಲ್ಲಿ ಕುಂಬಾರ ಕೊಪ್ಪಲು ಟೋಲ್‌ಗೇಟ್ ವೃತ್ತದ ನವೀಕರಣ (ಜಯದೇವ ಆಸ್ಪತ್ರೆ ಕೌಂಪೌಂಡ್ ಗೋಡೆ ಸಮೀಪ) ಕಾಮಗಾರಿಗೂ ಭೂಮಿ ಪೂಜೆ ನೆರವೇರಿಸಿದರು. ಲೋಕೋಪಯೋಗಿ ಇಲಾಖೆಯ ಅನುದಾನ 4.11 ಕೋಟಿ ರೂ. ವೆಚ್ಚದಲ್ಲಿ ವಾರ್ಡ್ 42ರ ವಿಶ್ವಮಾನವ ಜೋಡಿ ರಸ್ತೆಯ ಮುರುಗನ್ ಮೆಡಿಕಲ್ಸ್‌ನಿಂದ ಸರಸ್ವತಿಪುರಂ ಬಡಾವಣೆಯಲ್ಲಿ ಹಾದು ಹೋಗಿರುವ ಕಾಮಾಕ್ಷಿ ಆಸ್ಪತ್ರೆ ರಸ್ತೆ, ನ್ಯೂ ಕಾಂತರಾಜ ಅರಸ್ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ 55 ಲಕ್ಷ ರೂ. ವೆಚ್ಚದಲ್ಲಿ ಇಲ್ಲಿನ ವಿವಿಧ ಅಡ್ಡ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕರು ಗುದ್ದಲಿ ಪೂಜೆ ನೆರವೇರಿಸಿದರು.

ಪಾಲಿಕೆ ಸದಸ್ಯರಾದ ಉಷಾ ಕುಮಾರ್, ಪೈಲ್ವಾನ್ ಶ್ರೀನಿವಾಸ್, ಎಸ್.ಬಿ.ಎಂ.ಮಂಜು, ಶಿವಕುಮಾರ್, ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪುನೀತ್, ಮುಖಂಡರಾದ ರಾಮೇಗೌಡ, ಮರಿದಾಸೇಗೌಡ, ಸಂಜೀವಿನಿಕುಮಾರ್, ಅರುಣ್, ರಾಮು ಆರ್ಟ್ಸ್ ಮಂಜು, ಶ್ರೀನಿವಾಸಗೌಡ, ಲೋಕೇಶ್, ಮಹೇಂದ್ರ, ಶುಭಮಂಗಳ, ಸತ್ಯವತಿ, ಮಮತಾ, ಪ್ರಕಾಶ್, ರವಿ, ಡಿ.ಸಿ.ನವೀನ್, ಕರಿಬಸಪ್ಪ, ನಾಗಪ್ಪ, ಬೆಟ್ಟೇಗೌಡ, ದಿನೇಶ್, ವೆಂಕಟೇಶ್, ಬಸವರಾಜು, ನರಸಿಂಹ, ಅಶ್ವಥ್‌ಗೌಡ, ಭೈರಪ್ಪ ಸರ್ವೇಶ, ಪ್ರವೀಣ್, ಶಿವಕುಮಾರ್, ಕೃಷ್ಣಪ್ಪ, ದೊಡ್ಡಲಿಂಗಣ್ಣ, ಮಂಜು, ಲಕ್ಷ್ಮೀನಾರಾಯಣ, ಗೋಪಾಲ್, ಚನ್ನಪ್ಪ, ಸಂಜೀವ, ಚಂದ್ರು, ಗುತ್ತಿಗೆದಾರ ಬಿ.ಡಿ.ದಿನೇಶ್ ಮತ್ತಿತರರು ಹಾಜರಿದ್ದರು.

ಅಭಯಾಂಜನೇಯ ಏಕಶಿಲಾ ಮೂರ್ತಿ ಗಣಪತಿ ಸಚ್ಚಿದಾನಂದ ಆಶ್ರಮದಿಂದ ರಾಘವೇಂದ್ರನಗರದ ಶ್ರೀ ಅಯ್ಯಪ್ಪಸ್ವಾಮಿ ದೇವಾಲಯಕ್ಕೆ ಸ್ಥಳಾಂತರ




ಮೈಸೂರು, ಡಿ.19(ಎಸ್‌ಬಿಡಿ)– ಮೈಸೂರಿನ ರಾಘವೇಂದ್ರನಗರದ ಪಾಳ್ಯಂ ಶ್ರೀ ಶಾಸ್ತಾ ಪೀಠಂನ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದ ಆವರಣದಲ್ಲಿ ಪ್ರತಿಷ್ಠಾಪಿಸಲಿರುವ ಶ್ರೀ ಅಭಯಾಂಜನೇಯ ಏಕಶಿಲಾ ಮೂರ್ತಿಯನ್ನು ಶ್ರೀ ಅವಧೂತ ದತ್ತಪೀಠದ ಶ್ರೀಗಣಪತಿ ಸಚ್ಚಿದಾನಂದ ಆಶ್ರಮದಿಂದ ಮೆರವಣಿಗೆ ಮೂಲಕ ಸೋಮವಾರ ಕೊಂಡೊಯ್ಯಲಾಯಿತು.

ಪೀಠ ಸೇರಿದಂತೆ 9 ಅಡಿ ಎತ್ತರದ ಕೃಷ್ಣಶಿಲೆಯ ಶ್ರೀ ಅಭಯಾಂಜನೇಯ ಏಕಶಿಲಾ ಮೂರ್ತಿಯನ್ನು ಇಂದು ಬೆಳಗ್ಗೆ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಕಾರ್ಯಸಿದ್ಧಿ ಶ್ರೀ ಆಂಜನೇಯ ಕ್ಷೇತ್ರದಿಂದ ಶಾಸ್ತ್ರೋಕ್ತ ವಿಧಿವಿಧಾನಗಳೊಂದಿಗೆ ಮೆರವಣಿಗೆ ಮೂಲಕ ಸ್ಥಳಾಂತರಿಸಲಾಯಿತು.

ಆಶ್ರಮದ ಕಿರಿಯ ಶ್ರೀಗಳಾದ ಶ್ರೀ ದತ್ತವಿಜಯಾನಂದತೀರ್ಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ನೆರವೇರಿದ ಈ ಕೈಂಕರ್ಯದಲ್ಲಿ ಮೇಯರ್ ಶಿವಕುಮಾರ್, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಮಾರುತಿರಾವ್ ಪವಾರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರ ಪಾಲಿಕೆ ಸದಸ್ಯರಾದ ಬಿ.ವಿ.ಮಂಜುನಾಥ್, ಪ್ರಮಿಳಾ ಭರತ್, ಮೈಸೂರು ಜಿಲ್ಲಾ ಬ್ರಾಹ್ಮಣರ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಧಾರ್ಮಿಕ ಮುಖಂಡ ಡಾ.ಕೆ.ರಘುರಾಮ್ ವಾಜಪೇಯಿ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್ ಕುಮಾರ್, ಬಿಜೆಪಿ ಮುಖಂಡೆ ಸವಿತಾ ಘಾಟ್ಕೆ ಮತ್ತಿತರರು ಭಾಗಿಯಾಗಿದ್ದರು.

ಭಾರತ ನನ್ನ ಶಾಶ್ವತ ನಿವಾಸ: ದಲೈಲಾಮಾ



ನವದೆಹಲಿ: ಭಾರತ ಉತ್ತಮ ಜಾಗವಾಗಿದ್ದು, ಇದು ನನ್ನ ಶಾಶ್ವತ ನಿವಾಸವಾಗಿದೆ. ಇದರಿಂದಾಗಿ ನಾವು ಭಾರತಕ್ಕೆ ಆದ್ಯತೆಯನ್ನು ನೀಡುತ್ತೇವೆ ಎಂದು ಟಿಬೆಟಿಯನ್ ಆಧ್ಯಾತ್ಮಿಕ ಗುರು ದಲೈಲಾಮಾ ಹೇಳಿದರು. ಹಿಮಾಚಲ ಪ್ರದೇಶದ ಕಾಂಗ್ರಾ ವಿಮಾನ ನಿಲ್ದಾಣದಲ್ಲಿ ಚೀನಾ ಘರ್ಷಣೆಯ ಕುರಿತು ಪ್ರತಿಕ್ರಿಯಿಸಿದ ಅವರು, ಯುರೋಪ್, ಆಫ್ರಿಕಾ ಮತ್ತು ಏಷ್ಯಾ ರಾಷ್ಟ್ರಗಳು ಸುಧಾರಣೆಗೊಳ್ಳುತ್ತಿವೆ. ಅದೇ ರೀತಿ ಚೀನಾವೂ ಹೊಂದಿಕೊಳ್ಳುತ್ತಿದೆ. ಆದರೆ ಚೀನಾಕ್ಕೆ ಹಿಂತಿರುಗಲು ಯಾವುದೇ ಅರ್ಥವಿಲ್ಲ. ನನಗೆ ಭಾರತವು ಉತ್ತಮ ಸ್ಥಳವಾಗಿದ್ದು, ಇದು ನನ್ನ ಶಾಶ್ವತ ನಿವಾಸವಾಗಿದೆ. ಇದಕ್ಕೆ ನಾನು ಹೆಚ್ಚಿನ ಆದ್ಯತೆ ನೀಡುತ್ತೇನೆ ಎಂದು ತಿಳಿಸಿದರು.

ಡಿ. 9ರಂದು ಭಾರತ– ಚೀನಾ ಘರ್ಷಣೆ ಹಿನ್ನೆಲೆಯಲ್ಲಿ ಈ ಹೇಳಿಕೆ ನೀಡಿದ್ದಾರೆ. ಡಿ.9 ರಂದು ಅರುಣಾಚಲ ಪ್ರದೇಶದಲ್ಲಿ ತವಾಂಗ್‌ನ ವಾಸ್ತವಿಕ ನಿಯಂತ್ರಣ ರೇಖೆಯ ಬಳಿ ಚೀನಿಯರು ಭೂಸ್ವಾಧೀನಕ್ಕೆ ಯತ್ನಿಸಿದ್ದು, ಭಾರತೀಯ ಸೈನಿಕರು ಹಿಮ್ಮೆಟ್ಟಿಸಿದರು. ಭಾರತೀಯ ಸೇನಾ ಕಮಾಂಡರ್‌ಗಳ ಸಮಯೋಚಿತ ಹಸ್ತಕ್ಷೇಪದಿಂದಾಗಿ ಚೀನಾ ಸೈನಿಕರು ತಮ್ಮ ಸ್ಥಾನಕ್ಕೆ ಮರಳಿದರು. ಅಲ್ಲದೇ ಸೇನಾ ಕಮಾಂಡರ್‌ಗಳ ಸಭೆಯಲ್ಲಿ ಗಡಿಯಲ್ಲಿ ಶಾಂತಿ ಕಾಪಾಡುವಂತೆ ಕೇಳಿಕೊಂಡರು. ದಲೈಲಾಮಾ ದೆಹಲಿಯಲ್ಲಿ 2–3 ದಿನಗಳ ಕಾಲ ಇರಲಿದ್ದು, ನಂತರ ಅವರು ಆಧ್ಯಾತ್ಮಿಕ ಬೋಧನೆಗಳು ಮತ್ತು ಇತರ ಕಾರ್ಯಕ್ರಮಗಳಿಗಾಗಿ ಬಿಹಾರದ ಬೋಧಗ್ಯಾಕ್ಕೆ ಹೋಗುತ್ತಾರೆ. ದೆಹಲಿಯಲ್ಲಿ ಕೆಲವು ಸಭೆಗಳು ಮತ್ತು ಕಾರ್ಯಕ್ರಮ ಗಳನ್ನು ಹೊರತುಪಡಿಸಿ, ದೆಹಲಿಯಲ್ಲಿ ಆರೋಗ್ಯ ತಪಾಸಣೆ ನಡೆಯಲಿದೆ.

ಗ್ರಾಪಂ ಸದಸ್ಯರ ಗೌರವ ಧನ ಹೆಚ್ಚಳ: ಸರ್ಕಾರಕ್ಕೆ ಅಭಿನಂದನೆ


ಮೈಸೂರು, ಡಿ.19– ಗ್ರಾಮ ಪಂಚಾಯ್ತಿ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರ ಮಾಸಿಕ ಗೌರವ ಧನವನ್ನು ದುಪ್ಪಟ್ಟುಗೊಳಿಸಿದ ರಾಜ್ಯ ಸರ್ಕಾರವನ್ನು ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಅರುಣ್ ಕುಮಾರ್ ಗೌಡ ಅಭಿನಂದಿಸಿದ್ದಾರೆ. ಗೌರವ ಧನ ಪರಿಷ್ಕರಿಸಿ ಗ್ರಾಪಂ ಸದಸ್ಯರಿಗೆ 2000, ಉಪಾಧ್ಯಕ್ಷರಿಗೆ 4000 ಹಾಗೂ ಅಧ್ಯಕ್ಷರಿಗೆ 6000 ರೂ. ನಿಗದಿಪಡಿಸಿದ್ದು ಸ್ತುತ್ಯಾರ್ಹ ನಿರ್ಧಾರವಾಗಿದೆ. ಪಾರದರ್ಶಕ ಆಡಳಿತದ ಮೂಲಕ ಗ್ರಾಪಂ ಅಭಿವೃದ್ಧಿಗೆ ಇದು ಪೂರಕವಾಗಲಿದೆ. ಗ್ರಾಮಗಳ ಅಭಿವೃದ್ಧಿ ನಿಟ್ಟಿನಲ್ಲಿ ರಾಜ್ಯ ಮತ್ತು ಕೇಂದ್ರದ ಡಬಲ್ ಇಂಜಿನ್ ಬಿಜೆಪಿ ಸರ್ಕಾರದಿಂದ ಈ ರೀತಿಯ ಮಹತ್ತರ ನಿರ್ಧಾರಗಳನ್ನು ಇನ್ನೂ ನಿರೀಕ್ಷಿಸಬಹುದು. ಗೌರವ ಧನ ಹೆಚ್ಚಿಸಬೇಕೆಂಬುದು ಹಲವು ವರ್ಷಗಳ ಬೇಡಿಕೆ. ಇದನ್ನು ಮನಗಂಡು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈಡೇರಿಸಿದ್ದು, ಇದಕ್ಕೆ ಪಕ್ಷಾತೀತವಾಗಿ ಮೆಚ್ಚುಗೆ ವ್ಯಕ್ತವಾಗಿದೆ ಎಂದು ತಿಳಿಸಿದ್ದಾರೆ.



ಪ್ರಧಾನಿ ಮೋದಿ ಬಗ್ಗೆ ಪಾಕ್ ಸಚಿವನ ಅವಹೇಳನಕಾರಿ ಹೇಳಿಕೆ ಖಂಡಿಸಿ

ಮೈಸೂರಲ್ಲಿ ಬಿಜೆಪಿಯ ವಿವಿಧ ಮೋರ್ಚಾಗಳಿಂದ ಪ್ರತಿಭಟನೆ

ಮೈಸೂರು, ಡಿ.19(ಎಸ್‌ಪಿಎನ್)– ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿರುದ್ಧ ಪಾಕಿಸ್ತಾನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ನೀಡಿರುವ ಅವಹೇಳನಕಾರಿ ಹೇಳಿಕೆಯನ್ನು ಖಂಡಿಸಿ ಬಿಜೆಪಿ ಮೈಸೂರು ನಗರ ಘಟಕದ ಯುವ ಮೋರ್ಚಾ, ಎಸ್ಸಿ ಮೋರ್ಚಾ, ಮಹಿಳಾ ಮೋರ್ಚಾ ಪದಾಧಿಕಾರಿಗಳು ಜಿಲ್ಲಾ ನ್ಯಾಯಾಲಯದ ಎದುರಿನ ಮಹಾತ್ಮಗಾಂಧಿ ಪುತ್ಥಳಿ ಬಳಿ ಸೋಮವಾರ ಪ್ರತಿಭಟನೆ ನಡೆಸಿದರು.



ಪ್ರತಿಭಟನೆ ನೇತೃತ್ವ ವಹಿಸಿದ ನಗರ ಯುವ ಮೋರ್ಚಾ ಅಧ್ಯಕ್ಷ ಎಂ.ಜೆ.ಕಿರಣ್ ಗೌಡ, ಮಹಿಳಾ ಅಧ್ಯಕ್ಷೆ ಹೇಮಾ ನಂದೀಶ್, ಎಸ್ಸಿ ಮೋರ್ಚಾ ಅಧ್ಯಕ್ಷ ಈಶ್ವರ್ ನೇತೃತ್ವದಲ್ಲಿ ಬಿಲಾವಲ್ ಭುಟ್ಟೋ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ, ತೀವ್ರ ಆಕ್ರೋಶ ಹೊರಹಾಕಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಪ್ರತಿಭಟನಾಕಾರರು, ಪ್ರಧಾನಿ ನರೇಂದ್ರ ಮೋದಿ ವಿಶ್ವ ಮೆಚ್ಚಿದ ನಾಯಕ. ಇತ್ತೀಚೆಗೆ ಜಿ 20 ನೇತೃತ್ವ ವಹಿಸಿ ವಿಶ್ವವೇ ಒಂದು ಕುಟುಂಬ ಸಂದೇಶ ಸಾರಿ, ಅದರಂತೆ ಕೆಲಸ ಮಾಡುತ್ತಿರುವ ಜಗಮೆಚ್ಚಿದ ನಾಯಕ ಅಂತಹ ನಾಯಕರನ್ನು ಪಾಕಿಸ್ತಾನದ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ಅವಹೇಳನಕಾರಿಯಾಗಿ ಮಾತನಾಡಿರುವುದನ್ನು ದೇಶದ ಪ್ರತಿಯೊಬ್ಬ ನಾಗರಿಕನು ಖಂಡಿಸಬೇಕು ಎಂದು ಆಗ್ರಹಿಸಿದರು.

ನರೇಂದ್ರ ಮೋದಿಜೀಯವರು, ಎಲ್ಲಾ ವೇದಿಕೆಗಳಲ್ಲಿ ಭಯೋತ್ಪಾದನೆ ಧಿಕ್ಕರಿಸಲು ವಿಶ್ವ ಸಮುದಾಯಕ್ಕೆ ಕರೆ ನೀಡಿದ್ದಾರೆ. ಕೋವಿಡ್ ಸಂದರ್ಭದಲ್ಲಿ ನಮ್ಮ ದೇಶದ ಜನರ ಕಾಳಜಿ ಜೊತೆಗೆ ನೆರೆಹೊರೆ ಸೇರಿದಂತೆ ಇತರೆ ರಾಷ್ಟ್ರಗಳಿಗೂ ನೆರವು ನೀಡಿ, ವಿಶ್ವದ ಗಮನ ಸೆಳೆದಿದ್ದಾರೆ. ಭಾರತೀಯ ಪರಂಪರೆ ಭಾಗವಾಗಿರುವ ಯೋಗವನ್ನು 'ವಿಶ್ವ ಯೋಗ ದಿನಾಚರಣೆ' ಮೂಲಕ ವಿಶ್ವಾದ್ಯಂತ ಜನಪ್ರಿಯಗೊಳಿಸಿದ ಕೀರ್ತಿ ನಮ್ಮ ಪ್ರಧಾನಿಗೆ ಸಲ್ಲಬೇಕು. ಈ ನಿಟ್ಟಿನಲ್ಲಿ ಭಾರತವನ್ನು ವಿಶ್ವಗುರುವಾಗಿಸಲು ಕೆಲಸ ಮಾಡುತ್ತಿದ್ದಾರೆ. ಅಂತಹ ನಾಯಕನ ಬಗ್ಗೆ ಪಾಕಿಸ್ತಾನ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ನೀಡಿರುವ ಹೇಳಿಕೆ ಪಾಕಿಸ್ತಾನ ಜನರ ಮನಸ್ಥಿತಿ ತೋರುತ್ತದೆ ಎಂದು ತೀವ್ರ ವಾಗ್ದಾಳಿ ನಡೆಸಿದರು.

ಪಾಕಿಸ್ತಾನವು ಭಯೋತ್ಪಾದನೆ ನೀತಿಯನ್ನು ತನ್ನ ಆಡಳಿತದ ನೀತಿಯನ್ನಾಗಿ ಅಳವಡಿಸಿಕೊಂಡಂತೆ ಭಾಸವಾಗುತ್ತಿದ್ದು, ಇದು ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೋ ಹೇಳಿಕೆಯಿಂದ ಸ್ಪಷ್ಟವಾಗಿದೆ ಎಂದು ಪ್ರತಿಭಟನಾಕಾರರು ದೂರಿದರು. ಪ್ರತಿಭಟನೆಯಲ್ಲಿ ಯುವ ಮೋರ್ಚಾ ಮುಖಂಡರಾದ ಅರಸು, ಉಪಾಧ್ಯಕ್ಷರಾದ ಸಚಿನ್, ಪುನೀತ್, ಕಾರ್ತಿಕ್, ಮರಿಯಪ್ಪ ಕೆಂಚ ಮಧು, ನಿಶಾಂತ, ಯುವ ಮುಖಂಡರಾದ ಸಚಿನ್ ಗೌಡ, ಮಧು, ಲೋಹಿತ್ ಮಹಿಳಾ ಪ್ರಧಾನ ಕಾರ್ಯದರ್ಶಿಗಳಾದ ರೇಣುಕಾ, ತನುಜಾ, ಶುಭಾ ಮತ್ತಿತರು ಭಾಗವಹಿಸಿದ್ದರು.

ಮೈಸೂರು ಮಿತ್ರ ಮಂಗಳವಾರ 20 ಡಿಸೆಂಬರ್ 2022

ಪಕ್ಷದ ಗೆಲುವಿಗೆ ಹಳ್ಳಿಗಳಿಂದಲೇ ಜನಾಶೀರ್ವಾದ ಯಾತ್ರೆ

ಕಾರ್ಯಕರ್ತರ ಸಭೆಯಲ್ಲಿ ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ತಿ.ನರಸೀಪುರ, ಡಿ.19– ಕಾಂಗ್ರೆಸ್ ಅವಧಿಯಲ್ಲಿ ಹಳ್ಳಿಗಳಲ್ಲಿ ಆದ ಅಭಿವೃದ್ಧಿ ಕೆಲಸಗಳನ್ನು ಜನರ ಮುಂದಿಡೋಣ. ಅಲ್ಲದೇ ಉಳಿದಿರುವ ಬಾಕಿ ಕಾಮಗಾರಿ ಪೂರ್ಣಗೊಳಿಸಲು ಹಾಗೂ ಪಕ್ಷದ ಗೆಲುವಿಗೆ ಹಳ್ಳಿಗಳಿಂದಲೇ ಜನಾಶೀರ್ವಾದ ಯಾತ್ರೆ ಆರಂಭಿಸೋಣ ಎಂದು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ರಂಗಸಮುದ್ರ ಬಳಿಯ ಸುಮಂಗಲಿ ಕಲ್ಯಾಣ ಮಂಟಪದಲ್ಲಿ ಸೋಮವಾರ ನಡೆದ ಬನ್ನೂರು ಟೌನ್, ತುರುಗನೂರು ಹಾಗೂ ಸೋಮನಾಥಪುರ ಜಿಪಂ ಕ್ಷೇತ್ರ ವ್ಯಾಪ್ತಿಯ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯಕ್ಕೆ ಅಪಾಯಕಾರಿಯಾಗಿರುವ ಬಿಜೆಪಿ ಕೋಮುವಾದ ಮತ್ತು ಜೆಡಿಎಸ್ ಅವಕಾಶವಾದಿ ರಾಜಕಾರಣದ ಬಗ್ಗೆ ಜನರಿಗೆ ಜಾಗೃತಿ ಮೂಡಿಸಬೇಕು ಎಂದು ಕರೆ ನೀಡಿದರು.

ಕಾನೂನು ಅಡ್ಡಿಯಾದರೂ ಕಾವೇರಿ ನದಿಗೆ ಅಣೆಕಟ್ಟೆ ನಿರ್ಮಿಸಿ, 40 ಸಾವಿರ ಜನಸಂಖ್ಯೆ, 28 ಸಾವಿರ ಮತದಾರರನ್ನು ಹೊಂದಿರುವ ಬನ್ನೂರು ಪಟ್ಟಣಕ್ಕೆ ದಿನದ 24 ತಾಸು ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿದೆ. ಅಲ್ಲದೇ 2ನೇ ಹಂತದಲ್ಲಿ ಒಳಚರಂಡಿ ನಿರ್ಮಾಣಕ್ಕೆ ಅನುದಾನ ನೀಡಿದ್ದೇವು. ಯಾರೂ ಕೇಳದಿದ್ದರೂ ಮತ್ತೊಂದು ಸೇತುವೆ ನಿರ್ಮಾಣಕ್ಕೂ ಅನುದಾನ ನೀಡಲಾಗಿತ್ತು. ಹೋಬಳಿ ವ್ಯಾಪ್ತಿಯಲ್ಲಿ 400ಕ್ಕೂ ಹೆಚ್ಚು ಅಕ್ರಮ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲಾಯಿತು. ಅಷ್ಟು ಕುಟುಂಬಗಳು ಓಟ್ ಹಾಕಿದ್ದರು ಗೆದ್ದು ಬಿಡುತ್ತಿದ್ದೆ. ಶಾಸಕನಾಗಿದ್ದರೆ ಸೇತುವೆ ಕಾಮಗಾರಿ ಪೂರ್ಣಗೊಳ್ಳುತ್ತಿತ್ತು. ಕೆಲಸವೇ ತಿಳಿಯದ, ಅಭಿವೃದ್ಧಿ ಬಗ್ಗೆ ಬದ್ಧತೆಯೇ ಇಲ್ಲದ ವ್ಯಕ್ತಿಯನ್ನು ಜನ ಆಯ್ಕೆ ಮಾಡಿದರು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ರಾಜಕೀಯ ಅಧಿಕಾರ ಪಡೆದ ನನಗೆ ಜನರೆಂದರೆ ಗೌರವದ ಜೊತೆಗೆ ಪ್ರೀತಿ. ಅಭಿವೃದ್ಧಿ, ಜನಪರ ಯೋಜನೆಗಳಿಗೆ ಪ್ರಾಮಾಣಿಕವಾಗಿ ದುಡಿಯುತ್ತಿದ್ದ ಹಿನ್ನೆಲೆಯಲ್ಲಿ ನೋಡಲು ಬರುತ್ತಿದ್ದ ಜನರನ್ನು ನಿರ್ಲಕ್ಷಿಸುತ್ತಿದ್ದೆ ಎಂಬುದನ್ನು ವ್ಯಾಪಕವಾಗಿ ಅಪಪ್ರಚಾರ ಮಾಡಲಾಯಿತು. ಹಿಂದೆ ಜೊತೆಯಲ್ಲಿದ್ದ ಬನ್ನೂರಿನ ಮತ್ತು ತಲಕಾಡಿನ ಗುಂಪುಗಳ ದಂಡ ನಾಯಕರಿಂದಲೂ ಚುನಾವಣೆಯಲ್ಲಿ ಹಿನ್ನೆಡೆಯಾಯಿತು. ಆಗಿರುವ ತಪ್ಪು ತಿದ್ದಿಕೊಂಡು ಮುಖಂಡರು ಹಾಗೂ ಕಾರ್ಯಕರ್ತರು ಜತೆಯಾಗಿ ನಡೆಯೋಣ ಎಂದರು.

ಮಾಜಿ ಶಾಸಕ ಎಸ್.ಕೃಷ್ಣಪ್ಪ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಆಡಳಿತದಿಂದ ಬಡವರು ಮತ್ತು ಮಧ್ಯಮ ವರ್ಗದವರು ಬಸವಳಿದು ಹೋಗಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಪರ ಅಲೆ ಇರುವುದರಿಂದ ಕ್ಷೇತ್ರದಲ್ಲಿ ಪಕ್ಷದ ಗೆಲುವಿಗೆ ಸಂಘಟಿತರಾಗಿ ದುಡಿಯೋಣ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಸಹಕಾರ ಮಹಾ ಮಂಡಳದ ನಿರ್ದೇಶಕ ವೈ.ಎನ್.ಶಂಕರೇಗೌಡ, ಮೈಮುಲ್ ನಿರ್ದೇಶಕ ಆರ್.ಚಲುವರಾಜು, ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ, ಬನ್ನೂರು ಪುರಸಭಾಧ್ಯಕ್ಷೆ ಭಾಗ್ಯಶ್ರೀ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಡಿ.ಬಸವರಾಜು, ಬಿ.ಚನ್ನಕೇಶವ, ಪಿಎಸಿಎಸ್ ಅಧ್ಯಕ್ಷ ರಮೇಶ್, ಮಹಿಳಾಧ್ಯಕ್ಷೆ ವೀಣಾ, ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ಹಿಂ.ವರ್ಗಗಳ ಅಧ್ಯಕ್ಷ ಎ.ಎನ್.ಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ರಾಮಕೃಷ್ಣ, ಮಾಜಿ ಸದಸ್ಯ ರಾಮಲಿಂಗಯ್ಯ, ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಜೆ.ಶಿವಸ್ವಾಮಿ, ಗುತ್ತಿಗೆದಾರರಾದ ಕೆ.ಎಂ.ಮಧುಕುಮಾರ, ಸಿದ್ದೇಗೌಡ, ಬಸವನಹಳ್ಳಿ ಮಹೇಂದ್ರ, ಗ್ರಾಪಂ ಸದಸ್ಯರಾದ ಶ್ರೀಕಾಂತ್, ಎ.ಎನ್.ಮಹೇಶ್, ಮಾಜಿ ಅಧ್ಯಕ್ಷರಾದ ಕೃಷ್ಣೇಗೌಡ, ಎಸ್.ರಾಜೇಶ್, ಮಾಜಿ ಸದಸ್ಯ ಅಶೋಕ, ಮುಖಂಡರಾದ ಸ್ವಾಮಿಗೌಡ, ಕೆ.ಸಿ.ಮಹದೇವು, ಸೋಸ್ಲೆ ಮಹದೇವಸ್ವಾಮಿ, ಚಿನ್ನಸ್ವಾಮಿ, ರಂಗಸ್ವಾಮಿ ಇನ್ನಿತರರಿದ್ದರು.

ಪ್ರತಿಯೊಂದು ಮತವೂ ಅಮೂಲ್ಯ

ಸಿದ್ದರಾಮಯ್ಯ ಸಿಎಂ ಆಗಿದ್ದಾಗ ಸಚಿವರಾಗಿದ್ದ ಡಾ.ಹೆಚ್.ಸಿ.ಮಹದೇವಪ್ಪನವರು ಕ್ಷೇತ್ರಕ್ಕೆ ಸಾವಿರಾರು ಕೋಟಿ ಅನುದಾನ ತಂದಿದ್ದರಿಂದ ಬನ್ನೂರು ಟೌನ್ ಸೇರಿದಂತೆ ಪ್ರತಿಯೊಂದು ಹಳ್ಳಿ ಅಭಿವೃದ್ಧಿಯಾಗಿವೆ. ಚುನಾವಣೆಯಲ್ಲಿ ಪ್ರತಿಯೊಂದು ಮತವೂ ಅಮೂಲ್ಯ. ಹೀಗಾಗಿ ಕಾರ್ಯಕರ್ತರು ಪಕ್ಷ ಸಂಘಟಿಸಬೇಕು.

–ಸುನೀಲ್ ಬೋಸ್, ಯುವ ಮುಖಂಡ.



ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸಮೀಪದ ನಿರಂಗಾಲ ಗ್ರಾಮದಲ್ಲಿ 20 ಲಕ್ಷ ರೂ. ವೆಚ್ಚದ ಸಿಸಿ ರಸ್ತೆ ಕಾಮಗಾರಿಗೆ ಶಾಸಕ ಕೆ.ಮಹದೇವ್ ಚಾಲನೆ ನೀಡಿದರು. ಈ ವೇಳೆ ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮುಖಂಡ ನಾಗೇಂದ್ರ, ಜಿಪಂ ಮಾಜಿ ಸದಸ್ಯ ಶಿವಣ್ಣ ಸೇರಿದಂತೆ ಇನ್ನಿತರರಿದ್ದರು.

ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ವಿದ್ಯಾರ್ಥಿಗಳ ಪ್ರತಿಭಟನೆ



ನಂಜನಗೂಡು, ಡಿ.19– ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಎನ್ಎಸ್‌ಯುಐ ವಿದ್ಯಾರ್ಥಿ ಸಂಘಟನೆಗಳ ಸಹಯೋಗದಲ್ಲಿ ಪದವಿ ಕಾಲೇಜು ವಿದ್ಯಾರ್ಥಿಗಳು ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಸರ್ಕಾರಿ ಪದವಿ ಕಾಲೇಜು ಬಳಿ ಸಂಘಟನೆಗೊಂಡ ಪದವಿ ವಿದ್ಯಾರ್ಥಿಗಳು ತಾಲೂಕು ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಧರಣಿ ನಡೆಸಿದರಲ್ಲದೆ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ವಿದ್ಯಾರ್ಥಿ ದಯಾನಂದ ಮಾತನಾಡಿ, ಕಾಲೇಜುಗಳಲ್ಲಿ ಪ್ರವೇಶ ಶುಲ್ಕ ಹೆಚ್ಚು ವಸೂಲಿ ಮಾಡಲಾಗುತ್ತಿದೆ. ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹಧನ ಬಾರದಿರುವುದು, ಸರ್ಕಾರ ಪ್ರಥಮ ಬಿಎ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಲ್ಯಾಪ್‌ಟಾಪ್ ವಿತರಣೆ ನಿಲ್ಲಿಸಿರುವುದು ಮತ್ತು ಗ್ರಾಮೀಣ ಭಾಗದಲ್ಲಿ ಬಸ್ ಸಮಸ್ಯೆ ಹೆಚ್ಚಳ, ಬಸ್ ಪಾಸ್ ವಿತರಿಸದಿರುವುದು ಸೇರಿದಂತೆ ನಮ್ಮ ಬೇಡಿಕೆಗಳನ್ನು ಈಡೇರಿಸಬೇಕು. ಇಲ್ಲದಿದ್ದರೇ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದರು.

ಈ ವೇಳೆ ವಿದ್ಯಾರ್ಥಿಗಳು ತಹಸೀಲ್ದಾರ್ ಎಂ.ಶಿವಮೂರ್ತಿ ಅವರಿಗೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್, ನಿಮ್ಮ ಬೇಡಿಕೆಗಳನ್ನು ಸರ್ಕಾರಕ್ಕೆ ತಲುಪಿಸುತ್ತೇವೆ. ಅಲ್ಲದೇ ಸ್ಥಳೀಯ ಸಮಸ್ಯೆಗಳನ್ನು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ ಗಮನಕ್ಕೆ ತಂದು ಬಗೆಹರಿಸುವುದಾಗಿ ತಿಳಿಸಿದರು.

ಪ್ರತಿಭಟನೆಯಲ್ಲಿ ಸುಕುಮಾರ್, ರಫೀಕ್ ಅಲಿ, ಆಸಿಫ್, ಕೌಶಿಕ್, ರೇಣುದಾಸ್, ಮೋಹನ್, ವೀರೇಶ್, ಮಹೇಶ್, ಶಾಲಿನಿ ಸೇರಿದಂತೆ ನೂರಾರು ವಿದ್ಯಾರ್ಥಿಗಳಿದ್ದರು.

ಪ್ರತಿಯೊಬ್ಬರೂ ಭಾಷಾಭಿಮಾನ ಬೆಳೆಸಿಕೊಳ್ಳಿ: ಅನಿಲ್ ಚಿಕ್ಕಮಾದು



ಹೆಚ್.ಡಿ.ಕೋಟೆ, ಡಿ.19– ಕನ್ನಡ ಹಬ್ಬವನ್ನು ಪ್ರತಿಯೊಬ್ಬರೂ ಆಚರಿಸುವ ಮೂಲಕ ಭಾಷಾಭಿಮಾನ ಬೆಳೆಸಿಕೊಳ್ಳಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನಿಂದ ಆಯೋಜಿಸಿದ್ದ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಹಾಗೂ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ನೆಲ, ಜಲ, ಭಾಷೆ ಬಗ್ಗೆ ಗೌರವ ಇಟ್ಟುಕೊಂಡು ಕನ್ನಡದ ಮನಸುಗಳನ್ನು ಕಟ್ಟುವ ಕೆಲಸ ಮಾಡಬೇಕು. ತಾಲೂಕು ಕೇರಳ ಗಡಿಭಾಗದಲ್ಲಿದ್ದು, ಜನರಿಗೆ ನಾವು ಜೊತೆಯಲ್ಲಿದ್ದೇವೆ ಎಂಬ ಭರವಸೆ ಕೊಡಬೇಕಾಗಿದೆ ಎಂದರು.

ಕಳೆದ ವರ್ಷ ಕನ್ನಡ ರಾಜ್ಯೋತ್ಸವವನ್ನು ಬಾವಲಿ ಗ್ರಾಮದಲ್ಲಿ ಆಚರಿಸಿದ್ದೆವು. ಮುಂದಿನ ಜನವರಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಸಮ್ಮೇಳನವನ್ನು ಗಡಿಭಾಗದ ಅಂತರಸಂತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಮಹಾರಾಷ್ಟ್ರ ಗಡಿಭಾಗದಲ್ಲಿ ಮರಾಠಿಗರ ಪುಂಡಾಟಿಕೆ ಜಾಸ್ತಿಯಾಗಿದೆ. ಕನ್ನಡದವರು ಸ್ವಾಭಿಮಾನಿಗಳು ನಮ್ಮ ತಂಟೆಗೆ ಬಂದರೆ ಸುಮ್ಮನೆ ಬಿಡುವುದಿಲ್ಲ. ಸರ್ಕಾರ ಪ್ರತಿ ಅಂಗಡಿ ಮುಂಗಟ್ಟುಗಳ ಮೇಲೆ ಕನ್ನಡ ಭಾಷೆಯಲ್ಲೇ ಬೋರ್ಡ್‌ಗಳನ್ನು ಹಾಕಬೇಕು ಎಂಬ ಹೊಸ ಕಾನೂನನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಕನ್ನಡ ಭಾಷೆಯಲ್ಲಿ 125ಕ್ಕೆ 125 ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಈ ವೇಳೆ ತಾಲೂಕು ಕಸಾಪ ಅಧ್ಯಕ್ಷ ಪ್ರಮೋದ್, ಪುರಸಭಾಧ್ಯಕ್ಷೆ ಅನಿತಾ, ಸ್ಥಾಯಿ ಸಮಿತಿ ಅಧ್ಯಕ್ಷ ವೆಂಕಟೇಶ್, ಸದಸ್ಯರಾದ ಹೆಚ್.ಸಿ.ನರಸಿಂಹಮೂರ್ತಿ, ಸುಹಾಸಿನಿ, ಜಿಲ್ಲಾ ಕಸಾಪ ನಿಕಟ ಪೂರ್ವ ಅಧ್ಯಕ್ಷ ವೈ.ಡಿ.ರಾಜಣ್ಣ, ಚಂದ್ರಶೇಖರ್, ಎಂ.ಶಶಿಧರ್, ನವೀನ್ ಗೌಡ ವೈ.ಎಲ್, ಛಾಯಾಗ್ರಾಹಕ ಸಂಘದ ಅಧ್ಯಕ್ಷ ಶಿವಣ್ಣ, ವರ್ತಕರ ಸಂಘದ ಅಧ್ಯಕ್ಷ ವಿನಯ್ ಭಜರಂಗಿ, ಜೈ ಭೀಮ್ ಆಟೋ ಚಾಲಕರ ಸಂಘದ ಅಧ್ಯಕ್ಷ ಚೆಲುವರಾಜು, ಮಹಾದೇವಸ್ವಾಮಿ ಇತರರಿದ್ದರು.



ಭೇರ್ಯ ಸಮೀಪದ ಬಟಿಗನಹಳ್ಳಿ ಗ್ರಾಮದಲ್ಲಿ ಬಟಿಗನಹಳ್ಳಿ–ಮಿರ್ಲೆ ಗ್ರಾಮದ 1 ಕೋಟಿ ವೆಚ್ಚದ ರಸ್ತೆ ಡಾಂಬರೀಕರಣ ಕಾಮಗಾರಿಗೆ ಶಾಸಕ ಸಾ.ರಾ.ಮಹೇಶ್ ಭೂಮಿ ಪೂಜೆ ನೆರವೇರಿಸಿದರು.

ನಾಗಪುರ ಹಾಡಿಗೆ ಜಿ.ಡಿ.ಹರೀಶ್‌ಗೌಡ ಭೇಟಿ

ಕುಂದುಕೊರತೆ ಆಲಿಕೆ



ಹುಣಸೂರು, ಡಿ.19– ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಾಲೂಕಿನ ನಾಗಪುರ ಹಾಡಿಗೆ ಭೇಟಿ ನೀಡಿ ಕುಂದುಕೊರತೆ ವಿಚಾರಿಸಿದರು.

ನಂತರ ಮಾತನಾಡಿದ ಅವರು, ನನ್ನ ತಂದೆ ಶಾಸಕ ಜಿ.ಟಿ.ದೇವೇಗೌಡರು ನಾಗಪುರ ಗಿರಿಜನ ಹಾಡಿಗೆ ಪ್ರೌಢಶಾಲೆ, ಆಶ್ರಮ ಶಾಲೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ನೀಡಿದ್ದಾರೆ. ಅಲ್ಲದೇ ಗಿರಿಜನ ಹಾಡಿ ಮಹಿಳೆ ಜಾಜಿ ಅವರಿಗೆ ಜಿಪಂ ಟಿಕೆಟ್ ನೀಡಿ ಸದಸ್ಯೆಯನ್ನಾಗಿ ಮಾಡಿ, ಜಿಪಂ ಉಪಾಧ್ಯಕ್ಷೆಯಾಗಿ ಮಾಡಿ ಸಾಮಾಜಿಕ ನ್ಯಾಯ ಒದಗಿಸಿದ್ದಾರೆ. ಹೀಗಾಗಿ ನಿಮ್ಮ ಸಮಸ್ಯೆಗಳು ಏನೇ ಇದ್ದರೂ ಅವುಗಳನ್ನು ಬಗೆಹರಿಸಲಾಗುವುದು ಎಂದರು.

ಇದೇ ವೇಳೆ ಹಾಡಿಯ ಹಲವು ಮುಖಂಡರು ಕಾಂಗ್ರೆಸ್ ಪಕ್ಷ ತೊರೆದು ಜೆಡಿಎಸ್‌ಗೆ ಸೇರ್ಪಡೆಗೊಂಡರು. ನಂತರ ಮಾತನಾಡಿದ ಹಾಡಿ ಮುಖಂಡ ಸಂಜಯ್, ನಾವು ಕಳೆದ 25 ವರ್ಷಗಳಿಂದ ಕಾಂಗ್ರೆಸ್ ಬೆಂಬಲಿಸಿದರೂ ನಮ್ಮ ಗ್ರಾಮದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ನಡೆದಿಲ್ಲ. ಮೂಲ ಸೌಕರ್ಯಗಳಿಂದ ವಂಚಿತ ರಾಗಿದ್ದೇವೆ. ಹೀಗಾಗಿ ಯುವ ಮುಖಂಡ ಹರೀಶ್ ಗೌಡರ ನಾಯಕತ್ವ ಮೆಚ್ಚಿ ಜೆಡಿಎಸ್‌ಗೆ ಸೇರ್ಪಡೆಯಾಗಿದ್ದೇವೆ ಎಂದರು.

ಈ ವೇಳೆ ಹಲವು ಮುಖಂಡರಿದ್ದರು.

ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ



ಸರಗೂರು, ಡಿ.19– ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರುವುದು ಖಚಿತ ಎಂದು ಯುವ ಜೆಡಿಎಸ್ ಜಿಲ್ಲಾಧ್ಯಕ್ಷ ಗಂಗಾಧರಗೌಡ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರೈತರು, ಬಡವರ ಬಗ್ಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಅಪಾರ ಕಾಳಜಿ ಹೊಂದಿದ್ದಾರೆ. ತಂದೆಯಂತೆಯೇ ಕುಮಾರಸ್ವಾಮಿ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದ ವೇಳೆ 25 ಸಾವಿರ ಕೋಟಿ ಸಾಲ ಮನ್ನಾ ಮಾಡುವ ಮೂಲಕ ರೈತರ ಹಿತ ಕಾಯ್ದರು. ಇದೀಗ ರಾಜ್ಯದಲ್ಲಿ ಜೆಡಿಎಸ್‌ಗೆ ಉತ್ತಮ ಬೆಂಬಲ ವ್ಯಕ್ತವಾಗುತ್ತಿದೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಪಕ್ಷದ ಗೆಲುವಿಗಾಗಿ ಕಾರ್ಯಕರ್ತರು ಶ್ರಮಿಸಬೇಕು ಎಂದು.

ಸರಗೂರು ಜೆಡಿಎಸ್ ಅಧ್ಯಕ್ಷ ಜಿ.ಗೋಪಾಲಸ್ವಾಮಿ ಮಾತನಾಡಿ, ಕುಮಾರಸ್ವಾಮಿ ಅವರು ಕೈಗೊಂಡಿರುವ ಪಂಚರತ್ನ ಯಾತ್ರೆಗೆ ಎಲ್ಲಡೆ ಉತ್ತಮ ಬೆಂಬಲ ವ್ಯಕ್ತವಾಗುತ್ತಿದೆ ಎಂದರು.

ಇದೇ ವೇಳೆ ಮಾಜಿ ಶಾಸಕ ಚಿಕ್ಕಣ್ಣ ಹಾಗೂ ಅವರ ಪುತ್ರ ಜಯಪ್ರಕಾಶ್ ಚಿಕ್ಕಣ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಂಗ್ರೆಸ್, ಬಿಜೆಪಿ ಪಕ್ಷಗಳ ಹಲವು ಮುಖಂಡರು ಜೆಡಿಎಸ್‌ಗೆ ಸೇರ್ಪಡೆಗೊಂಡರು. ಜೆಡಿಎಸ್ ಮುಖಂಡರಾದ ನರಸಿಂಹೇಗೌಡ, ನಾಗೇಗೌಡ, ಚಾ.ನಂಜುಂಡಮೂರ್ತಿ, ನಾಗನಾಯಕ, ಸಫಿಉಲ್ಲಾ, ನಜೀರ್, ಲಿಂಗೇಗೌಡ, ಹೆಚ್.ಅನು, ಜಯರಾಮ್, ಪಪಂ ಸದಸ್ಯರಾದ ಎಸ್.ಎಲ್.ರಾಜಣ್ಣ, ಚೈತ್ರ, ಸಣ್ಣತಾಯಮ್ಮ, ನರಸಿಂಹ, ಸಿ.ಬಸವರಾಜು, ಬಸವಣ್ಣ, ಬಸವನಾಯಕ, ಲಿಂಗಾಚಾರ್, ಹೆಚ್.ಎಸ್.ಲಿಂಗರಾಜು, ಎಸ್.ಎ.ನಾಗೇಂದ್ರ, ಚನ್ನಪ್ಪನಾಯಕ, ಮಹೇಂದ್ರ, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಸುಧೀರ್ ಸೇರಿದಂತೆ ಇತರರಿದ್ದರು.

ಯುದ್ಧನೌಕೆ ಮುಳುಗಡೆ: 31 ಜನ ನಾಪತ್ತೆ

ಬ್ಯಾಂಕಾಕ್: ಥಾಯ್ಲೆಂಡ್‌ನ ಕರಾವಳಿಯಲ್ಲಿ ಗಸ್ತು ಕಾರ್ಯಾಚರಣೆ ನಡೆಸುತ್ತಿದ್ದ ಥಾಯ್ ಯುದ್ಧನೌಕೆ ಆಕಸ್ಮಿಕವಾಗಿ ಮುಳುಗಿದೆ. ಈ ದುರಂತದಲ್ಲಿ 75 ಜನರನ್ನು ರಕ್ಷಿಸಲಾಗಿದ್ದು, 31 ಮಂದಿ ನಾಪತ್ತೆಯಾಗಿದ್ದಾರೆ. ನಾಪತ್ತೆಯಾದವರಿಗಾಗಿ ಹಡಗು ಮತ್ತು ಹೆಲಿಕಾಪ್ಟರ್‌ಗಳೊಂದಿಗೆ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ.

ಥಾಯ್ಲೆಂಡ್‌ನ ಪ್ರಚುಪ್ ಖಿರಿ ಖಾನ್ ಪ್ರಾಂತ್ಯದ ಕರಾವಳಿಯಿಂದ 20 ನಾಟಿಕಲ್ ಮೈಲಿ ದೂರದಲ್ಲಿ ಭಾನುವಾರ ಸಂಜೆ HTMS ಸುಖೋಥೈ ಯುದ್ಧ ನೌಕೆ ಗಸ್ತು ಕರ್ತವ್ಯದಲ್ಲಿ ಭಾಗವಹಿಸಿತ್ತು. ಆ ಸಮಯದಲ್ಲಿ ಬಲವಾದ ಗಾಳಿ ಮತ್ತು ಸಮುದ್ರದ ನೀರು ಯುದ್ಧನೌಕೆಗೆ ನುಗ್ಗಿದೆ. ಇದರಿಂದಾಗಿ ಯುದ್ಧ ನೌಕೆಯ ವಿದ್ಯುತ್ ವ್ಯವಸ್ಥೆಗೆ ಹಾನಿಯಾಗಿದೆ.

32 ಪೌರ ಕಾರ್ಮಿಕರ ಹೆಚ್ಚುವರಿ ನೇಮಕಕ್ಕೆ ಸರ್ಕಾರಕ್ಕೆ ಪತ್ರ

ಕುಂದುಕೊರತೆ ಸಭೆಯಲ್ಲಿ ತಾಪಂ ಆಡಳಿತಾಧಿಕಾರಿ ಕೃಷ್ಣಂರಾಜು



ನಂಜನಗೂಡು, ಡಿ.19– ತಾಲೂಕಿನ 45 ಗ್ರಾಪಂಗಳಲ್ಲಿ 111 ಮಂದಿ ಪೌರ ಕಾರ್ಮಿಕರು ಸೇವೆ ಸಲ್ಲಿಸುತ್ತಿದ್ದು, ಹೆಚ್ಚುವರಿಯಾಗಿ 32 ಮಂದಿ ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳಲು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ತಾಪಂ ಆಡಳಿತಾಧಿಕಾರಿ ಕೃಷ್ಣಂರಾಜು ತಿಳಿಸಿದರು.

ನಗರದ ತಾಪಂ ಸಭಾಂಗಣದಲ್ಲಿ ಸೋಮವಾರ ನಡೆದ ಪೌರ ಕಾರ್ಮಿಕರ ಕುಂದುಕೊರತೆ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಪಂಗಳಲ್ಲಿ 7 ಗಂಟೆ ಮಾತ್ರ ಪೌರ ಕಾರ್ಮಿಕರಿಂದ ಕೆಲಸ ಮಾಡಿಸಬೇಕು. ನಿಗದಿತ ಸಮಯಕ್ಕಿಂತ ಹೆಚ್ಚು ಕೆಲಸ ಮಾಡಿಸಿದರೆ ಹೆಚ್ಚುವರಿ ಸಂಬಳ ನೀಡಬೇಕು ಎಂದು ಪಿಡಿಓಗಳಿಗೆ ತಾಕೀತು ಮಾಡಿದರು.

ರಾಜ್ಯ ಪೌರಕಾರ್ಮಿಕರ ಸಂಘದ ರಾಜ್ಯಾಧ್ಯಕ್ಷ ಡಿ.ಆರ್.ರಾಜು ಮಾತನಾಡಿ, ದೇವಿರಮ್ಮನಹಳ್ಳಿಯಲ್ಲಿ ಕಳೆದ 45 ವರ್ಷಗಳಿಂದ 18 ಪೌರಕಾರ್ಮಿಕ ಕುಟುಂಬ ಸೇವೆಯಲ್ಲಿದ್ದು, ಅವರಿಗೆ ನಿವೇಶನದ ಹಕ್ಕುಪತ್ರ ನೀಡಿಲ್ಲ. ದೇವಿರಮ್ಮನಹಳ್ಳಿ ಗ್ರಾಪಂ ಇತ್ತೀಚೆಗೆ ನಗರಸಭಾ ವ್ಯಾಪ್ತಿಗೆ ಸೇರಿದ್ದರಿಂದ ಬೆಲೆಬಾಳುವ ನಿವೇಶನಗಳನ್ನು ಪೌರಕಾರ್ಮಿಕರ ಹೆಸರಿಗೆ ಹಕ್ಕುಪತ್ರ ನೀಡಲು ಕೆಲವರು ಅಡ್ಡಿಯಾಗಿದ್ದಾರೆ. ಗ್ರಾಪಂಗಳಲ್ಲಿ ಜನಸಂಖ್ಯೆಗನುಗುಣವಾಗಿ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಬೇಕು. ಕೋವಿಡ್‌ನಿಂದ ಸಾವಿಗೀಡಾದ ನಂಜಮ್ಮ ಎಂಬ ಪೌರಕಾರ್ಮಿಕ ಮಹಿಳೆ ಕುಟುಂಬಕ್ಕೆ ಪರಿಹಾರ ನೀಡಿಲ್ಲ ಎಂದು ಆರೋಪಿಸಿದರಲ್ಲದೆ ಶೀಘ್ರ ಖಾಲಿ ಇರುವ ಪೌರ ಕಾರ್ಮಿಕ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಒತ್ತಾಯಿಸಿದರು. ಪೌರ ಕಾರ್ಮಿಕ ಮುಖಂಡ ಚೆಲುವರಾಜು ಮಾತನಾಡಿ, ಪೌರ ಕಾರ್ಮಿಕರಿಗೆ ತಿಂಗಳಿಗೆ ಸರಿಯಾಗಿ ಸಂಬಳವಾಗುತ್ತಿಲ್ಲ. ನಿಯಮಿತವಾಗಿ ಆರೋಗ್ಯ ತಪಾಸಣೆ, ಸಮವಸ್ತ್ರ, ಮರಣ ಹೊಂದಿದ ಪೌರ ಕಾರ್ಮಿಕ ಕುಟುಂಬಕ್ಕೆ ಉಪಧನ ಹಾಗೂ ಅನುಕಂಪದ ಆಧಾರದ ಮೇಲೆ ಕೆಲಸ ಕೊಡಬೇಕು ಎಂದು ಆಗ್ರಹಿಸಿದರು.

ಆಡಳಿತಾಧಿಕಾರಿ ಕೃಷ್ಣಂರಾಜು ಮಾತನಾಡಿ, 15ನೇ ಹಣಕಾಸು ನಿಧಿ ಬಳಸಿ ಪ್ರತಿ ತಿಂಗಳು ಪೌರ ಕಾರ್ಮಿಕರಿಗೆ ವೇತನ ಪಾವತಿಸಬೇಕು. ಗ್ರಾಪಂ ಅಧ್ಯಕ್ಷರು ಪೌರ ಕಾರ್ಮಿಕರ ಸಂಬಳದ ವಿಚಾರವಾಗಿ ಅಡ್ಡಿಪಡಿಸಿದರೆ ಮೇಲಾಧಿಕಾರಿಗಳ ಗಮನಕ್ಕೆ ತಂದರೆ ಸೂಕ್ತ ಕ್ರಮ ವಹಿಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ತಾಪಂ ಇಓ ಶ್ರೀನಿವಾಸ್, ವ್ಯವಸ್ಥಾಪಕ ಜನಾರ್ಧನ್, ಕಾರ್ಮಿಕ ಮುಖಂಡರಾದ ಮುರುಗೇಶ್, ಮಂಚಯ್ಯ ಉಪಸ್ಥಿತರಿದ್ದರು.

ರಾಜ್ಯದ ಹಿತರಕ್ಷಣೆಗಾಗಿ ಜೆಡಿಎಸ್ ಬೆಂಬಲಿಸಿ



ಮಲ್ಕುಂಡಿ, ಡಿ.19– ರಾಷ್ಟ್ರೀಯ ಪಕ್ಷಗಳ ದುರಾಡಳಿತದಿಂದ ರಾಜ್ಯದ ಜನತೆ ಬೇಸತ್ತಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ರಾಜ್ಯದ ಹಿತರಕ್ಷಣೆಗಾಗಿ ಜೆಡಿಎಸ್ ಪಕ್ಷವನ್ನು ಬೆಂಬಲಿಸುವಂತೆ ನಂಜನಗೂಡು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಆರ್.ಮಾದೇಶ್ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು, ಕೇಂದ್ರ ಹಾಗೂ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರಗಳು ಯುವಕರಿಗೆ ಉದ್ಯೋಗ ನೀಡುವುದಾಗಿ ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದು ಯಾವುದೇ ಉದ್ಯೋಗಾವಕಾಶ ಕಲ್ಪಿಸದೇ ಯುವಕರನ್ನು ವಂಚಿಸಿವೆ. ಅಲ್ಲದೇ ದಿನನಿತ್ಯ ಬಳಸುವ ಪದಾರ್ಥಗಳ ಬೆಲೆ ಏರಿಕೆ ಮಾಡಿ ಜನರ ಜೀವನದ ಜೊತೆ ಚೆಲ್ಲಾಟವಾಡುತ್ತಿರುವ ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಬೇಕಿದೆ. ಇನ್ನು ರಾಜ್ಯದಲ್ಲಿ ಅತೀ ಹೆಚ್ಚು ಅಧಿಕಾರ ನಡೆಸಿರುವ ಕಾಂಗ್ರೆಸ್ ಯಾವುದೇ ಅಭಿವೃದ್ಧಿ ಕಾರ್ಯ ಮಾಡಿಲ್ಲ. ಆದರೆ ಸಿಕ್ಕ ಅಲ್ಪ ಅವಧಿಯಲ್ಲೇ ರೈತರ ಸಾಲ ಮನ್ನಾ ಸೇರಿದಂತೆ ಹಲವು ಜನಪ್ರಿಯ ಯೋಜನೆಗಳನ್ನು ಜಾರಿಗೊಳಿಸಿ ಉತ್ತಮ ಆಡಳಿತ ನೀಡಿದ ಕುಮಾರಸ್ವಾಮಿ ಅವರು ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿಯಾಗಲೆಂದು ರಾಜ್ಯದ ಜನತೆ ಕಾಯುತ್ತಿದ್ದಾರೆ. ಹೀಗಾಗಿ ಜನತೆ ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಬೆಂಬಲಿಸಲಿದ್ದು, ಕುಮಾರಸ್ವಾಮಿ ಅವರು ಮತ್ತೊಮ್ಮೆ ಮುಖ್ಯಮಂತ್ರಿಯಾಗುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿರುವ ಮಾದೇಶ್ ಅವರು, ನಾನು ನಂಜನಗೂಡು ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದೇನೆ. ಕುಮಾರಸ್ವಾಮಿ ಅವರ ಕೈ ಬಲಪಡಿಸಲು ಜೆಡಿಎಸ್ ಬೆಂಬಲಿಸಿ ಎಂದು ಮನವಿ ಮಾಡಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಹೆಚ್.ಡಿ.ಕೋಟೆ, ಡಿ.19– ತುರ್ತು ಕಾರ್ಯ ಹಿನ್ನೆಲೆಯಲ್ಲಿ ಪಟ್ಟಣ ಸೇರಿದಂತೆ ತಾಲೂಕಿನ ಮೇಟಿಕುಪ್ಪೆ, ಚಕ್ಕೋಡಹಳ್ಳಿ, ಭೀಮನಹಳ್ಳಿ ಹಿರೇಹಳ್ಳಿ, ಅಣ್ಣೂರು ಪಡುಕೋಟೆ, ಸವ್ವೆ, ನಾಗನಹಳ್ಳಿ ಸೇರಿದಂತೆ ಸುತ್ತಮುತ್ತಲ ಗ್ರಾಪಂ ವ್ಯಾಪ್ತಿಯಲ್ಲಿ ಡಿ.20 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆವರೆಗೆ ಹಾಗೂ ಬೆಳಗ್ಗೆ 10 ರಿಂದ 6 ಗಂಟೆವರೆಗೆ ಹ್ಯಾಂಡ್‌ಪೋಸ್ಟ್, ಹೈರಿಗೆ, ಹೆಬ್ಬಲಗುಪ್ಪೆ ಮತ್ತು ನೂರಲಕುಪ್ಪೆ, ಆಲನಹಳ್ಳಿ, ಕ್ಯಾತನಹಳ್ಳಿ, ಜಿ.ಬಿ.ಸರಗೂರು ಸುತ್ತಮುತ್ತಲ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.



ಭಾನುವಾರ ನಿಧನರಾದ ಪತ್ರಕರ್ತ ಕೆ.ಎಸ್.ಪ್ರಕಾಶ್ ಅವರಿಗೆ ಪಿರಿಯಾಪಟ್ಟಣ ಪತ್ರಕರ್ತರ ಸಂಘದಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಸಂಘದ ಅಧ್ಯಕ್ಷ ಸತೀಶ್ ಆರಾಧ್ಯ, ಪತ್ರಕರ್ತರಾದ ಹೆಚ್.ಡಿ.ರಮೇಶ್, ಹೆಚ್.ಕೆ.ಮಹೇಶ್, ಎನ್.ಪಿ.ಹರೀಶ್, ಕೆ.ಆರ್.ಮಹೇಶ್, ಬಿ.ಆರ್.ರಾಜೇಶ್, ಎಸ್.ಅಶೋಕ್, ಸದಾಶಿವ, ಶಾಂಭವಿ, ರಾಜೇಶ, ಪ್ರಸನ್ನ, ವೆಂಕಟೇಶ್, ಸ್ವಾಮಿ ಮತ್ತಿತರರಿದ್ದರು.

ಸುವರ್ಣಸೌಧ ವಿಧಾನಸಭೆಯಲ್ಲಿ ವೀರ ಸಾವರ್ಕರ್ ಭಾವಚಿತ್ರ ಅನಾವರಣಕ್ಕೆ ಸ್ವಾಗತ

ಮೈಸೂರು,ಡಿ.19–ಬೆಳಗಾವಿ ಸುವರ್ಣಸೌಧ ವಿಧಾನಸಭಾ ಸಭಾಂಗಣದಲ್ಲಿ ವೀರ ಸಾವರ್ಕರ್ ಅವರ ಭಾವಚಿತ್ರವನ್ನು ಅನಾವರಣ ಮಾಡಿರುವುದು ಸ್ವಾಗತಾರ್ಹವಾದುದು. ಇಂಥ ನಿರ್ಧಾರವನ್ನು ಕೈಗೊಂಡ ರಾಜ್ಯ ಸರ್ಕಾರ ಅಭಿನಂದನಾರ್ಹ ಎಂದು ಮೈಸೂರು ಸಾವರ್ಕರ್ ಪ್ರತಿಷ್ಠಾನದ ಅಧ್ಯಕ್ಷೆ ಶ್ರೀಮತಿ ಎಸ್.ಯಶಸ್ವಿನಿ ತಿಳಿಸಿದ್ದಾರೆ.



ಸಾರ್ವಕರ್ ಅವರ ವಿಚಾರಧಾರೆ, ಹೋರಾಟ ಹಾಗೂ ಧ್ಯೇಯಗಳನ್ನು ಮತ್ತಷ್ಟು ಜನಸಾಮಾನ್ಯರಿಗೆ ತಲುಪಿಸಬೇಕಾಗಿದೆ. ಪ್ರತಿಯೊಂದು ಶಾಲಾ–ಕಾಲೇಜಲ್ಲಿ, ಸಭೆ–ಸಮಾರಂಭ, ಕಾರ್ಯಕ್ರಮಗಳಲ್ಲಿ ವೀರ ಸಾವರ್ಕರ್ ಅವರ ವಿಚಾರಧಾರೆಗಳನ್ನು ತಲುಪಿಸುವ ಕಾರ್ಯದಲ್ಲಿ ಮೈಸೂರು ಸಾವರ್ಕರ್ ಪ್ರತಿಷ್ಠಾನ ತೊಡಗಿಸಿಕೊಂಡಿದೆ ಎಂದು ಎಸ್.ಯಶಸ್ವಿನಿ ಹೇಳಿದ್ದಾರೆ.

ಸಾರ್ವಜನಿಕ ಸೂಚನೆ

ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಶ್ರೀ. ರಾಮಚಂದ್ರ, ಬಿನ್ ದಿ॥ ಕೆಂಪೇಗೌಡ ಉರುಫ್ ಚಿಕ್ಕವನು ; ಶ್ರೀಮತಿ ಭಾಗ್ಯ, ಕೋಂ ಶ್ರೀ. ರಾಮಚಂದ್ರ ಮತ್ತು ಶ್ರೀಮತಿ ಲಕ್ಷ್ಮಿ. ಬಿನ್ ಶ್ರೀ. ರಾಮಚಂದ್ರ (ಮಾಲೀಕರು); ಇವರುಗಳೊಡನೆ ಜಂಟಿ ಅಭಿವೃದ್ಧಿ ಮಾಡಲು ಇಚ್ಛಿಸಿದ್ದು ಸ್ವತ್ತಿನ ಮಾಲಿಕರು ಪ್ರತಿನಿಧಿಸಿದಂತೆ ಷೆಡ್ಯೂಲ್ ಸ್ವತ್ತು ಅವರ ಸಂಪೂರ್ಣ ಸ್ವಾಧೀನ ಸ್ವತ್ತಾಗಿದ್ದು ಅವರ ವಿನಃ ಬೇರೆ ಯಾರಿಗೂ ಯಾವುದೇ ರೀತಿಯಾದ ಹಕ್ಕು – ಭಾದ್ಯತೆಗಳು ಅಥವಾ ಮೈನರ್ ಹಕ್ಕು, ಜೀವನಾಂಶದ ಹಕ್ಕು ಇರುವುದಿಲ್ಲ ಹಾಗೂ ಷೆಡ್ಯೂಲ್ ಸ್ವತ್ತನ್ನು ಯಾವ ರೀತಿಯಲ್ಲೂ ಪರಭಾರೆ, ಆಧಾರ, ಕರಾರು ಒಪ್ಪಂದ' ಮಾಡಿಕೊಂಡಿಲ್ಲವೆಂದು ಹಾಗೂ ಷೆಡ್ಯೂಲ್ ಸ್ವತ್ತು ಯಾವ ವಿಧವಾದ ಸಾಲ ವಗೈರೆಗಳಿಗೆ ಒಳಪಟ್ಟಿರುವುದಿಲ್ಲ ಮತ್ತು ಯಾವುದೇ ತಂಟೆತಕರಾರುಗಳು, ನ್ಯಾಯಾಲಯದ' ಕೋರ್ಟ್ ಅಟ್ಯಾಚ್‌ಮೆಂಟ್, ಡಿಕ್ರಿವಗೈರೆ ಏನೂ ಇರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಬಗ್ಗೆ' ಯಾರಿಗಾದರೂ ಯಾವುದೇ ರೀತಿಯ ಹಕ್ಕು– ಬಾಧ್ಯತೆ , ಅಭ್ಯಂತರಗಳಿದ್ದಲ್ಲಿ, ಈ ದಿನದಿಂದ ಹತ್ತು (10) ದಿವಸದೊಳಗೆ ಈ ಕೆಳಕಂಡ ವಿಳಾಸಕ್ಕೆ ತಮ್ಮ ಅಭ್ಯಂತರಗಳನ್ನು ದಾಖಲಾತಿಗಳೊಂದಿಗೆ ತಿಳಿಸುವುದು, ತಪ್ಪಿದಲ್ಲಿ ಈ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾರಿಗೂ ಯಾವುದೇ ರೀತಿಯ ಹಕ್ಕು – ಭಾದ್ಯತೆ, ತಂಟೆ–ತಕರಾರು ಹಾಗೂ ಅಭ್ಯಂತರಗಳಿಲ್ಲವೆಂದು ಪರಿಗಣಿಸಿ ನನ್ನ ಕಕ್ಷಿದಾರರು ಮೇಲೆ ತಿಳಿಸಿರುವ ಜಂಟಿ ಅಭಿವೃದ್ಧಿ ಕರಾರು ವಹಿವಾಟನ್ನು ಮುಂದುವರಿಸುವರು

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಬೆಳವಾಡಿ ಗ್ರಾಮದಲ್ಲಿರುವ ಭೂ – ಪರಿವರ್ತನೆಯಾಗಿರುವ ಜಮೀನುಗಳ ವಿವರ :

ಕ್ರಂ.ಸಂ	ಸರ್ವೇ ನಂ.	ಅಧಿಕೃತ ಜ್ಞಾಪನ ಸಂ. /ದಿನಾಂಕ	ವಿಸ್ತೀರ್ಣ	
			ಎಕರೆ	ಗುಂಟೆ
1	340	218485 ದಿನಾಂಕ 23/04/2021	02	00
2	341/2	221657 ದಿನಾಂಕ 08/04/2021	00	24
3	341/3	217793, ದಿನಾಂಕ 06/04/2021	00	20

ಚಕ್ಕುಬಂದಿ			
ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
ಸರ್ವೇ ನಂ. 361	ಸರ್ವೇ ನಂ. 342	ಸರ್ವೇ ನಂ. 339 & 341	ಸರ್ವೇ ನಂ. 360
ಸರ್ವೇ ನಂ. 339	ಸರ್ವೇ ನಂ. 342	ಸರ್ವೇ ನಂ. 341/3	ಸರ್ವೇ ನಂ. 340
ಸರ್ವೇ ನಂ. 339	ಸರ್ವೇ ನಂ. 342	ಸರ್ವೇ ನಂ. 341/4	ಸರ್ವೇ ನಂ. 341/2

ಜಯಂತ್ ಎಂ ಪಟ್ಟಣ್ ಶೆಟ್ಟಿ, ವಕೀಲರು
ಜಯಂತ್ ಪಟ್ಟಣ್‌ಶೆಟ್ಟಿ ಅಸೋಸಿಯೇಟ್ಸ್ ಎಲ್ ಎಲ್ ಪಿ
102, ನೆಲ ಮಹಡಿ, "ರಾಮ್ಸ್ ಇನ್‌ಫ್ಯಾಂಟ್ರಿ ಮ್ಯಾನರ್"
ನಂ. 70 ಇನ್‌ಫ್ಯಾಂಟ್ರಿ ರಸ್ತೆ, ಬೆಂಗಳೂರು – 560 001 ದೂರವಾಣಿ : 080–41238516/ 41238367
ದಿನಾಂಕ : 20-12-2022 ಸ್ಥಳ : ಮೈಸೂರ್

